Mr. SPEAKER.—Order, order. What the member called abnormal situation, he may please come and tell me. I am getting into the chambers and he must have the courtesy to meet me and tell me. Otherwise, he cannot expect me to take any action.

Sri H. SIDDAVEERAPPA.—All of us will come and meet you, Sir.

Sri VATAL NAGARAJ.—Please adjourn the House.

Mr. SPEAKER.—I am now requesting the Deputy Speaker to proceed with the work in the House. I will go to my Chambers and such of the members as desire to meet me are free to do so.

[Mr. DEPUTY SPEAKER in the Chair].

BUDGET ESTIMATES FOR 1967-68—*General Discussion.*

Sri S. R. KANTHI.—Now about discussion, since the Opposition Members are not here, the Members on this side may be called to take part in the discussion.

ಶ್ರೀ ಎ. ಆರ್. ಪಂಚಗಾವಿ (ಅರಬಾವಿ). ಸ್ವಾಮಿ, ಈ ಸಲದ 1967-68ನೇ ಸಾಲಿನ ಬಡ್ಜೆಟ್ಟಿನ ಬಗ್ಗೆ ನಾನು ಸರ್ಕಾರದ ಗಮನವನ್ನು ಸಳೆಯ ಬಸುಸುತ್ತೇನೆ. ಮೊಟ್ಟ ಮೊದಲನೆಯದಾಗಿ ಎಲ್ಲರಿಗೂ ಅತ್ಯಂತ ಮಹತ್ವದ ಪ್ರಶ್ನೆ ಎಂದರೆ, ಭೂಕಂದಾಯದ ರದ್ದಿಯಾತಿಯ ಬಗ್ಗೆ ನಮ್ಮ ರಾಜ್ಯದಲ್ಲಿ ಅನೇಕ ಕಡೆ ಊಹಾಪೋಹೆಗಳು ನಡೆಯುತ್ತಿವೆ. ಸರ್ಕಾರದವರೂ ಕೂಡ ಭೂಕಂದಾಯ ರದ್ದಿಯಾತಿಯ ಬಗ್ಗೆ ಘೋಷಣೆಯನ್ನು ಮಾಡಿದರು, ಆದರೆ ಇದರ ಬಗ್ಗೆ ಮುಂದೆ ಯಾವ ಕ್ರಮ ವನ್ನು ತೆಗೆದುಕೊಳ್ಳುತ್ತಾರೆ. ಅಥವಾ ಅದು ಯಾವ ಮಟ್ಟಿಗೆ ಬಂದಿದೆ ಎಂಬುದು ಇಲ್ಲಿಯವರೆಗೂ ಯಾವುದೇ ವಿಚಾರ ಗೊತ್ತಾಗಲಿಲ್ಲ. ಅದರಲ್ಲಿ ಅನೇಕ ತೊಂದರೆಗಳೂ ಇವೆ. ಆ ತೊಂದರೆ ಗಳನ್ನೆಲ್ಲಾ ನಿವಾರಣೆ ಮಾಡಬೇಕೆಂದು ಒಂದು ಮಂತ್ರಿಮಂಡಲದ ಉಪಸಮಿತಿಯನ್ನು ನೇಮಿಸಿ ದರು. ಆ ಮಂತ್ರಿಮಂಡಲದ ಉಪಸಮಿತಿಯವರ ವರದಿ ಇಷ್ಟರಲ್ಲೇ ಸರ್ಕಾರಕ್ಕೆ ಬರಬಹುದು. ಆದರ ಮೇಲೆ ಸರ್ಕಾರದರು ಯಾವ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆಯೋ ಅದು ಒಂದ ಮಸೂದೆಯ ರೂಪದಲ್ಲಿ ಈ ಸಭೆಯ ಮುಂದೆ ಬರಬೇಕಾಗುತ್ತದೆ. ಭೂಕಂದಾಯ ಮತ್ತು ಭೂಮಿಯ ದಾಖಲಾತಿ ಇತ್ಯಾದಿಗಳ ಬಗ್ಗೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನಮ್ಮ ಕಡೆ ವಿಶೇಷವಾಗಿ ಜನರ ಒಂದು ಗಮನವನ್ನು ಸೆಳೆಯತಕ್ಕದ್ದು ವತನದಾರಿ ರದ್ದಿಯಾತಿಯ ವಿಷಯ. ಸರ್ಕಾರ ಎಲ್ಲಾ ಇನಾಮತಿಗಳನ್ನೂ ರದ್ದು ಮಾಡಲು ಹೊರಟಿದೆ. ಈಗ ಇದರಲ್ಲಿ ಕೆಲವು ಮಾತ್ರ ಉಳಿದುಕೊಂಡಿವೆ. ದೇವಸ್ಥಾನಗಳ ವತನಗಳು, ಮತ್ತೆ ಕೆಲವು ವತನಗಳು ಉಳಿದುಕೊಂಡಿವೆ. ಉಳಿದ ಅನುವಂಶಿಕ ಗ್ರಾಮಾಧಿಕಾರಿಗಳ ವತನದಾರಿ ಪದ್ಧತಿ ಈಗಾಗಲೇ ರದ್ದಾಗಿದೆ. ಇದರಲ್ಲಿ ಬಿಜಾಪುರ, ಬೆಳಗಾಮು, ಮತ್ತು ಧಾರವಾಡ ಜಿಲ್ಲೆಗಳಲ್ಲಿ ಬಹಳಮಟ್ಟಿಗೆ ಪರಗಣ ಮತ್ತು ಕುಲಕರ್ಣಿ ವತನದಾರರು ತಮ್ಮ ಜಮೀನು ಸಂಬಂಧದಲ್ಲಿ ಆರುಪಟ್ಟು, ಹತ್ತು ಪಟ್ಟು, ಇಪ್ಪತ್ತು ಪಟ್ಟು ಹಣವನ್ನು ಸರ್ಕಾರಕ್ಕೆ ತುಂಬಿ ಅದನ್ನು ವಿಲೇವಾರಿ ಮಾಡುವುದಕ್ಕೆ ಬರುವ ಹಾಗೆ ಮಾಡಿಕೊಂಡಿದ್ದಾರೆ. ಯಾವ ಜಮೀನಿನಲ್ಲಿ ತಮ್ಮ ಹಿತಾಸಕ್ತಿ ಇತ್ತೋ ಅಂಥಾದ್ದಕ್ಕೆ ಹಣವನ್ನು ತುಂಬಿ ತಮ್ಮ ಹಕ್ಕನ್ನು ಉಳಿಸಿಕೊಂಡಿದ್ದಾರೆ. ಯಾವ ಜಮೀನಿನಲ್ಲಿ ತಮ್ಮ ಹಿತಾಸಕ್ತಿ ಇರಲಿಲ್ಲವೋ ಅಂಥಾದಕ್ಕೆ ಹಣವನ್ನು ತುಂಬದೆ ಹಾಗೆಯೇ ಬಿಟ್ಟು ಅದರ ಹಕ್ಕು ನಷ್ಟವಾಗಿದೆ. ಅನೇಕ ಕಡೆ ಹೀಗಾಗುತ್ತದೆ ಎಂದು ಈ ಬಗ್ಗೆ ಹೈಕೋರ್ಟಿನಲ್ಲಿ ಕೆಲವು ಕೇಸುಗಳೂ ಸಹ ಇವೆ. ಈಗಲೂ ಸಹ ವತನದಾರರು ಅರ್ಜಿಯನ್ನು ಕೊಟ್ಟರೆ ಅಂಥವುಗಳನ್ನು ಉಳಿಸಿಕೊಳ್ಳಬಹುದು ಎನ್ನುವ ಬಗ್ಗೆ ಹೈಕೋರ್ಟಿನಲ್ಲಿ ಕೆಲವು ತೀರ್ಮಾನವಾಗಿವೆ. ಅಂತೂ ಒಟ್ಟಿನಲ್ಲಿ ಈ ವಿಚಾರದಲ್ಲಿ ಒಂದು ಅನಿಶ್ಚಿತ ಪರಿಸ್ಥಿತಿ ಉಂಟಾಗಿದೆ. ಈ ಇನಾಮ್ ರದ್ದಿಯಾತಿಯ ಬಗ್ಗೆ ಸರ್ಕಾರದವರು ಒಂದು ಹುಕುಂ ಹೊರಡಿಸಿ ಇನಾಮದಾರರು ರೈತರು ಎಲ್ಲರೂ ಜುಲೈ ತಿಂಗಳು 26ನೇ ತಾರೀಖ

(ಶ್ರೀ ಎ. ಆರ್. ಪಂಚಗಾವಿ)

ನೊಳಗಾಗಿ ಹಣವನ್ನು ತುಂಬಬೇಕು ಎಂದು ಹೇಳಿದ್ದಾರೆ. ನಮ್ಮ ಭಾಗದ ಸುಮಾರು 20 ಎಂ. ಎಲ್. ಎ ಗಳಾದ ನಾವೆಲ್ಲರೂ ಇದರ ಬಗ್ಗೆ ಬಹಳ ತೊಂದರೆಗಳಿವೆ, ಆ ತೊಂದರೆಗಳನ್ನು ನಿವೇದನೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು, ಇದರ ಬಗ್ಗೆ ಹೆಚ್ಚಿನ ಕಾಲಾವಕಾಶವನ್ನು ಕೊಡಬೇಕೆಂದು ಒಂದು ಮನವಿಯನ್ನು ಮಾನ್ಯ ಕಂದಾಯ ಮಂತ್ರಿಗಳಿಗೆ ಒಪ್ಪಿಸಿದ್ದೇವೆ. ಇದರ ಬಗ್ಗೆ ಇಲ್ಲಿಯ ವರೆಗೆ ಅವರಿಂದ ಯಾವ ಉತ್ತರವೂ ಬಂದಿಲ್ಲ. ಈ ಪರಗಣಿ ವತನ ಜಮೀನಿನ ಬಗ್ಗೆ ಒಂದೊಂದು ಊರಿನವರು ಲಕ್ಷಾಂತರ ರೂಪಾಯಿಗಳನ್ನು ಸರ್ಕಾರಕ್ಕೆ ತುಂಬಬೇಕಾಗುತ್ತದೆ. ಈ ಅನಿಶ್ಚಿತ ಪರಿಸ್ಥಿತಿಯ ಬಗ್ಗೆ ಏನಾಗಿದೆ ಎಂಬುದನ್ನು ನಾವು ತಿಳಿಯುವಂತಿಲ್ಲವಾಗಿದೆ. ಈ ಜಮೀನಿನ ಬಗ್ಗೆ ಕೆಲವರು 20 ಪಟ್ಟು, 30 ಪಟ್ಟು, ಕೆಲವರು 100-200 ಪಟ್ಟು ಹಣವನ್ನು ಸರ್ಕಾರಕ್ಕೆ ತುಂಬಬೇಕಾಗಿದೆ. ಇದರ ಜೊತೆಗೆ ಕೆಲವು ಹಿಂದಿನ ಗೇಣಿಯನ್ನು ತುಂಬಬೇಕು. ಇಂಥಾ ಒಂದು ಸಂಧಿಗ್ಧ ಪರಿಸ್ಥಿತಿ ಉಂಟಾಗಿದೆ. ಇದನ್ನು ನೋಡಿದರೆ ಇನಾಮ್ ಹಳ್ಳಿಗಳಲ್ಲಿರತಕ್ಕ ರೈತರು ಕಂಗಾಲಾಗುವ ಪರಿಸ್ಥಿತಿ ಉಟಾಗಿದೆ. ಇನಾಂ ಹಳ್ಳಿಗಳಲ್ಲಿ ಹುಟ್ಟಿದಂಥ ರೈತ ನಾಯಿ ಬಾಳುವೆ ಬಾಳುವಂತಹ ಪರಿಸ್ಥಿತಿ ಇದೆ. ಇನಾಂದಾರರು ರೈತರನ್ನು ಅನೇಕ ವರ್ಷಗಳಿಂದ ಗೋಳಾಡಿಸುತ್ತಿದ್ದಾರೆ. ಇನಾಂದಾರರು ರೈತರ ಮೇಲೆ ಆನೇಕ ರೀತಿಯ ಹೊರೆಯನ್ನು ಹೊರಸಿದ್ದಾರೆ. ಹೀಗಾಗಿ ಈಗ ಇನಾಂ ರದ್ದು ಮಾಡುವುದಾದರೆ ರೈತನಿಗೆ ಯಾವ ಪರಿಹಾರವೂ ಸಿಕ್ಕುವುದಿಲ್ಲ. ಅವರು ಸರ್ಕಾರಕ್ಕೆ ಸಾವಿರಾರು ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ. ಇದರಿಂದ ರೈತರಿಗೆ ಯಾವ ಲಾಭವೂ ಇಲ್ಲ. ಈ ಇನಾಂ ರದ್ದಿಯಾತಿಯಿಂದ ರೈತರಿಗೆ ಯಾವ ಸುಖವೂ ಆಗಿಲ್ಲ. ಇನಾಂ ಹಳ್ಳಿಗಳಲ್ಲಿ ರೈತರು ವಂಶಪಾರಂಪರ್ಯವಾಗಿ ಬಂದಂಥ ತಮ್ಮ ಜಮೀನುಗಳ ಬಗ್ಗೆ ತಮ್ಮ ಮಕ್ಕಳ ಹೆಸರಿನಲ್ಲಿ ದಾಖಲೆಗಳನ್ನು ತೆಗೆದುಕೊಂಡು, ತಮ್ಮ ತಮ್ಮ ಜಮೀನುಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ. ಸರ್ಕಾರದವರು ಖಾಯಂ ಆಗಿ ವಂಶಪಾರಂಪರವಾಗಿ ಬಂದಂಥ ರೈತವಾರಿ ಹಳ್ಳಿಗಳ ಖಾತೇದಾರ ರೈತರು ಏನಿದ್ದಾರೆಯೋ ಅಂಥವರನ್ನು ಒಂದು ವಿಧವಾಗಿ ನೋಡಿಕೊಳ್ಳುತ್ತಿದ್ದಾರೆ. ಇನಾಂ ಹಳ್ಳಿಗಳಲ್ಲಿರತಕ್ಕ ಖಾತೇದಾರ ರೈತರನ್ನು ಒಂದು ವಿಧವಾಗಿ ನೋಡಿ ಕೊಳ್ಳುತ್ತಿದ್ದಾರೆ. ಈ ರೀತಿಯ ಭೇದ ಭಾವವನ್ನು ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮೊದಲು ರೈತರು ಇನಾಂದಾರರ ಹಿಡಿತದಲ್ಲಿ ನರಳುತ್ತಿದ್ದರು. ಈಗ ಸರ್ಕಾರದ ವಸೂಲಿ ವಿಧಾನದಲ್ಲಿ ನರಳುತ್ತಿದ್ದಾರೆ. ಈ ಇನಾಂ ಗ್ರಾಮುಗಳು ಏನಿವೆಯೋ ಅವುಗಳಲ್ಲಿ ಜಮೀನುಗಳು ವಂಶಪಾರಂಪರ್ಯವಾಗಿ ಬಂದ ಹಕ್ಕುಗಳಾಗಿವೆ ಎಂಬುದನ್ನು ಗ್ರಾಮದ ದಾಕಲಾತಿಗಳು ತೋರಿಸಿ ಕೊಡುತ್ತವೆ. ಅಂಥ ಹಳ್ಳಿಗಳಲ್ಲಿ ಅನೇಕ ಜನ ಖಾತೇದಾರ (ಕಾಯಂಕುಳ) ರೈತರು ಇದ್ದಾರೆ. ಆ ಹಳ್ಳಿಗಳಲ್ಲಿರತಕ್ಕ ರೈತರು ಪೂರ್ಣವಾಗಿ ಮಾಲಕಿ ಪ್ರಕಾರ ವಹಿವಾಟುಗಳನ್ನು ನಡೆಸುತ್ತಿದ್ದಾರೆ. ದುರ್ದೈವವಶಾತ್ ಯಾರೋ ರಾಜರುಗಳು, ಆಡಳಿತಗಾರರು, ಇನಾಂದಾರರಿಗೆ ಆ ಇನಾಂ ಗ್ರಾಮಗಳನ್ನು ಯಾವುದೋ ಒಂದು ಉದ್ದೇಶಕ್ಕೋಸ್ಕರ ಕೊಟ್ಟಾಕ್ಷಣಕ್ಕೆ ಅಲ್ಲಿಯ ರೈತರು ಇನಾಂದಾರರಿಗೆ ಗುಲಾಮರಾಗಿ ಬಾಳುವಂತಹ ಒಂದು ಪರಿಸ್ಥಿತಿ ಒದಗಿತ್ತು. ಆ ಇನಾಂ ಗ್ರಾಮದ ಜಮೀನುಗಳಲ್ಲಿ ರೈತರಿಗೆ ಎಲ್ಲ ಹಕ್ಕುಗಳು ಇದ್ದವು. ಅದರಿಂದ ಇನಾಂದಾರರಿಗೆ ಕೆಲವು ಮಾತ್ರ ಲಾಭ ಇತ್ತು. ಆ ಇನಾಂದಾರರು ರೈತರ ಕಡೆಯಿಂದ ಕೇವಲ ಭೂಕಂದಾಯವನ್ನಷ್ಟೇ ವಸೂಲು ಮಾಡುತ್ತಿದ್ದರು. ಆ ರೀತಿ ಅವರು ಕಂದಾಯದ ರೂಪದಲ್ಲಿ ವಸೂಲು ಮಾಡಿದಂತಹ ಹಣದಲ್ಲಿ ಕೆಲವು ಭಾಗ ಹಣವನ್ನು ಜೂಡಿ ಸರ್ಕಾರಕ್ಕೆ ತುಂಬುತ್ತಿದ್ದರು. ಉಳಿದ ಹಣ ಅವರಿಗೆ ನಫೆಯಾಗಿ ಉಳಿಯುತ್ತಿತ್ತು. ಇಂಥಾ ಒಂದು ಹಕ್ಕನ್ನು ನಾಶ ಮಾಡುವುದರಿಂದ, ಇನಾಂಮ್ತಿಗಳನ್ನು ರದ್ದು ಮಾಡುವುದರಿಂದ ಇನಾಂದಾರರಿಗೆ ಏನು ಲಾಭ ಇದೆಯೋ ಇಂಥಾದ್ದು ಹೊರಟು ಹೋಗುತ್ತದೆ. ರೈತರಿಗೆ ಮಾತ್ರ ಇದರಿಂದ ಯಾವ ಲಾಭವೂ ಇರಲಲ್ಲ, ಹಾನಿಯೂ ಇರಲಿಲ್ಲ. ಮೊದಲು ಎಷ್ಟು ಕಂದಾಯ ಕೊಡುತ್ತಿದ್ದರು ಈಗಲೂ ಕೊಡುತ್ತಿದ್ದಾರೆ. ಇನಾಮ್‌ದಾರರೂ ತಮಗೆ ಏನಾದರೂ ಲಾಭ ಬರುತ್ತಿದೆಯೋ ಅದನ್ನು ಪಡೆದು ಕೊಳ್ಳಬಹುದು. ಇದನ್ನೆಲಾ ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ರೈತರಿಗೆ ಪೂರ್ಣ ಪರಿಹಾರವನ್ನು ಒದಗಿಸಬೇಕು. ಏಕೆಂದರೆ, ಇದರಿಂದ ಒಂದು ಕಡೆ ರೈತರಿಗೆ ಒಂದು ರೀತಿ ಮಾಡಿದಂತಾಗುತ್ತದೆ. ಇನ್ನೊಂದು ಕಡೆಯವರಿಗೆ ಇನ್ನೊಂದು ರೀತಿ ಪಕ್ಷಪಾತ ಮಾಡಿದಂತಾಗಬಹುದು. ಇನಾಂ ಹಳ್ಳಿಗಳ ರೈತರು ಬೇರೆ, ಇತರ ರೈತವಾರಿ ಹಳ್ಳಿಗಳ ರೈತರು ಬೇರೆ ಎಂದು ಹೇಳುವುದಕ್ಕಾಗುವುದಿಲ್ಲ. ಸಾಲ ಸವಲತ್ತುಗಳು ಇನಾಮು ಹಳ್ಳಿಯ ರೈತರಿಗೆ ಸರಿಯಾಗಿ ಸಿಗುತ್ತಾ ಇಲ್ಲ. ಇಷ್ಟೊಂದು ವಿಧವಾದ ಕಷ್ಟನಷ್ಟಗಳನ್ನು ಅನುಭವಿಸಿ ಬಂದಿದ್ದಾರೆ. ಯಾವಾಗ ಸರ್ಕಾರದವರು ಕಂದಾಯವನ್ನು ರದ್ದು ಮಾಡುವುದಕ್ಕೆ ಹೊರಟಿದ್ದಾರೆಯೋ, ಅದರಿಂದ ಸಣ್ಣ ಸಣ್ಣ ರೈತರಿಗೆ ಒಂದು ಲಾಭ ಸಿಗಬಹುದು,

ಮತ್ತು ಭೂಮಿ ಸಾಗುವಳಿ ಮಾಡುವುದಕ್ಕೆ ಯೋಗ್ಯವಾಗಬಹುದು. ಅವರಿಗೆಲ್ಲಾ ಒಂದು ಪರಿಹಾರ ಸಿಗಲಿ ಎನ್ನುವ ಕಾಲಕ್ಕೆ ನಾವು ಈಗ ಇನ್ನೊಂದು ರೀತಿಯ ಹೊರೆಯನ್ನು ಹೇರುವುದು ಸರಿಯಲ್ಲ. ಒಂದು ಕಡೆ ಪರಿಹಾರ ಕೊಡುತ್ತೇವೆ ಎಂದು ಹೇಳುವುದು. ಇನ್ನೊಂದು ಕಡೆ ಬೇರೆ ರೀತಿಯ ಹೊರೆಯನ್ನು ಹೊರಿಸುವುದು, ಇದನ್ನೆಲ್ಲಾ ಸರ್ಕಾರದವರು ಪೂರ್ಣವಾಗಿ ವಿಚಾರ ಮಾಡಬೇಕು. ಇದು ನಮ್ಮ ಮೂರು ಜಿಲ್ಲೆಯಲ್ಲಿ ಇರುವುದನ್ನು ಹೇಳುತ್ತಿದ್ದೇನೆ. ಇನ್ನು ಇತರ ಬೇರೆ ಕಡೆಗಳಲ್ಲೂ ಇರಬಹುದು. ಈಗಾಗಲೇ ಕೆಲವು ರೈತರು ತಮ್ಮ ಜಮೀನನ್ನು ಮಾರಾಟ ಮಾಡುವುದಕ್ಕೆ ಹಣ ತುಂಬಿದ್ದಾರೆ. ಅಂಥವರ ಹಣವನ್ನು ವಾಪಸ್ಸು ಕೊಡುವುದು ಒಂದೇ ದಾರಿ. ಆದ್ದರಿಂದ ಎಲ್ಲಾ ರೈತರಿಗೂ ಒಂದೇ ರೀತಿಯ ಸವಲತ್ತುಗಳನ್ನು ಕೊಡುವುದಕ್ಕೆ ಸರ್ಕಾರದವರು ಯೋಗ್ಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಜುಲೈ ತಿಂಗಳು 26ರರೊಳಗೆ ಏನು ತುಂಬಬೇಕಾಗಿದೆ ಅಷ್ಟು ತುಂಬುವುದು ರೈತರಿಗೆ ಅಸಾಧ್ಯದ ಮಾತು. ಈಗಾಗಲೇ ಹೆಚ್ಚಿನ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ರೈತರು ಸಾಕಷ್ಟು ಕಂದಾಯ ತುಂಬಿದ್ದಾರೆ. ಅದರ ಜೊತೆಗೆ ಇದನ್ನೂ 26 ಪಟ್ಟು ತುಂಬುವುದು ಎಂದರೆ ಅದು ಬಹಳ ಕಷ್ಟದ ಮಾತು. ಇದನ್ನು ಕೂಡಲೇ ವಿಚಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆದ್ದರಿಂದ ಜುಲೈ 26ರರೊಳಗೆ ತುಂಬಬೇಕೆನ್ನುವ ಹುಕುಂನ್ನು ತಡೆಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೂ ಅನೇಕ ಮಾತುಗಳನ್ನು ಹೇಳುವುದಾದರೆ, ಇಂದು ಘಟಪ್ರಭಾ ಯೋಜನೆಯನ್ನು ತೆಗೆದುಕೊಳ್ಳೋಣ. ಇದು ನಮ್ಮ ಉತ್ತರ ಕರ್ಣಾಟಕದಲ್ಲಿ ಅತಿ ಹಳೆಯ ಯೋಜನೆಯಾಗಿದೆ. ಇದು ಅತ್ಯಂತ ಲಾಭದಾಕವಾದ ಯೋಜನೆ. ದುರಾದೃಷ್ಟವಶಾತ್ ಅನೇಕ ತೊಂದರೆಗಳನ್ನು ಎದುರಿಸಿ ಹಿಂದೆ ಬಿದ್ದಿದೆ. ಇದು ಅನೇಕ ಕಷ್ಟನಷ್ಟಗಳನ್ನು ಎದುರಿಸಬೇಕಾಯಿತು. ಅದರಿಂದ ಇಲ್ಲಿಯವರೆಗೆ ಸುಮಾರು ಏಳು ಲಕ್ಷ ಎಕರೆ ನೀರಾವರಿಯಾಗುತ್ತಿತ್ತು. ನಮಗೆ ಏಳರಿಂದ 14 ಟನ್ನಿನಷ್ಟು ಆಹಾರಧಾನ್ಯ ಸಿಗುತ್ತಿತ್ತು. ಅದೆಲ್ಲಾ ಹೋಗಿ, ಇವತ್ತಿನ ದಿವಸ ನಮ್ಮ ಯೋಜನೆ ಕೇವಲ ಅಡಿಪಾಯದಲ್ಲೇ ಇದೆ. ಅದರ ಜೊತೆಗೆ ರಾಜ್ಯ ಪುನರಚನೆಯಲ್ಲಿ ಸಿಕ್ಕಿ ಹಡಲ್ಗ ಶೆಟ್ಟಿನಹಳ್ಳಿ ಕಡೆಗಳಲ್ಲಿ ಅಣೆಕಟ್ಟು ಕಟುವುದಕ್ಕೆ ಆಯ್ಕೆಯಾದ ಸ್ಥಳ ಮಹಾರಾಷ್ಟ್ರಕ್ಕೆ ಹೋಗುತ್ತದೆ. ಆದ್ದರಿಂದ ನಾವು ಇನ್ನೂ ಕೆಳಗೆ, 100-150 ಅಡಿ ಕೆಳಗೆ ಬರಬೇಕಾಯ್ತು. ಇದರಿಂದ ಒಂದುವರೆ ಲಕ್ಷ ಎಕರೆ ಪವದತ್ತಿ ಬಾದಾಮಿ, ರಾಮದುರ್ಗ ನೀರಾವರಿ ಕ್ಷೇತ್ರದ ಭಾಗವು ಕಾಯಂ ನೀರಿನ ಲಾಭವನ್ನು ಕಳೆದುಕೊಳ್ಳುವ ಹಾಗಾಯ್ತು. ಇದೇನೂ ಸಣ್ಣ ಮಾತಲ್ಲ. ನಮ್ಮ ರಾಷ್ಟ್ರದ ಆಡಳಿತದ ಲೋಪ ತೋರಿಸುವ ಮಾತಾಗಿದೆ. ಈಗಾಗಲೆ ನಮಗೆ ಸಾಕಷ್ಟು ನೀರು ಸಿಗುತ್ತಾ ಇಲ್ಲ. ಈಗಿನ ಪರಿಸ್ಥಿತಿ ನೋಡಿದರೆ ಇಂದು ನದಿಯಲ್ಲಿ ಒಂದು ತೊಟ್ಟು ನೀರೂ ಇಲ್ಲದೆ ನೀರಾವರಿಗೆ ಬೇಕಾದಷ್ಟು ನೀರು ಸಿಗುತ್ತಾ ಇಲ್ಲ. ಇದಲ್ಲದೆ ಅನೇಕ ತರದ ಹೊರೆಗಳನ್ನು ಹೊರಬೇಕಾಗುತ್ತಿದೆ. ಗೋಕಾಕ ಗಿರಣಿಯವರಿಗೆ, ಅವರು ಕೊಡುವುದು 15,000 ರೂಪಾಯಿಯಾದರೂ, ಇಡೀ ವರ್ಷ ನೀರು ಒದಗಿಸಬೇಕಾಗುತ್ತದೆ. ನಿತ್ಯ ಅವರು 65 ಕ್ಯೂಸೆಕ್ಸ್ ನೀರನ್ನು ಉಪಯೋಗಿಸುತ್ತಿದ್ದಾರೆ. ಇದರಿಂದಾಗಿ ಎಂಟು ತಿಂಗಳು ರೈತರಿಗೆ ಪೂರ್ತಿಯಾಗಿ ನೀರು ಸಿಗುತ್ತಾ ಇಲ್ಲ. ರೈತರಿಗೆ ಎಂಟು ತಿಂಗಳು 118 Qusecs ನಂತೆ ನೀರು ಕೊಟ್ಟರೂ ಅವರಿಂದ 15ರಿಂದ 20ಲಕ್ಷ ರೂಪಾಯಿಯ ವರೆಗೆ ವಸೂಲಾಗುತ್ತಿದೆ. ಇದರ ಬಗ್ಗೆ ಬಹಳ ದಿವಸಗಳಿಂದ ಹೋರಾಟ ಕೂಡ ಆಗಿದೆ. ಸರ್ಕಾರದವರು ಸಾಕಷ್ಟು ಸವಲತ್ತುಗಳನ್ನು ಕೊಟ್ಟರೆ ಈ ನೀರಿನ ತೊಂದರೆಯು ತಪ್ಪುತ್ತದೆ. ರೈತರಿಗೆ ಜಮೀನಿನಲ್ಲಿ ಬೀಜ ಬಿತ್ತಲಿಕ್ಕೂ ನೀರು ಸಿಗುತ್ತಾ ಇಲ್ಲ. ಆದರೆ ಗಿರಣಿಯವರಿಗೆ ಮಾತ್ರ ಮೊದಲಿನ ರೀತಿಯಲ್ಲೇ ಕೊಡುತ್ತಿರಬೇಕು. ಇದನ್ನು ತಪ್ಪಿಸಿ, ನಮ್ಮ ರೈತರಿಗೆ ಸಾಗುವಳಿಗೆ ಸರಿಯಾದ ನೀರು ಸಿಗುವಂತೆ ಮಾಡಿದರೆ, ಅದರಿಂದ ಎಲ್ಲರಿಗೂ ಹೆಚ್ಚಿನ ಪ್ರಯೋಜನವಾಗುತ್ತದೆ. ಇದನ್ನು ನಾನು ಅನೇಕ ಸಲ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅದಕ್ಕೆ ಸರ್ಕಾರದವರು ತೀವ್ರ ಗಮನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಸರಿಯಾಗಿ ನೀರು ಸಿಕ್ಕಿದರೆ, ಅಲ್ಲಿ ಎಲ್ಲಾ ತರದ ಬೆಳೆ, ಮೆಕ್ಕೆ ಜೋಳ, ಹೈಬ್ರಿಡ್ ಉಪಯೋಗ ಮಾಡಿ ಅತ್ಯಂತ ಉತ್ತಮ ಬೆಳೆಯನ್ನು ಬೆಳೆಸುವುದರಲ್ಲಿ ಅಲ್ಲಿನ ರೈತರು ಬಹಳ ನಿಸ್ಸೀಮರು. ಅಲ್ಲಿಂದ ಲಕ್ಷಾಂತರ ಚೀಲ ಮುಸುಕಿನ ಜೋಳ ಬೆಂಗಳೂರಿಗೆ ಬರುತ್ತಿದೆ. ಬೇರೆ ದೇಶಕ್ಕೂ ಸಹ ಕಳುಹಿಸುತ್ತಿದ್ದಾರೆ. ಆದ್ದರಿಂದ ಅಲ್ಲಿಯ ರೈತರಿಗೆ ಹೆಚ್ಚು ಹೆಚ್ಚು ನೀರನ್ನು ಮತ್ತು ಉಳಿದ ಸೌಲಭ್ಯಗಳನ್ನು ಒದಗಿಸಬೇಕು. ಈ ಸೌಕರ್ಯಗಳನ್ನೆಲ್ಲಾ ಸರ್ಕಾರದವರು ಅಲ್ಲಿಯ ರೈತರಿಗೆ ಮಾಡಿಕೊಟ್ಟರೆ ಆಹಾರದ ತೊಂದರೆ ತಪ್ಪೀತು ಎಂದು ಸರ್ಕಾರದ ಲಕ್ಷಕ್ಕೆ ತರಬಯಸುತ್ತೇನೆ. ನೀರಾವರಿ ಬಾವಿಗಳಿಗೆ ಸರ್ಕಾರದವರು ಹೆಚ್ಚು ಹಣವನ್ನು ಒದಗಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಈ ವಿಚಾರದಲ್ಲಿ ಮೊನ್ನೆ ಒಂದು ಹೇಳಿಕೆಯನ್ನು ಸಹ ಕೊಟ್ಟಿದ್ದಾರೆ. ಹೊಸ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಿಲ್ಲ, ಹಳೆಯವನ್ನೇ ಮುಗಿಸುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಆದರೆ ಇದರಿಂದ ರೈತರಿಗೆ ಸ್ವಲ್ಪ ತೊಂದರೆಯಾಗುತ್ತದೆ. ಇಂದು ಪ್ರಾರಂಭ

(ಶ್ರೀ ಎ. ಆರ್. ಪಂಚಗಾವಿ)

ವಾಗಿರುವ ಯೋಜನೆಗಳನ್ನು ಮುಗಿಸುವುದಲ್ಲದೆ, ಹೊಸ ಸಣ್ಣ ನೀರಾವರಿ ಯೋಜನೆಗಳನ್ನು ಸಹ ಕೈಕೊಳ್ಳಬೇಕು, ಕೈಬಿಡಬಾರದು ಎಂದು ಹೇಳುತ್ತೇನೆ. ಬಾದಾಮಿ, ಯರಗಟ್ಟಿ ಮುಂತಾದ ಕಡೆ ಸಣ್ಣ ನೀರಾವರಿ ಕೆಲಸವನ್ನು ತಡೆಹಿಡಿಯಲಾಗಿದೆ. ಆ ಭಾಗಕ್ಕೆ ಸೂಕ್ತ ಪರಿಹಾರವನ್ನು ಕಂಡು ಹಿಡಿಯದಿದ್ದರೆ ಮತ್ತೆ ಬರಗಾಲಕ್ಕೆ ಅಲ್ಲಿಯ ಜನರು ಸಿಕ್ಕುತ್ತಾರೆ, ಸರ್ಕಾರವನ್ನು ಶಪಿಸುತ್ತಾ ಹೋಗುತ್ತಾರೆ. ಉಳಿದ ಭಾಗಕ್ಕಿಂತ ಇಲ್ಲಿಗೆ ಹೆಚ್ಚಿನ ಲಕ್ಷ್ಯವನ್ನು ಕೊಡಬೇಕು. ಕೆಲವು ನೀರಾವರಿ ಯೋಜನೆಗಳನ್ನು ಹಿಂದಕ್ಕೆ ತಳ್ಳುವುದು ಸರಿಯಲ್ಲ. ಎಲ್ಲಾ ಭಾಗಗಳಿಗೂ ನೀರಾವರಿ ಸೌಕರ್ಯವನ್ನು ಒದಗಿಸಬೇಕು. ಅಲ್ಲಿಯ ಜನರು ತಮ್ಮ ಭಾಗದಲ್ಲಿ ಹೆಚ್ಚು ನೀರಾವರಿ ಸೌಕರ್ಯವನ್ನು ಸರ್ಕಾರದವರು ಒದಗಿಸುತ್ತಾರೆಂದು ಆಶೆ ಇಟ್ಟುಕೊಂಡಿದ್ದರು. ಆ ಆಶೆ ತಪ್ಪಿದ್ದರಿಂದ, ಈ ವರ್ಷದಲ್ಲೂ ಆ ಭಾಗದಲ್ಲಿ ಬರಗಾಲ ಬರಬಹುದು. ಹೆಚ್ಚಿನ ಆಹಾರವನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಅಲ್ಲದೆ ಸರ್ಕಾರದವರು ರೈತರಿಗೆ ಕೆಲವೊಂದು ಸೌಕರ್ಯವನ್ನು ಕಡಿಮೆ ಮಾಡುತ್ತಿದ್ದಾರೆ. ಗೊಬ್ಬರವನ್ನು ಸರಿಯಾಗಿ ಒದಗಿಸುತ್ತಿಲ್ಲ. ಸಬ್ಸಿಡಿ ರೂಪದಲ್ಲಿ ಗೊಬ್ಬರವನ್ನು ರೈತರಿಗೆ ಕೊಡಬಹುದು. ಈ ವರ್ಷ ಸಾಕಷ್ಟು ಪ್ರಮಾಣದಲ್ಲಿ ಗೊಬ್ಬರವನ್ನು ಸರ್ಕಾರದವರು ಆ ಭಾಗಕ್ಕೆ ಒದಗಿಸಿದ್ದಾರೆ. ಯಾವುದೇ ಭಾಗಕ್ಕೆ ತೊಂದರೆಯಾಗದಂತೆ ಕಾಲಕ್ಕೆ ಸರಿಯಾಗಿ ಗೊಬ್ಬರವನ್ನು ಒದಗಿಸಬೇಕು. ಏಕೆಂದರೆ, ಈ ವಿಚಾರದಲ್ಲಿ ಅನೇಕ ದೂರುಗಳು ಬರುತ್ತಿವೆ. ಬಿತ್ತುವ ಕಾಲಕ್ಕೆ ಗೊಬ್ಬರ ಸಿಗುವಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ಆಹಾರ ವಿಚಾರದಲ್ಲಿ ಹೇಳುವುದಾದರೆ ನಮ್ಮ ದೇಶದಲ್ಲಿ ಭೀಕರ ಪರಿಸ್ಥಿತಿ ತಲೆದೋರುತ್ತಿದೆ. ನಮ್ಮಲ್ಲಿ ಅನೇಕ ಪ್ರದೇಶಗಳು ಬರಗಾಲಕ್ಕೆ ತುತ್ತಾಗುವ ಸಂಭವವಿದೆಯೆಂದು ತಿಳಿದುಕೊಳ್ಳಬೇಕು. ಗೋಕಾಕ್‌ನ ಪೂರ್ವ ಭಾಗದಲ್ಲಿ, ಮತ್ತು ರಾಯಭಾಗ ಮುಂತಾದ ಕಡೆಗಳಲ್ಲಿ ಮಳೆಯಿಲ್ಲ. ಇನ್ನು ಮೇಲೆ ಮಳೆಯಾದರೂ ಸಹ ಬೆಳೆ ಬರುವುದಿಲ್ಲ. ಈಗ ಅರ್ಧ ಬೆಳೆ ಹಾಳಾಗಿದೆ. ಇಂತಹ ಭಾಗಗಳಲ್ಲಿ ಪರಿಹಾರ ಕಾರ್ಯವನ್ನು ಕೈಕೊಳ್ಳಬೇಕು. ಇದನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸಬೇಕು. ಈಗ ಮಳೆಯಾದರೆ ಸ್ವಲ್ಪ ಭಾಗ ಬೆಳೆಯಾಗಬಹುದು, ಆದರೆ ಬರಗಾಲ ತಪ್ಪಿದ್ದಲ್ಲ. ಮಳೆ ಬಂದರೂ ಸಹ ಮಸಾರಿ, ಮರಡಿ ಜಮೀನುಗಳಲ್ಲಿ ಬೆಳೆ ಸರಿಯಾಗಿ ಬರುವುದಿಲ್ಲ. ಈಗಿನಿಂದಲೇ ಪರಿಹಾರ ಕಾರ್ಯಗಳ ಬಗ್ಗೆ ಸರಿಯಾದ ಲಕ್ಷ್ಯವನ್ನು ಕೊಡಬೇಕು.

ಇನ್ನು ನಮ್ಮ ದೇಶದ ಒಂದು ಸೌಭಾಗ್ಯವೆಂದರೆ, ಶರಾವತಿ ಯೋಜನೆ ನಮಗೆ ಒಂದು ಆಶಾದಾಯಕವಾಗಿದೆ. ಶರಾವತಿಯಿಂದ ನಮಗೆ ವಿದ್ಯುತ್ ದೊರಕುತ್ತಿದೆ. ಆದರೂ ಸಹ ನೀರಾವರಿ ಪಂಪ್‌ಸೆಟ್ಟುಗಳನ್ನು ಹೆಚ್ಚು ಹೆಚ್ಚಾಗಿ ನೀರಾವರಿ ಪ್ರದೇಶಗಳಲ್ಲಿ ಅಳವಡಿಸಿಲ್ಲ. ಹೆಚ್ಚಾಗಿ ಒದಗಿಸಬೇಕು. ಕೆಲವು ನದಿಗಳು ಹರಿಯುವ ಜಾಗದಲ್ಲಿ ಇರಿಗೇಷನ್ ಪಂಪ್‌ಸೆಟ್ಟುಗಳನ್ನು ಒದಗಿಸಬೇಕು. ಶರಾವತಿಯಿಂದ ಉತ್ಪತ್ತಿಯಾಗುವ ವಿದ್ಯುತ್ತಿನ ಪೂರ್ಣ ಲಾಭ ರೈತರಿಗೆ ಸಿಗುವಂತೆ ನೋಡಿಕೊಳ್ಳಬೇಕು. ಬರಗಾಲದಿಂದ ನರಳುತ್ತಿರುವ ರೈತರಿಗೆ ಅನುಕೂಲ ಮಾಡಬೇಕೆಂದು ತಿಳಿಸುತ್ತೇನೆ. ಕೃಷ್ಣಾ, ಘಟಪ್ರಭಾ ನದಿಗಳ ನೀರು ವ್ಯರ್ಥವಾಗಿ ಹರಿದು ಹೋಗುತ್ತದೆ. ಮಹಾರಾಷ್ಟ್ರದವರು ನಮಗೆ ಹೆದರಿಕೆ ಹಾಕುತ್ತಿದ್ದಾರೆ. ಭೀಮಾ ನದಿಯ ನೀರನ್ನು ಬೇರೆ ಕಡೆಗೆ ತಿರುಗಿಸುತ್ತಿದ್ದಾರೆ. 20 ಸಾವಿರ ಕ್ಯೂಸೆಕ್ಸ್ ನೀರು ಕೊಯಿನಾ ನದಿಯಿಂದ ಸಮುದ್ರಕ್ಕೆ ಬಿಡುತ್ತಾ ಇದ್ದಾರೆ. ಕಣ್ಣಲ್ಲಿ ಕಣ್ಣಿಟ್ಟು ನಾವು ನೋಡಿ ಕೊಳ್ಳದಿದ್ದರೆ ಘಟಪ್ರಭಾ ನದಿಯ ನೀರು ನಮಗೆ ಯಾವ ರೀತಿ ಸಿಗಲಿಲ್ಲವೋ ಅದೇ ರೀತಿ ಕೊಯಿನಾ ನದಿಯ ನೀರು ಸಹ ಸಿಗುವುದಿಲ್ಲ. ಬೇಸಿಗೆ ಕಾಲದಲ್ಲಿ ಶಂಕೇಶ್ವರದಲ್ಲಿ ನೀರು ಸಿಗುವುದಿಲ್ಲ. ಅವರು ಪ್ರತಿ ವರ್ಷವೂ ಭೀಕರ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಇದನ್ನು ತಪ್ಪಿಸಬೇಕಾದರೆ ಈಗಿನಿಂದಲೇ ಎಚ್ಚರಿಕೆವಹಿಸಬೇಕು. ಮಹಾರಾಷ್ಟ್ರದವರು ಮೇಲಿಂದ ಮೇಲೆ ಅಣೆಕಟ್ಟುಗಳನ್ನು ಕಟ್ಟಿಕೊಂಡು ನಮಗೆ ಬೇಸಿಗೆಯಲ್ಲಿ ನೀರು ಇಲ್ಲದಂತೆ ಮಾಡುತ್ತಿದ್ದಾರೆ. ನಾವು ಮೊದಲೇ ನೀರಿನ ಸಂಗ್ರಹ ಮಾಡಿಕೊಳ್ಳದಿದ್ದರೆ ಬರಗಾಲ ತಪ್ಪಿದ್ದಲ್ಲ. ಮುಂದಿನ ಪೀಳಿಗೆಯವರು ಸಹ ನಮ್ಮನ್ನು ಶಪಿಸುತ್ತಾರೆ.

ಇನ್ನು ವಿದ್ಯುತ್ತು ಎಲ್ಲಾ ಕಡೆಯಲ್ಲೂ ಬರುತ್ತಿದೆ. ಆದ್ದರಿಂದ ನದಿ ದಂಡೆಯಲ್ಲಿ ನೀರು ವ್ಯರ್ಥವಾಗಿ ಹೋಗದಂತೆ ವಿದ್ಯುತ್ ಪಂಪ್‌ಸೆಟ್ಟುಗಳನ್ನು ಹಾಕಿಸಿಕೊಡಬೇಕು. ಸರ್ಕಾರದವರು ಹೆಚ್ಚು ಹೆಚ್ಚು ಪಂಪ್‌ಸೆಟ್ಟುಗಳನ್ನು ರೈತರಿಗೆ ಒದಗಿಸಬೇಕು.

ಇನ್ನು ಶಿಕ್ಷಣದ ಬಗ್ಗೆ ಕೆಲವು ಮಾತುಗಳನ್ನು ಸರಕಾರಕ್ಕೆ ಹೇಳಲು ಬಯಸುತ್ತೇನೆ. ಶಿಕ್ಷಣದ ಬಗ್ಗೆ 33 ಕೋಟಿಗೆ ಮೇಲ್ಪಟ್ಟು ಹಣವನ್ನು ಸರಕಾರ ಖರ್ಚು ಮಾಡುತ್ತಿದೆ. ಮಾಧ್ಯಮಿಕ ಶಿಕ್ಷಣ ಪುಕ್ಕಟೆ ಸಿಕ್ಕುವಹಾಗೆ ಸರಕಾರ ವ್ಯವಸ್ಥೆ ಮಾಡಿದೆ. ಆದರೆ ಶಿಕ್ಷಣ ಸಂಸ್ಥೆಗಳಲ್ಲಿ ಒಂದು ರೀತಿಯ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದನ್ನು ತಪ್ಪಿಸಲಿಕ್ಕೆ ಮುಂಜಾಗ್ರತೆ ಕ್ರಮ ಸರಕಾರ ತೆಗೆದು

ಕೊಳ್ಳುವುದು ಅವಶ್ಯಕವಾಗಿದೆ. ಅದೇನೆಂದರೆ, ಶಿಕ್ಷಣದಲ್ಲಿ ಜಾತೀಯತೆ ಪ್ರವೇಶವಾಗುತ್ತಿದೆ. ಜಾತೀಯತೆಯ ಮೇಲೆ ಶಿಕ್ಷಣ ಸಂಸ್ಥೆಗಳು ನಿರ್ಮಾಣವಾಗುತ್ತಿವೆ. ಜಾತೀಯತೆಯ ತಳಹದಿಯ ಮೇಲೆ ಹಾಸ್ಟೆಲುಗಳನ್ನೂ ಹೈಸ್ಕೂಲುಗಳನ್ನೂ ಪ್ರಾರಂಭ ಮಾಡಲಾಗುತ್ತಿದೆ. ಅದನ್ನು ತಪ್ಪಿಸಿ ಜಾತೀಯತೆ ಶಿಕ್ಷಣರಂಗದಲ್ಲಿ ಪ್ರವೇಶವಾಗದಂತೆ ನೋಡಿಕೊಳ್ಳಬೇಕು. ಜಾತ್ಯತೀತ ಭಾವನೆಯನ್ನು ಕಾಯ್ದುಕೊಂಡು ಹೋಗುವುದು ಅವಶ್ಯಕ. ಜಾತೀಯ ತಳಹದಿಯಮೇಲೆ ಇರತಕ್ಕ ಸಂಸ್ಥೆಗಳನ್ನು ತೆಗೆದುಹಾಕಿ ಅವುಗಳನ್ನು ಸರಕಾರದವರೇ ನಡೆಸಿಕೊಂಡು ಹೋಗುವುದು ಅಗತ್ಯ. ಕೆಲವು ಸಂಸ್ಥೆಗಳು ಜಾತೀಯತೆಯ ಹೆಸರನ್ನು ಸಹ ಬದಲು ಮಾಡಿಕೊಂಡಿವೆ. ಕರ್ನಾಟಕದಲ್ಲಿ ಲಿಂಗರಾಜ ಕಾಲೇಜು ಎಂದು ಇದ್ದುದನ್ನು ಲಿಬರಲ್ ಸೊಸೈಟಿ ಎಂದು ಮಾರ್ಪಾಟು ಮಾಡಿಕೊಂಡಿದೆ. ಆದರೆ ದುರ್ದೈವದಿಂದ ಇಂದು ಕೆಲವು ಜಾತೀಯ ಸಂಸ್ಥೆಗಳು ಹುಟ್ಟಿಕೊಂಡು ಶಿಕ್ಷಣರಂಗದಲ್ಲಿ ಜಾತೀಯ ಭಾವನೆ ಹುಟ್ಟಿಕೊಂಡಿದೆ. ಈ ರೀತಿ ಆಗಬಾರದಾಗಿತ್ತು. ಒಂದು ಜಾತಿಯ ಬಗ್ಗೆ ಮಠ ಧಾರ್ಮಿಕ ಸಂಸ್ಥೆಗಳು ಪ್ರತ್ಯೇಕವಾಗಿ ಇರುತ್ತವೆ. ಅಂಥಲ್ಲಿ ವೈಯಕ್ತಿಕವಾಗಿ ತಮ್ಮ ಧರ್ಮದ ಪ್ರಕಾರ ಅನುಸರಣೆ ಮಾಡಲಿ. ಆದುದರಿಂದ ಜಾತೀಯ ಭಾವನೆಯುಳ್ಳ ಶಿಕ್ಷಣ ಸಂಸ್ಥೆಗಳಿಗೆ ಸರಕಾರ ಗ್ರ್ಯಾಂಟು ಕೊಡಬಾರದು. ಇಂದು ಹಳ್ಳಿಗಳಲ್ಲಿ ಜನರಿಗೆ ಸಾಕಷ್ಟು ಶಿಕ್ಷಣ ಸೌಲಭ್ಯವಿಲ್ಲ. ಕೆಲವು ಕಡೆ ಕನ್ನಡ ಶಾಲೆಗಳನ್ನು ಮಿಷನರಿಗಳು ನಡೆಸುತ್ತಿದ್ದಾರೆ. ಒಂದೆರಡು ವರ್ಗಗಳಿಗೆ ಹುಡುಗರು ಬರುತ್ತಾರೆ. ಮುಂದೆ ಶಿಕ್ಷಣ ನಿಂತು ಹೋಗುತ್ತದೆ. ಇಷ್ಟು ಪ್ರಗತಿ ಸಾಲದು. ಇದಲ್ಲದೆ ಕೆಲವು ಕಡೆ ಉರ್ದು ಸಾಲೆಗಳನ್ನು ಪ್ರಾರಂಭ ಮಾಡಲಾಗುತ್ತಿದೆ. ಅಂಥ ಸಾಲೆಗಳಿಗೆ ಬರತಕ್ಕ ವಿದ್ಯಾರ್ಥಿಗಳ ಮಾತೃಭಾಷೆ ಉರ್ದು ಇರುವುದಿಲ್ಲ. ಉರ್ದು ಭಾಷೆ ಅವರಿಗೆ ಬರುವುದಿಲ್ಲ. ಆದರೂ ಕೂಡ ಸಂಸ್ಥೆಗಳನ್ನು ಸ್ಥಾಪನೆ ಮಾಡುತ್ತಾರೆ. ಅಂಥ ಶಿಕ್ಷಣ ಸಂಸ್ಥೆಗಳಲ್ಲಿ ಹುಡುಗರಿಗೆ ಉರ್ದು ಭಾಷೆಯೂ ಬರುವುದಿಲ್ಲ ಕನ್ನಡ ಭಾಷೆಯೂ ಬರುವುದಿಲ್ಲ. ಈ ರೀತಿ ಆಗಬಾರದು. ಮಕ್ಕಳಿಗೆ ಒಳ್ಳೇ ಶಿಕ್ಷಣ ದೊರೆತರೆ ಅವರ ಭವಿಷ್ಯ ಉಜ್ವಲವಾಗುತ್ತದೆ. ಆದುದರಿಂದ ಅಂಥ ಸಾಲೆಗಳಿಗೆ ಸರಕಾರ ಗ್ರ್ಯಾಂಟು ಕೊಡುವುದನ್ನು ನಿಲ್ಲಿಸಬೇಕು. ಮತ್ತು ಅಂಥ ಸಾಲೆಗಳನ್ನು ಸರಕಾರದವರೇ ನಡೆಸಬೇಕು ಎಂದು ಒತ್ತಿ ಹೇಳುತ್ತೇನೆ.

ಇನ್ನೂ ಅನೇಕ ವಿಷಯಗಳನ್ನು ಹೇಳುವುದು ಇದೆ. ಆದರೆ ಕಾಲಾವಕಾಶವಿಲ್ಲ. ಇದಲ್ಲದೆ ಇದು ಬಜೆಟ್ ಮೇಲಿನ ಸಾಮಾನ್ಯ ಚರ್ಚೆ ಆಗಿರುವುದರಿಂದ ಎರಡು ಮೂರು ಮಾತುಗಳನ್ನು ಸರಕಾರದ ಲಕ್ಷ್ಯಕ್ಕೆ ತಂದಿದ್ದೇನೆ. ನನ್ನ ಸಲಹೆ ಸೂಚನೆಗಳನ್ನು ಸರಕಾರ ಯೋಗ್ಯ ರೀತಿಯಲ್ಲಿ ವಿಚಾರ ಮಾಡಿ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ).—ಮಾನ್ಯ ಅಧ್ಯಕ್ಷರೇ, ನಮ್ಮ ಆರ್ಥಿಕ ಮಂತ್ರಿಗಳು ನಮ್ಮ ಮೈಸೂರು ರಾಜ್ಯದ 1967-68 ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಈ ಸಭೆಗೆ ಸಲ್ಲಿಸಿದ್ದಾರೆ. ಈ ಆಯವ್ಯಯ ಪಟ್ಟಿಗಾಗಿ ಎಲ್ಲರೂ ಹೆಮ್ಮೆ ಪಡಬೇಕಾಗಿದೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ ನಡೆದಿದೆ. ದೇಶದಲ್ಲಿ ಇಂದು ಆರ್ಥಿಕ ಮುಗ್ಗಟ್ಟು ಇರುವುದು ನಿಜ. ಆದರೂ ಕೂಡ ನಮ್ಮ ರಾಜ್ಯ ಸರಕಾರದವರು ನಮ್ಮ ಸಂಪನ್ಮೂಲಗಳ ಜೊತೆಗೆ ಕೇಂದ್ರ ಸರಕಾರದ ಸಹಾಯ ಪಡೆದು ಆಯವ್ಯಯ ಪಟ್ಟಿಯನ್ನು ಸಿದ್ಧಪಡಿಸಿರುವುದು ಸಮಾಧಾನ ಉಂಟು ಮಾಡಿದೆ. ಕೇಂದ್ರ ಸರಕಾರದವರೂ ಸಹ ನಮಗೆ ಹೆಚ್ಚು ಹಣ ಒದಗಿಸಿ ಕೊಟ್ಟಿದ್ದಾರೆ. ಹೆಚ್ಚು ಹಣ ಕೇಂದ್ರದಿಂದ ಪಡೆಯುವುದಕ್ಕೆ ನಮ್ಮ ಮುಖ್ಯ ಮಂತ್ರಿಗಳು ಮತ್ತು ಆರ್ಥಿಕ ಮಂತ್ರಿಗಳು ಕಾರಣರಾಗಿದ್ದಾರೆ. ಆದುದರಿಂದ ಅವರಿಗೆ ನಾವು ಮೆಚ್ಚಿಗೆ ವ್ಯಕ್ತ ಮಾಡಬೇಕಾಗಿದೆ. ಬೇರೆ ರಾಜ್ಯಗಳೊಂದಿಗೆ ತುಲನಾತ್ಮಕ ದೃಷ್ಟಿಯಿಂದ ನೋಡುವುದಾದರೆ ಕೇಂದ್ರದಿಂದ ನಮಗೆ ಬರಬೇಕಾದ ಸಹಾಯದಲ್ಲಿ ಯಾವ ರೀತಿಯಿಂದಲೂ ಕಡಿಮೆಯಾಗಿಲ್ಲ. ಅದು ಹೆಚ್ಚಿಗೆ ಇದೆ ಎಂದು ಹೇಳಬಹುದು. ಇವತ್ತಿನ ದಿವಸ ಎಲ್ಲರೂ ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಕರ್ತವ್ಯ ನಿರ್ವಹಿಸಬೇಕಾಗಿದೆ. ಧೈರ್ಯದಿಂದ ಪರಿಸ್ಥಿತಿ ಎದುರಿಸಬೇಕಾಗಿದೆ. ನಾವು ನಮ್ಮ ಕಾಲ ಮೇಲೆ ನಿಲ್ಲುವ ಶಕ್ತಿ ಪಡೆದುಕೊಳ್ಳಬೇಕಾಗಿದೆ. ಇಂದು ದೇಶದಲ್ಲಿ ಪಾರ್ಟಿಗಳಾಗಿ ಇನ್‌ಡಿಫರಂಟ್ ಆಟಿಟ್ಯೂಡ್ ಇಟ್ಟಿಕೊಂಡಿರುವುದು, ರಾಜ್ಯಕ್ಕೆ ಅಹಿತವನ್ನುಂಟುಮಾಡುವ ಹೇಳಿಕೆ ಕೊಡುವುದು ನೋಡಿ ಜನರು ದಿಗಿಲುಗೊಂಡಿದ್ದಾರೆ. ನಾವು ರಾಜ್ಯ ಕಟ್ಟಬೇಕಾಗಿದೆ. ಕೆಲ ಜನರ ಹೇಳಿಕೆಗಳು ದೇಶ ಕಟ್ಟುವುದಕ್ಕೆ ಸಹಾಯಕವಾಗುತ್ತಿಲ್ಲ. ಲ್ಯಾಂಡ್ ರೆವೆನ್ಯೂ ಕಡಿಮೆ ಮಾಡಬೇಕು, ಸರ್‌ಚಾರ್ಜ ಕಡಿಮೆ ಮಾಡಬೇಕು ವಾಟರ್ ರೇಟ್ ಕಡಿಮೆ ಮಾಡಬೇಕು ಎಂದು ಮುಂತಾಗಿ ಅವರು ಕೂಗು ಎಬ್ಬಿಸುತ್ತಿದ್ದಾರೆ. ಆದರೆ ಕೆಲಸ ಕಾರ್ಯಗಳಲ್ಲಿ ಯಾವುದೂ ಕಡಿಮೆಯಾಗಬಾರದಂತೆ. ಪ್ಲಾನುಗಳನ್ನು ಯಾವ ರೀತಿಯಿಂದಲೂ ಕಡಿಮೆ ಮಾಡಬಾರದಂತೆ. ಇದಕ್ಕೆ ಕೇಂದ್ರ ಸರಕಾರದ ಸಹಾಯ ಅಗತ್ಯವಾಗಿದೆ. ಜೊತೆಗೆ ನಾವೂ ಕೂಡ ನಮ್ಮ ಪಾಲಿನ ಹಣವನ್ನು ಒದಗಿಸಬೇಕು. ನಾವು ಧೈರ್ಯ

(ಶ್ರೀ ಎಸ್. ಎಂ. ಗುರೆಡ್ಡಿ)

ದಿಂದ ಜನತೆಯ ಸಹಾಯ ಕೇಳಿಕೊಳ್ಳಬೇಕು. ಮತ್ತು ಯೋಜನೆಗಳಿಗೆ ಹಣ ಒದಗಿಸಬೇಕಾಗಿದೆ. ಆದರೆ ಸಾಕಷ್ಟು ಹಣ ನಮ್ಮ ಪಾಲಿನ ಹಣ ಒದಗಿಸುತ್ತಿಲ್ಲ. ಆದುದರಿಂದ ನಮ್ಮ ಪ್ರಗತಿಯು ಸ್ವಲ್ಪ ಕುಂಠಿತವಾಗುತ್ತಿದೆ. ಈಗಾಗಲೇ ನಮ್ಮ ಅರ್ಥಿಕ ಮಂತ್ರಿಗಳು ಈ ವಿಚಾರವನ್ನು ಹೇಳಿದ್ದಾರೆ. ಕೇಂದ್ರ ಸರಕಾರದವರು 1967-68 ನೇ ಸಾಲಿಗಾಗಿ 38 ಕೋಟಿ ಬದಲು 36 ಕೋಟಿ ಒದಗಿಸಿದ್ದಾರೆ. ಕಾರಣ ನಮ್ಮ ಆಯವ್ಯಯದಲ್ಲಿ ಈಗ ಕಡಿತ ಮಾಡಬೇಕಾಗಿಲ್ಲ. ಓವರ್ ಡ್ರಾಫ್ಟ್ ಪರಿಸ್ಥಿತಿ ಕೂಡ ಸುಧಾರಿಸುವ ಸಾಧ್ಯತೆ ಇರುತ್ತದೆ. ಇದನ್ನು ಮಂತ್ರಿಗಳು ತೋರಿಸಿಕೊಟ್ಟಿದ್ದಾರೆ. 16 ಕೋಟಿ ರೂಪಾಯಿ ಓವರ್ ಡ್ರಾಫ್ಟ್ ಇದೆ. ಒಂದೆರಡು ವರ್ಷಗಳಲ್ಲಿ ಈ ಪರಿಸ್ಥಿತಿಯನ್ನು ನಿವಾರಿಸಬಹುದು. ಕೇಂದ್ರ ಸರಕಾರದಿಂದ ಸಾಲದ ರೂಪದಲ್ಲಿ ಹಣ ಪಡೆದಿರುವುದು ಓವರ್ ಡ್ರಾಫ್ಟನ್ನು ಕ್ಲಿಯರ್ ಮಾಡಲು ಸಾಧ್ಯವಾಗುತ್ತದೆ. ನಮ್ಮ ರಾಜ್ಯದಲ್ಲಿ ಕೆಲವು ಬಾಬುಗಳಲ್ಲಿ ಉಳಿತಾಯ ಮಾಡಲು ಸಾಧ್ಯವಿದೆ. ಇದಕ್ಕಾಗಿ ಸಲಹೆ ಸೂಚನೆ ಕೊಡಲು ಒಂದು ಕಮಿಟಿ ನೇಮಕವಾಗಿದೆ. ಆ ಸಮಿತಿ ರಿಪೋರ್ಟು ಸಹ ಕೊಟ್ಟಿದೆ. ಇದರಿಂದ ಎರಡು ಎರಡೂವರೆ ಕೋಟಿ ರೂಪಾಯಿ ಉಳಿತಾಯವಾಗುತ್ತದೆ ಎಂದು ಹೇಳಿದ್ದಾರೆ. ಇದು ಕಮಿಟಿಯವರು ಇಂದು ಹೆಮ್ಮೆಪಡತಕ್ಕಂಥಾದ್ದಾಗಿದೆ. ಇನ್ನು ಕೆಲವೊಂದು ಖಾತೆಗಳಲ್ಲಿ ಹೆಚ್ಚಿನ ಉಳಿತಾಯ ಮಾಡಲು ಸಾಧ್ಯವಿದೆ, ಮಾಡಿದರೆ ಎರಡೂವರೆ ಬದಲು ನಾಲ್ಕು ಕೋಟಿ ಉಳಿತಾಯವಾಗುವ ಅಂದಾಜು ಇದೆ. ಈಗಾಗಲೇ ಲ್ಯಾಂಡ್ ರೆವೆನ್ಯೂ ಕೋಡ್ ಸಹ ಪಾಸು ಮಾಡಲಾಗಿದೆ. ಆದರೂ ಒಂದೆರಡು ವಿಷಯಗಳನ್ನು ಕಂದಾಯ ಖಾತೆಯ ವಿಷಯ ಹೇಳಬೇಕಾಗಿದೆ. ಡಿವಿಜನಲ್ ಕಮಿಷನರ್ ಆಫೀಸ್ ವಿಚಾರದಲ್ಲಿ ಒಂದು ಮಾತು ಹೇಳಲು ಬಯಸುತ್ತೇನೆ.

ಹಿಂದಕ್ಕೆ ಉತ್ತರ ಕರ್ಣಾಟಕದಲ್ಲಿ ಬೊಂಬಾಯಿ ಸರ್ಕಾರದ ರಾಜ್ಯವಿದ್ದಾಗ ಡಿವಿಜನಲ್ ಕಮಿಷನರ ಆಫೀಸುಗಳಿದ್ದವು. ಆಗಿನ ಸರಕಾರ ವಿಚಾರಮಾಡಿ ಡಿವಿಜನಲ್ ಕಮೀಶನರ್ ಆಫೀಸುಗಳನ್ನು ತೆಗೆದುಹಾಕಬೇಕೆಂದು ತೆಗೆದುಹಾಕಿದರು. ಈಗ ರಾಜ್ಯದಲ್ಲಿರುವ ನಾಲ್ಕು ಡಿವಿಜನಲ್ ಕಮಿಷನರ ಆಫೀಸುಗಳನ್ನು ತೆಗೆದರೆ 30-35 ಲಕ್ಷ ರೂಪಾಯಿ ಉಳಿತಾಯವಾಗುತ್ತದೆ ಎಂದು ನನ್ನ ಅಂದಾಜು. ಅದರಂತೆ ಸಹಕಾರ ಇಲಾಖೆಯಲ್ಲಿ ಕೂಡ ಹೆಚ್ಚಾಗಿ ಉಳಿತಾಯ ಮಾಡಬಹುದು ಜಾಯಿಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್, ಅಸಿಸ್ಟೆಂಟ್ ರಿಜಿಸ್ಟ್ರಾರ್ ಹೀಗೆ ಬೇಕಾದಷ್ಟು ಹುದ್ದೆಗಳನ್ನು ಬೆಳೆಸಿದ್ದಾರೆ ಅವುಗಳಲ್ಲಿ ಒಂದೆರಡು ಕಡಿಮೆ ಮಾಡಬೇಕು ಅದೇ ರೀತಿ ವ್ಯವಸಾಯ ಇಲಾಖೆಯಲ್ಲಿ ಕೂಡ ಬೆಳೆಸಿಕೊಂಡು ಬಂದಿದ್ದಾರೆ. ನನಗನ್ನಿಸುವ ಮಟ್ಟಿಗೆ ಈ ಇಲಾಖೆಗಳಲ್ಲಿ ಹೆಚ್ಚಿನ ಉಳಿತಾಯ ಮಾಡಲು ಸಾಧ್ಯವಿದೆ. ಕೆಲಸ ಕಾರ್ಯಗಳಿಗೆ ಅತಂಕವಾಗುವುದಿಲ್ಲ. ಇವು ಒಂದಕ್ಕೊಂದು ಸಂಬಂಧವಿರುವಂಥ ಇಲಾಖೆಗಳು ಉದಾಹರಣೆಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್ ಮಾಡುವ ಕೆಲಸವನ್ನು ರಿಜಿಸ್ಟ್ರಾರ್ ಅವರೂ ಮಾಡುತ್ತಿರುತ್ತಾರೆ. ಒಂದಕ್ಕೊಂದು ಹೊಂದಿಕೆ ಮಾಡಲು ಸಾಧ್ಯವಿರುವಾಗ ಈ ರೀತಿ ಹುದ್ದೆಗಳನ್ನು ಹೆಚ್ಚು ಮಾಡುವುದು ಅಷ್ಟು ಸಮಂಜಸವೆನಿಸುವುದಿಲ್ಲ.

ಇದಲ್ಲದೆ ಇನ್ನೂ ಕೆಲವು ಬಾಬುಗಳಲ್ಲಿ ಮಿತವ್ಯಯವನ್ನು ಸಾಧಿಸುವುದಕ್ಕೆ ಸಾಧ್ಯವಿದೆ. ಆದಕಾರಣ ಉಳಿತಾಯ ಮಾಡುವ ಹೆಬ್ಬಯಕೆಯಿಂದ ದಿಟ್ಟ ಹೆಜ್ಜೆಯನ್ನಿಟ್ಟಿರುವ ಅರ್ಥಿಕ ಮಂತ್ರಿಗಳು ಇನ್ನೂ ಆಳವಾಗಿ ವಿಚಾರ ಮಾಡಿದರೆ ಹೆಚ್ಚು ಉಳಿತಾಯ ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ಮಾಡಲಿ ಎಂದು ಹೇಳುತ್ತಿದ್ದೇನೆ.

ಕೇಂದ್ರ ಸರ್ಕಾರದವರು ಅವರ ನೌಕರರಿಗೆ ತುಟ್ಟಿ ಭತ್ಯವನ್ನು ಹೆಚ್ಚು ಮಾಡಿದ್ದಾರೆ. ಅದು ನಮ್ಮ ರಾಜ್ಯದ ಮೇಲೆ ಪರಿಣಾಮ ಬೀರದೆ ಇರಲಾರದು. ಆದಕಾರಣ ಈಗಾಗಲೇ ನಮ್ಮ ಮುಖ್ಯ ಮಂತ್ರಿಗಳು ಮತ್ತು ಅರ್ಥಿಕ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಕೇಳಿಕೊಂಡಿದ್ದಾರೆ: ಹೀಗೆ ಮೇಲಿಂದ ಮೇಲೆ ತುಟ್ಟಿ ಭತ್ಯವನ್ನು ಏರಿಸುವುದರಿಂದ ಅದರ ಪರಿಣಾಮ ನಮ್ಮ ರಾಜ್ಯದ ಮೇಲೆಯೂ ಆಗುತ್ತದೆ ; ಅದನ್ನು ಮಾಡಬೇಡಿ ಎಂದ . ಆದರೆ ಕೇಂದ್ರ ಸರ್ಕಾರ ಇದಕ್ಕೆ ಲಕ್ಷ್ಯ ಕೊಡದೆ ತುಟ್ಟಿಭತ್ಯವನ್ನು ಏರಿಸುತ್ತಿದೆ. ಅದರ ಪರಿಣಾಮವಾಗಿ ನಮ್ಮ ಅರ್ಥಿಕ ಪರಿಸ್ಥಿತಿ ಹದಗೆಡುವುದಕ್ಕೆ ಒಂದು ಕಾರಣವಾಗಿದೆ. ಆದಕಾರಣ ತುಟ್ಟಿಭತ್ಯವನ್ನು ಏರಿಸುವುದಕ್ಕಿಂತ ಏರಿರುವಂಥ ಬೆಲೆಗಳನ್ನು ಕಡಮೆ ಮಾಡುವ ಕಡೆ ಹೆಚ್ಚು ಲಕ್ಷ್ಯ ವಹಿಸಬೇಕೆಂದು ಅರ್ಥಿಕ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇವತ್ತಿನ ದಿವಸ ಆಹಾರ ವಸ್ತುಗಳ ಬೆಲೆಗಳು ವಿಪರೀತ ಏರುತ್ತಿವೆ. ಅದರಂತೆಯೇ ಜೀವನಾವಶ್ಯಕವಾದ ಇತರ ವಸ್ತುಗಳ ಬೆಲೆಗಳೂ ಏರುತ್ತಿವೆ. ಇದು ತುಟ್ಟಿಭತ್ಯವನ್ನು ಏರಿಸುವುದರಿಂದ

ಆಗಿರಬಹುದು, ಅಥವಾ ಬೇರೆ ಕಾರಣಗಳಿರಬಹುದು. ಇದರಿಂದ ನಮ್ಮ ಆರ್ಥಿಕ ಪರಿಸ್ಥಿತಿಯು ಮೇಲೆ ಕೆಟ್ಟ ಪರಿಣಾಮವಾಗುತ್ತಿದೆ. ಸರ್ಕಾರ ಬೆಲೆಗಳು ಏರದಂತೆ ಹಿಡಿತವನ್ನು ಇಟ್ಟುಕೊಳ್ಳ ಬೇಕಾಗುತ್ತದೆ. ಜೊತೆಗೆ ಉತ್ಪತ್ತಿ ಹೆಚ್ಚಬೇಕು. ಆಹಾರದ ಉತ್ಪನ್ನವನ್ನು ಹೆಚ್ಚು ಮಾಡಬೇಕಾ ಗಿದೆ. ಈಗ ನಮ್ಮಲ್ಲಿ ಆಹಾರದ ಕೊರತೆ ವಿಶೇಷವಾಗಿ ಇಲ್ಲ ಎಂದು ಹೇಳಬೇಕಾಗಿದೆ. ಈಗ ಬೆಳೆ ಯುವ ಆಹಾರವನ್ನು ಸರಿಯಾಗಿ ಶೇಖರಣೆ ಮಾಡಿ ಅವು ಕೆಡದಂತೆ ನೋಡಿಕೊಂಡರೆ ನೂರಕ್ಕೆ ಐದರಷ್ಟು ಹೆಚ್ಚಿಗೆ ಉಳಿತಾಯವಾಗುತ್ತದೆ, ಮಾಡಬಹುದು. ಅಲ್ಲದೆ ಈಗ ರೈತರಿಗೆ ಕೊಡುವಂಥ ಸಹಾಯ, ಸಹಕಾರ ಇವುಗಳನ್ನು ಹೆಚ್ಚು ಮಾಡಿದ್ದಾರೆ ರೈತ ಹೆಚ್ಚಿಗೆ ಆಹಾರ ಬೆಳೆಯುತ್ತಾನೆ. ನೇರವಾಗಿ ರೈತರಿಗೆ ಹೆಚ್ಚು ಬೆಳೆಯುವುದಕ್ಕೆ ಈಗ ಸಹಾಯ ತಲಪುತ್ತಿಲ್ಲ. ಅವರಿಗೆ ಕೊಡುವಂಥ ಅಲ್ಪ ಸ್ವಲ್ಪ ಸಹಾಯದಿಂದ ಅವರು ತಮ್ಮ ಸಾಲವನ್ನು ತೀರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಹೆಚ್ಚು ಬೆಳೆ ಬೆಳೆಯಬೇಕು, ಅಭಿವೃದ್ಧಿ ಮಾಡಬೇಕು, ಎನ್ನುವುದರ ಕಡೆಗೆ ತೆಗೆದುಕೊಂಡ ಹಣವನ್ನು ಉಪಯೋಗ ಮಾಡುತ್ತಿಲ್ಲ. ಸರಕಾರ ಕೊಡುತ್ತಿರುವ ಸಹಾಯವನ್ನು ಹೆಚ್ಚಾಗಿ ಶ್ರೀಮಂತ ರೈತರೇ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಕಾರಣ ಬಡ ರೈತರಿಗೆ ಹೆಚ್ಚಿನ ಸಹಾಯವನ್ನು ನೀಡುವುದು ಅತಿ ಅವಶ್ಯ. ನಮ್ಮ ರಾಜ್ಯದಲ್ಲಿ ಹೆಚ್ಚಿನ ಆಹಾರ ಬೆಳೆಯಬೇಕಾದರೆ ನೀರಾವರಿಯ ಅವಶ್ಯಕತೆ ಇರುತ್ತದೆ. ನಮ್ಮ ರಾಜ್ಯದಲ್ಲಿ ಕೇವಲ ನೂರಕ್ಕೆ 8 ಭಾಗ ನೀರಾವರಿ ಇರುವುದನ್ನು ನೋಡಿದರೆ ಬಹಳ ವ್ಯಥೆಯಾಗುತ್ತದೆ. ಆಂಧ್ರದಲ್ಲಿ ನೂರಕ್ಕೆ 27-28, ಮದ್ರಾಸಿನಲ್ಲಿ ನೂರಕ್ಕೆ 40 ಎಕರೆ ನೀರಾವರಿ ಆಗಿರುತ್ತದೆ. ನಮ್ಮ ರಾಜ್ಯದಲ್ಲಿ ನೂರಕ್ಕೆ 8 ಎಕರೆ ನೀರಾವರಿ ಇರುವಾಗ ಆಹಾರ ಸ್ವಾವಲಂಬನೆಯನ್ನು ಸಾಧಿಸಿ ನಮ್ಮ ಕಾಲಮೇಲೆ ನಾವು ನಿಂತುಕೊಳ್ಳುವುದು ಯಾವಾಗ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ.

ಇವತ್ತಿನ ದಿವಸ ಸಾಕಷ್ಟು ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ದೊಡ್ಡ ದೊಡ್ಡ ಯೋಜನೆಗಳನ್ನು ಕೂಡ ಸಾಕಷ್ಟು ತೆಗೆದುಕೊಂಡಿದ್ದಾಗಿದೆ. ಹಣದ ಅಭಾವದಿಂದ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಇಷ್ಟೇ ಅಲ್ಲ, ನಾವು ಇಲ್ಲಿಯವರೆಗೆ ಮಾಡಿರುವಂಥ ಖರ್ಚು ಕೂಡ ವ್ಯರ್ಥ ವಾಗಿ ಹೋಗುವಂಥ ಸ್ಥಿತಿ ಕೆಲವು ಪ್ರಾಜೆಕ್ಟ್‌ಗಳಲ್ಲಿ ಕಂಡುಬರುತ್ತಿದೆ. ಯಾವ ರಾಜ್ಯ ನೀರಾವರಿ ಯಲ್ಲಿ ಇವತ್ತು ಹಿಂದುಳಿದಿದೆ, ಅದಕ್ಕೆ ಹೆಚ್ಚಿನ ಸಹಾಯ ಮಾಡಬೇಕು ಎನ್ನುವ ಭಾವನೆ ಕೇಂದ್ರ ಸರ್ಕಾರದಲ್ಲಿ ಮೂಡಬೇಕಾದ್ದು ಮುಖ್ಯ. ಹತ್ತು ಕೋಟಿ ರೂಪಾಯಿಗಳಿಗೆ ಮಿಕ್ಕಿರುವ ಪ್ರಾಜೆಕ್ಟ್ ಗಳನ್ನೆಲ್ಲ ಕೇಂದ್ರ ಸರ್ಕಾರ ವಹಿಸಿಕೊಳ್ಳಬೇಕು ಇಲ್ಲವೆ ನೇರವಾಗಿ ಸಾಲದ ರೂಪದಲ್ಲಿಯಾದರೂ ಹಣವನ್ನು ಒದಗಿಸಿದರೆ ದೊಡ್ಡ ದೊಡ್ಡ ನೀರಾವರಿ ಕಾರ್ಯಗಳನ್ನು ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಸಾಧ್ಯ ಎಂದು ನಮ್ಮ ರಾಜ್ಯ ಸರ್ಕಾರ ತಿಳಿಸಿದರೂ ಕೂಡ ಇನ್ನೂವರೆಗೆ ಯಾವ ಏರ್ಪಾಡೂ ಆಗಿಲ್ಲ. ಇವತ್ತಿನ ದಿವಸ ಘಟಪ್ರಭಾ, ಮಲಪ್ರಭಾ, ಕೃಷ್ಣಾ, ಹೇಮಾವತಿ, ಕಂಬದಕಡ ಇಂಥ ಪ್ರಾಜೆಕ್ಟ್‌ಗಳು ಮುಗಿಯಬೇಕಾದರೆ, ನಮ್ಮ ರಾಜ್ಯದಲ್ಲಿರುವ ಸಂಪನ್ಮೂಲಗಳಿಂದ ಇವುಗಳನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಆದಕಾರಣ ಕೇಂದ್ರ ಸರ್ಕಾರ ನಮಗೆ ಸಹಾಯ ಮಾಡದೆ ಇದ್ದರೆ, ದಾಮೋದರ ವ್ಯಾಲಿ ಕಾರ್ಪೊರೇಷನ್ ರೀತಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಒಂದು ಕಾರ್ಪೊರೇಷನ್ ಮಾಡಿ ಅದರ ಮುಖಾಂತರ ಹಣವನ್ನು ಒದಗಿಸುವುದು ಸಮಂಜಸವೆಂದು ನನಗನ್ನಿಸುತ್ತದೆ. ಯಾವ ರೀತಿ ಯಲ್ಲಿಯಾದರೂ ಸರ್ಕಾರದವರು ನೀರಾವರಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಂಡು ಈಗ ತೆಗೆದುಕೊಂಡ ಎಲ್ಲ ನೀರಾವರಿ ಕೆಲಸಗಳನ್ನೂ ಪೂರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಮೈಸೂರು ರಾಜ್ಯಕ್ಕೆ ಒಂದು ದೊಡ್ಡದಾದ ಯೋಜನೆ ಎಂದರೆ, ಕೃಷ್ಣ ಮೇಲ್ದಂಡೆ ಯೋಜನೆ. ಅದಕ್ಕೆ 125-150 ಕೋಟಿ ರೂಪಾಯಿ ಬೇಕಾಗುತ್ತದೆಂದು ಹಿಂದೆ ಅಂದಾಜು ಮಾಡ ಲಾಗಿತ್ತು. ಈಗ ಅದು 200 ಕೋಟಿಗೆ ಹೋಗಬಹುದು. ರಾಜ್ಯ ಸರ್ಕಾರದವರು ಕೆಲಸ ಪ್ರಾರಂಭಿಸಿದ್ದಾರೆ. ಕಟ್ಟಡದ ಕೆಲಸ, ರಸ್ತೆ ಕೆಲಸ, ಆಫೀಸರುಗಳ ಕ್ವಾರ್ಟರುಗಳು ಆಗಿವೆ. ಆದರೆ ಇವು ಈ ಕಟ್ಟಡಗಳು ಕೂಡ ಬಿದ್ದುಹೋಗುವಸ್ಥಿತಿಯಲ್ಲಿವೆ. ಆದಕಾರಣ ನಾನು ಕಳಕಳಿಯಿಂದ ಕೇಳುವುದು ಇಷ್ಟೆ, ಈಗ ಅಲ್ಲಿ ಏನು ಕೆಲಸ ಮಾಡಿದ್ದಾರೆ ಅದು ಉಳಿಯುವಂತೆ ದುರಸ್ತಿ ಕೆಲಸ ಮಾಡಬೇಕು ಮತ್ತು ಈ ಯೋಜನೆಯನ್ನು ಬೇಗ ಕಾರ್ಯಗತ ಮಾಡುವುದರಿಂದ ಆಗಾಗ್ಗೆ ಬರಗಾಲಕ್ಕೆ ತುತ್ತಾಗುವ ಪ್ರದೇಶದ ಜನರಿಗೆ ಖಾಯಮ್ ಪರಿಹಾರವನ್ನು ಒದಗಿಸಿದ ಹಾಗೆ ಆಗುತ್ತದೆ. ಆದ್ದರಿಂದ ಈ ಪ್ರಾಜೆಕ್ಟ್ ಕಡೆ ರಾಜ್ಯ ಸರ್ಕಾರ ಹೆಚ್ಚು ಲಕ್ಷ ವಹಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಹೆಚ್ಚಾಗಿ ಸಣ್ಣ ನೀರಾವರಿ ಕಾರ್ಯಗಳಲ್ಲಿ ನಮ್ಮ ರಾಜ್ಯ ಸರ್ಕಾರ ಸಾಧಿಸಿರುವ ಪ್ರಗತಿ ನಾವು ಹೆಮ್ಮೆ ಪಡುವಂಥದಾಗಿದೆ. ಇದರ ಜೊತೆಗೆ ದೊಡ್ಡ ನೀರಾವರಿ ಯೋಜನೆಗಳನ್ನೂ ತೀವ್ರ ತೆಗೆದುಕೊಳ್ಳ ಬೇಕೆಂದು ಪದೇ ಪದೇ ಹೇಳುತ್ತಿದ್ದೇನೆ.

(ಶ್ರೀ ಎಸ್. ಎಂ. ಗುರೆಡ್ಡಿ)

ನೀರಾವರಿಯ ಜೊತೆಗೆ ಗೊಬ್ಬರದ ಅವಶ್ಯಕತೆ ಹೆಚ್ಚಾಗಿದೆ. ಗೊಬ್ಬರದ ಅವಶ್ಯಕತೆಯನ್ನು ಪೂರೈಸುವುದರ ಸಲುವಾಗಿ ರಾಜ್ಯ ಸರ್ಕಾರ ದಿಟ್ಟತನದ ಹೆಜ್ಜೆ ಇಟ್ಟು ಈಗಾಗಲೇ ಒಂದೆರಡು ಕಾರ್ಖಾನೆಗಳನ್ನು ತೆರೆಯಲು ಹೊರಟಿದೆ. ಅದರಿಂದ ನಮ್ಮ ಗೊಬ್ಬರದ ಬೇಡಿಕೆಯನ್ನು ಪೂರೈಕೆ ಮಾಡಿಕೊಳ್ಳಬಹುದು. ಈಗಿರುವ ಗೊಬ್ಬರವನ್ನು ಸರಿಯಾಗಿ ಹಂಚುವ ವ್ಯವಸ್ಥೆ ಮಾಡಬೇಕು. ಹೆಚ್ಚು ಅವಶ್ಯಕತೆ ಇರುವ ಪ್ರದೇಶಗಳಿಗೆ ಅಂದರೆ ನೀರಾವರಿ ಪ್ರದೇಶಕ್ಕೆ ಮೊದಲು ಗೊಬ್ಬರವನ್ನು ಒದಗಿಸಿ ಅನಂತರ ಉಳಿದ ಪ್ರದೇಶಗಳಿಗೆ ಒದಗಿಸುವಂತೆ ಏರ್ಪಾಡನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಮ್ಮ ರಾಜ್ಯದಲ್ಲಿ ನಿರುದ್ಯೋಗ ಬಹಳ ಬೆಳೆಯಲಿಕ್ಕೆ ಹತ್ತಿದೆ. ಅದರಲ್ಲಿಯೂ ಕಲಿತವರಲ್ಲಿ ನಿರುದ್ಯೋಗ ಹೆಚ್ಚಾಗಿದೆ. ಒಕ್ಕಲಿಗರಲ್ಲಿ ಕೂಡ ಕೆಲವೊಂದು ಪ್ರದೇಶಗಳಲ್ಲಿ ನಿರುದ್ಯೋಗ ಹೆಚ್ಚಾಗಿದೆ. ಇದನ್ನು ಹೋಗಲಾಡಿಸಬೇಕಾದರೆ ನಾವು ಕೇವಲ ಒಕ್ಕಲುತನದ ಅಭಿವೃದ್ಧಿ ಮಾಡಿದರೆ ಸಾಲದು. ಔದ್ಯಮಿಕ ಕ್ಷೇತ್ರದಲ್ಲಿ ಕೂಡ ಪ್ರಗತಿಯನ್ನು ಸಾಧಿಸಬೇಕಾಗಿದೆ. ಆದಕಾರಣ ಮೈಸೂರು ಸಣ್ಣ ಸಂಸ್ಥಾನವಾಗಿದ್ದಾಗ ಯಾವ ಒಂದು ಹೆಸರನ್ನು ಪಡೆದಿತ್ತೋ ಆ ಹೆಸರನ್ನು ನಮ್ಮ ರಾಜ್ಯ ಪುನಃ ಪಡೆಯಬೇಕಾದರೆ ಹೆಚ್ಚಿನ ಉದ್ಯಮಗಳನ್ನು ತೆಗೆಯಲೇಬೇಕು. ಹಿಂದೆ ಇದ್ದಂತೆ ಈಗ ನಮಗೆ ವಿದ್ಯುಚ್ಛಕ್ತಿಯ ಕೊರತೆ ಇಲ್ಲ, ಹೆಚ್ಚಿಗೆ ವಿದ್ಯುಚ್ಛಕ್ತಿ ಪುರೋಟಿಯಾಗುತ್ತಿದೆ. ಆದಕಾರಣ ಉದ್ಯಮದ ಕಡೆಗೆ ಹೆಚ್ಚು ಲಕ್ಷ್ಯ ಕೊಡುವುದು ಬಹಳ ಅಗತ್ಯವೆಂದು ನಾನು ಭಾವಿಸಿದ್ದೇನೆ. ಈಗಾಗಲೇ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ರಾಜ್ಯದಲ್ಲಿ ಸ್ಥಾಪಿಸಲು ಮುಖ್ಯ ಮಂತ್ರಿಗಳು ಅನೇಕ ಉದ್ಯಮದಾರರನ್ನು ಆಹ್ವಾನಿಸಿದ್ದಾರೆ ಕೆಲವರು ಮುಂದೆ ಬಂದಿದ್ದಾರೆ. ಆದಷ್ಟು ತೀವ್ರ ಕೈಗಾರಿಕೆಗಳು ಬೆಳೆಯುವಂತೆ ನೋಡಿಕೊಳ್ಳಬೇಕು. ಮತ್ತು ಇದರ ಜೊತೆಗೆ ಯಾವ ಪ್ರದೇಶ ಉದ್ಯಮದಲ್ಲಿ ಹಿಂದುಳಿದಿದೆಯೋ ಆ ಪ್ರದೇಶದ ಕಡೆ ಹೆಚ್ಚು ಲಕ್ಷ್ಯ ಕೊಡಬೇಕು, ಒಂದೇ ಕಡೆ ಎಲ್ಲ ಕೈಗಾರಿಕೆಗಳನ್ನೂ ಕೇಂದ್ರೀಕರಿಸುವುದು ಅಷ್ಟು ಸಮಂಜಸವಲ್ಲ. ಅಲ್ಲದೆ ಈಗ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ಪ್ರಶ್ನೆ ಇದೆ, ಆ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳು ಕೂಡ ಹೆಚ್ಚು ಪ್ರಯತ್ನಮಾಡಬೇಕು. ಹೊಸಪೇಟೆಯು ಉಕ್ಕಿನ ಕಾರ್ಖಾನೆ ಸ್ಥಾಪಿಸಲು ಯೋಗ್ಯವಾದ ಸ್ಥಳವೆಂದು ಹೊರದೇಶಗಳ ಪ್ರವೀಣರು ಸಹ ಒಪ್ಪಿದ್ದಾರೆ. ಅದು ಯೋಗ್ಯವಾದ ಸ್ಥಳ ಎಂದು. ಇದು ಕೇವಲ ಮೈಸೂರು ದೇಶಕ್ಕೆ ಸಂಬಂಧಪಟ್ಟ ಉದ್ಯಮವಲ್ಲ, ಇಡೀ ಹಿಂದೂಸ್ಥಾನಕ್ಕೆ ಸಂಬಂಧಪಟ್ಟಂಥಾದ್ದು ಎಂದು ಭಾವಿಸಿ ಕೇಂದ್ರ ಸರಕಾರ ವಿಶಾಲದೃಷ್ಟಿಯಿಂದ ನೋಡಿ ಹೊಸಪೇಟೆಯಲ್ಲೇ ಅದನ್ನು ಪ್ರಾರಂಭಿಸಲು ಮನಸ್ಸುಮಾಡಬೇಕು ಎಂದು ಹೇಳಬಯಸುತ್ತೇನೆ. ಇದರ ಜೊತೆಗೆ ಈಗಾಗಲೇ ಕೇಳಿಬರುತ್ತಿರುವ ಹಾಗೆ ಕುದುರೆಮುಖ ಪ್ರದೇಶದಲ್ಲಿ ಬೇಕಾದಷ್ಟು ಕಬ್ಬಿಣದ ಅದುರು ಇದೆ, ಅದನ್ನು ಉಪಯೋಗಮಾಡಿಕೊಳ್ಳಲು ಹಣದ ಅಡಚಣೆಇದೆ. ಆದಕ್ಕಾಗಿ ನಾವು ಕೇಂದ್ರಸರಕಾರದಿಂದ ಹೆಚ್ಚಿನ ಸಹಾಯವನ್ನು ಕೇಳಬೇಕು. ಮತ್ತು ಈ ಅದುರನ್ನು ಪರದೇಶಗಳಿಗೆ ಕಳಿಸುವುದರಿಂದ ಫಾರಿನ್ ಎಕ್ಸ್‌ಛೇಂಜ್ ಸಹ ದೊರೆಯುವುದರಿಂದ ಇದಕ್ಕೆ ಹೆಚ್ಚು ಲಕ್ಷ್ಯಕೊಡಬೇಕು.

ಸಿಮೆಂಟ್ ಕಾರ್ಖಾನೆಗಳು ಬೆಳೆಯುವುದಕ್ಕೆ ಅವಕಾಶವಿದೆ. ಬಿಜಾಪುರ ಜಿಲ್ಲೆಯ ಬಾಗಲಕೋಟೆಯಲ್ಲಿ ಅಲ್ಲದೆ ತಾಳಿಕೋಟೆಯ ಕೆಲವು ಭಾಗಗಳಲ್ಲಿ ಸಿಮೆಂಟು ತಯಾರಿಸಲು ಬೇಕಾದ ಕಚ್ಚಾ ಪದಾರ್ಥಗಳಿವೆ, ಕಾರಣ ಅತ್ತಕಡೆ ಗಮನಕೊಟ್ಟು ಎಲ್ಲೆಲ್ಲಿ ಯಾವ ಯಾವ ಕೈಗಾರಿಕೆ ಸ್ಥಾಪಿಸಲು ಅವಕಾಶವಿದೆ ಎಂಬುದನ್ನು ಸರ್ವೆಮಾಡಿ ಅಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಕ್ರಮ ಕೈಕೊಳ್ಳಬೇಕು.

ಒಕ್ಕಲುತನದ ವಿಚಾರದಲ್ಲಿ ಪ್ರಗತಿ ಸಾಧಿಸಲು ಹೆಚ್ಚು ಪ್ರಯತ್ನ ನಡೆದಿದೆ. ಈ ವಿಚಾರದಲ್ಲಿ ಎಷ್ಟು ಶ್ರದ್ಧೆ ವಹಿಸಿದರೂ ಸಾಲದು. ರಾಜ್ಯದಲ್ಲಿ ಕೆಲವು ಕಡೆ ಸಾಯಿಲ್ ಕನ್‌ಸರ್ವೇಷನ್ ಕೆಲಸ ವಡ್ಡು ಹಾಕುವ ಕೆಲಸ ಮುಂತಾದ್ದು ನಡೆಯುತ್ತಿದೆ. ಆದರೆ ವಡ್ಡು ಹಾಕಲಿಕ್ಕೆ ಖರ್ಚಾಗುವ ಹಣವನ್ನು ಕೊಡಲು ರೈತರಿಗೆ ಸಾಧ್ಯವಿಲ್ಲದಂತಾಗಿದೆ. ವಡ್ಡುಗಳನ್ನು ಕನಿಷ್ಟ ಮತ್ತು ಮಧ್ಯಮ ತರಗತಿಯ ಜಮೀನುಗಳಲ್ಲಿ ಹಾಕುತ್ತಾರೆ. ಭೂಮಿಯ ಕಿಮ್ಮತ್ತಿಗಿಂತಲೂ ವಡ್ಡಿನ ಬೆಲೆ ಜಾಸ್ತಿಯಾಗುತ್ತದೆಯಾದಕಾರಣ ಬಡ ರೈತರಿಗೆ ಈ ಹಣವನ್ನು ಕೊಡಲಿಕ್ಕೆ ಆಗುವುದಿಲ್ಲ. ಕಾರಣ ಸರ್ಕಾರದವರು ಕಾಲುಭಾಗ ಹಣವನ್ನು ಮಾತ್ರ ರೈತರಿಂದ ವಸೂಲು ಮಾಡಬೇಕು. ಮಿಕ್ಕಿದ್ದನ್ನು ಸರಕಾರವೇ ವಹಿಸಿಕೊಳ್ಳಬೇಕು.

ಮುಂಬಯಿ ಕರ್ನಾಟಕದಲ್ಲಿ ಭೂಮಿ ಚೌಳಾಗಲಿಕ್ಕೆ ಹತ್ತಿದೆ. ಕೆಲವು ಕಡೆ ಬಿಜಾಪುರ ಜಿಲ್ಲೆಯಲ್ಲಿ 20 ಸಾವಿರ ಎಕರೆ ಭೂಮಿ ಚೌಳಾಗಿದೆ ಎಂದು ಅಂದಾಜಿದೆ. ಒಂದೊಂದು ಹೊಲಗಳು

ಹೀಗಾಗಿ ನೂರು ಚೀಲ ಗೋಧಿ ಬೆಳೆಯುತ್ತಿದ್ದವು. ಈಗ ಒಂದು ಕಾಳೂ ಕೂಡ ಆ ಭೂಮಿಯಲ್ಲಿ ಬೆಳೆಯಲಿಕ್ಕೆ ಸಾಧ್ಯವಿಲ್ಲ. ಚೌಳನ್ನು ತೆಗೆಯಲು ರೈತರಿಗೆ ಒಂದು ಎಕರೆಗೆ 50 ರೂಪಾಯಿ ನಬ್ಸಿಡಿ ಕೊಡುವ ಪದ್ಧತಿ ಇದೆ. ಆದರೆ ರೈತ ತನ್ನ ಚೌಳು ಭೂಮಿಯನ್ನು 50 ರೂಪಾಯಿಯಿಂದ ಸರಿಮಾಡಲು ಸಾಧ್ಯವೆ ಎಂಬುದನ್ನು ಸಂಬಂಧಿಸಿದ ಅಧಿಕಾರಿಗಳು ವಿಚಾರಮಾಡಲಿ. ಚೌಳಿನಿಂದ ಭೂಮಿಗಳು ಕೆಡುತ್ತಿರುವ ಕಡೆ ಸರಕಾರದವರೇ ನೇರವಾಗಿ ಕಾರ್ಯ ಕೈಗೊಂಡು ಕೆಡುತ್ತಿರುವ ಮಣ್ಣನ್ನು ಕಾಪಾಡಬೇಕು. ಭೂಮಿ ಸಾಗುವಳಿಗೆ ಯೋಗ್ಯವಾದ ಮೇಲೆ ರೈತರಿಂದ ಹಣ ವಸೂಲ ಮಾಡಲು ರೈತರು ಬೇಕಾದರೆ ಬಾಂಡು ಬರೆದುಕೊಡುತ್ತಾರೆ ಅಡ್ಡಿ ಇಲ್ಲ. ಚೌಳು ಭೂಮಿ ಹೆಚ್ಚಲು ಕೆಲವು ಕಡೆ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕಾರಣರಾಗಿದ್ದಾರೆ. ಪಿ.ಡಬ್ಲ್ಯು.ಡಿ. ರಸ್ತೆಯಲ್ಲಿ ಅಂಡರ್‌ಗ್ರೌಂಡ್ ಪೂರ್ ಕಟ್ಟಿಲ್ಲ. ಲೋಲೆವಲ್ ಕಾಲುವೆಗಳಿಂದ ನೀರು ನಿಂತು ಕೆಲವು ಜಮೀನುಗಳು ಚೌಳು ಭೂಮಿಗಳಾಗಲು ಕಾರಣವಾಗಿದೆ. ಅಲ್ಲಿ ಓಪನಿಂಗ್ ಸರಿಯಾಗಿ ಮಾಡಿದರೆ ಚೌಳು ಹೋಗುತ್ತದೆಂದು ಹೇಳುತ್ತಿದ್ದಾರೆ. ಈಗ ಕೆಲವು ಕಡೆ ದೋಣಿ, ನದಿಯ ಪ್ರವಾಹ ಇದೆ. ಅದು ಮುಚ್ಚಿದೆ ಅವನ್ನು ಆಳವಾಗಿ ಅಗೆಸಿದರೆ ಚೌಳು ಹೋಗುತ್ತದೆಂದು ಹೇಳುತ್ತಿದ್ದಾರೆ. ಇಂಥ ದೊಡ್ಡ ಯೋಜನೆಯನ್ನು ರೈತರು ಮಾಡಲಿಕ್ಕೆ ಸಾಧ್ಯವಿಲ್ಲ. ಸರಕಾರವೇ ನೇರವಾಗಿ ಇದನ್ನು ಮಾಡಿ ಮತ್ತೆ ರೈತರಿಂದ ಹಣ ವಸೂಲುಮಾಡಬಹುದು.

ರಾಜ್ಯದಲ್ಲಿಯ ಜವಳಿ ಗಿರಣಿಗಳ ವಿಚಾರ. ಈಗಾಗಲೆ ನೂಲು ಮತ್ತು ಬಟ್ಟೆ ಗಿರಣಿಗಳನ್ನು ಕೋ-ಆಪರೇಟಿವ್ಸ್ ಮೂಲಕ ನಡೆಸಬೇಕೆಂದು ಲೈಸನ್ಸ್ ಕೊಟ್ಟಿದ್ದಾರೆ. ಆದರೆ ನಮ್ಮ ಭಾರತಾದ್ಯಂತ ಈಗಿನ ಪರಿಸ್ಥಿತಿ ನೋಡಿದರೆ, ಈ ಗಿರಣಿಗಳಲ್ಲಿ ಅನೇಕ ಗಿರಣಿಗಳು ಸರಿಯಾಗಿ ನಡೆಯುವ ಸೂಚನೆ ಕಾಣುವುದಿಲ್ಲ. ಎಲ್ಲಾ ಕಡೆಯೂ ಅವನ್ನು ಮುಚ್ಚುವ ಪರಿಸ್ಥಿತಿ ಇದೆ. ಟೆಕ್ಸ್‌ಟೈಲ್ ಇಂಡಸ್ಟ್ರೀಸ್‌ಗೆ, ಸ್ಪಿನ್ನಿಂಗ್ ಮಿಲ್ಲುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅವು ಲಾಭದಾಯಕವಾಗಿ ನಡೆಯುವುದಕ್ಕೆ ಈಗಿನ ವಾತಾವರಣ ಸರಿ ಇಲ್ಲವಾಗಿದೆ. ಆದಕಾರಣ ಈಗ ಪ್ರಾರಂಭಿಸಿರುವುದನ್ನಾದರೂ ಚೆನ್ನಾಗಿ ನಡೆಸಿ ಮುಂದೆ ಅನುಕೂಲವಾದಾಗ ಬೇರೆ ಸ್ಥಾಪಿಸುವುದು ಒಳ್ಳೆಯದು. ಕೆಲವು ಕಾಲ ಹೊಸದನ್ನು ತೆರೆಯುವ ಕೆಲಸ ಮುಂದುವರಿಸುವುದು ಉಚಿತ. ಮುಂಬಯಿ, ಅಹಮದಾಬಾದು ಮುಂತಾದ ಅನೇಕ ಕಡೆಗಳಲ್ಲಿ ಈ ಕೈಗಾರಿಕೆಗಳು ಲಾಭದಾಯಕವಾಗಿ ನಡೆಯುವುದಿಲ್ಲವೆಂದು ಕಂಡುಬಂದಿರುವುದರಿಂದ ಹೆಚ್ಚು ಹಣ ಈ ಬಾಬಿಗೆ ವಿನಿಯೋಗಿಸುವುದು ಸರಿಯಲ್ಲ. ಈ ಸಂಬಂಧವಾದ ಖರ್ಚನ್ನು ಕೆಲವು ದಿವಸಗಳವರೆಗಾದರೂ ಮುಂದುವರಿಸಬೇಕು. ವ್ಯರ್ಥವಾಗಿ ಹಣ ಖರ್ಚು ಮಾಡುವುದು ಬೇಡ ಎಂದು ನಾನು ಸಲಹೆ ಮಾಡುತ್ತೇನೆ.

ಎಂ.ಎಸ್.ಇ.ಬಿ. ಇದು ಕೆಲವೊಂದು ಪ್ರೋಗ್ರಾಂ ಹಾಕಿಕೊಂಡು ಕೆಲಸ ನಡೆಸಿದೆ. ಇದರ ಕೆಲಸ ಎಷ್ಟು ಚುರುಕಾಗಿ ನಡೆಯುತ್ತಿದೆಯೋ ಅಷ್ಟೇ ಚುರುಕಾಗಿ ಹಾಳಾಗುತ್ತಿದೆ. ಇವತ್ತು ಅಲ್ಲಿ ಟ್ರೈನ್ಡ್ ಜನರಿರುವರೇ ಎಂಬ ಸಂಶಯವಿದೆ. ಅಲ್ಲಿರುವವರು ಮನಸ್ಸಿಟ್ಟು ಕೆಲಸ ಮಾಡುವಂತೆ ಕಾಣುವುದಿಲ್ಲ. ಉದಾಹರಣೆಗೆ ಬಾಗೇವಾಡಿಯಲ್ಲಿ 110 ಕಿಲೋವಾಟ್ಸ್ ಲೈನ್ ಎಳೆದು ಪುನಃ ಕೆಲವು ಕಡೆ 33 ಕಿಲೋವಾಟ್ಸ್ ಲೈನು ಎಳೆದಾಗ್ಗೆ ಬಿಜಾಪುರ ಒಂದು ಕಡೆ ಮತ್ತೊಂದು ತಾಳಿಕೋಟಿವರೆಗೆ ಹೋಗಿದೆ. ಬಾಗೇವಾಡಿಯಿಂದ ಬಿಜಾಪುರಕ್ಕೆ 33 ಕಿಲೋವಾಟ್ಸ್ ಲೈನು ಹಾಕಿರುವುದು ಹಾಕಿದ ಕೆಲವೇ ದಿನಗಳಲ್ಲಿ ಎಲ್ಲ ಕಂಬಗಳೂ ಉರುಳಿ ಬಿದ್ದವು. ವಿದ್ಯುತ್ತನ್ನು ಪದಗಿಸಿದ ಮೇಲೆ ಕಂಬಗಳು ಬಿದ್ದಿದ್ದರೆ ಅನೇಕರು ಸಾಯುತ್ತಿದ್ದರು. ಇರಲಿ ಕರೆಂಟು ಬಂದಮೇಲೆ ಆದ ತೊಂದರೆಯನ್ನು ಹೇಳಬೇಕಾಗಿದೆ. ಬಾಗೇವಾಡಿಯಲ್ಲಿ 8-10 ದಿವಸಗಳಲ್ಲೇ 2-3 ಟ್ರಾನ್ಸ್‌ಫಾರ್ಮರುಗಳು ಸುಟ್ಟು ಎರಡು ಮೂರು ತಿಂಗಳುಗಳಿಂದ ದೀಪವಿಲ್ಲದೆ ತೊಂದರೆಯಾಗಿದೆ. ಕಂಬಗಳು ಬಿದ್ದು ಹೋಗುತ್ತಿವೆ. ಹೀಗಾಗಿ ಮಾಡಿದ ಕೆಲಸ ಪುನಃ ಮಾಡುವಂತಾಗಿ ಖರ್ಚು ಹೆಚ್ಚಾಗಿದೆ. ಆದಕಾರಣ ಹೆಚ್ಚು ಅನುಭವವಿರುವವರನ್ನು ಅಲ್ಲಿಗೆ ಹಾಕಬೇಕು. ಉಪಯೋಗಿಸುವ ಸಾಮಾನುಗಳ ಕ್ವಾಲಿಟಿ ಕೂಡ ಸರಿಯಾಗಿದೆಯೋ ಎಂದು ನೋಡಲು ಸಿಬ್ಬಂದಿಯನ್ನು ಸಹ ಇಡಬೇಕು.

ಶಿಕ್ಷಣದ ವಿಚಾರದಲ್ಲಿ ಇಲ್ಲಿಯವರೆಗೆ ಮಾತನಾಡಿದವರು ಹೇಳಿದ್ದಾರೆ. ನಮ್ಮ ರಾಜ್ಯ ಶಿಕ್ಷಣ ರಂಗದಲ್ಲಿ ಹೆಚ್ಚು ಪ್ರಗತಿಯನ್ನು ಸಾಧಿಸುತ್ತದೆಯಾದರೂ ಶಿಕ್ಷಣದ ಮಟ್ಟ ಕೆಳಕ್ಕೆ ಹೋಗಿದೆ. ಕಾರಣ ಮಾಸ್ ಎಜುಕೇಷನ್ ಇದೆ ಎಂದು ಹೇಳಬಹುದು. ಆದರೆ ಕ್ವಾಲಿಟಿ ಕೆಡಿಸಬೇಕಾಗಿಲ್ಲ. ಅದನ್ನು ಸುಧಾರಿಸುವುದಕ್ಕೆ ಸಾಧ್ಯವಿದೆ. ಹೇಗೆ ಸುಧಾರಿಸಬೇಕೆಂಬುದನ್ನು ಈಗಾಗಲೇ ನುರಿತವರನ್ನು ಸೇರಿಸಿ ಒಂದು ಸಮಿತಿ ಮಾಡಿ ಅದರ ಮೂಲಕ ಹೆಚ್ಚು ಪ್ರಗತಿ ಸಾಧಿಸುವುದಾಗಿ ಹೆಚ್ಚು ಆಸೆ ತೋರಿಸಿದ್ದಾರೆ. ಇದು ಹೆಮ್ಮೆ ಪಡುವ ವಿಚಾರ.

(ಶ್ರೀ ಎಸ್. ಎಂ. ಗೌರೆಡ್ಡಿ)

ಇನ್ನೊಂದು ಮಾತನ್ನು ಈ ವಿದ್ಯಾಖಾತೆಯ ಬಗ್ಗೆ ಹೇಳಬೇಕಾಗಿದೆ. ವಿದ್ಯಾಖಾತೆಯಲ್ಲೇನೋ ಸಿಬ್ಬಂದಿ ಹೆಚ್ಚಾಗಿದೆ. ಆದರೆ ಸರಿಯಾಗಿ ಹೊಂದಿಕೆ ಮಾಡಬೇಕಾಗಿದೆ. ಶಿಕ್ಷಕರ ಅಭಾವ ಮುಂಬೈ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುತ್ತಾ ಇದೆ. ಸ್ಕೂಲ್ ಬೋರ್ಡಿನವರು ಸರ್ಕಾರದಿಂದ ಮಂಜೂರಾತಿ ಬಂದಿಲ್ಲ ಎಂದು ಹೇಳುತ್ತಾರೆ. 4—5 ಜನರು ಇರಬೇಕಾದ ಕಡೆ ಒಬ್ಬ ಶಿಕ್ಷಕರು ಇದ್ದಾರೆ. ಹೀಗಾದರೆ ಕ್ವಾಲಿಟಿ ಸುಧಾರಿಸುವುದಾದರೂ ಹೇಗೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಕಂಪಲ್‌ಸರಿ ಎಜ್ಯುಕೇಷನ್ ಮಾಡಿದಾಕ್ಷಣಕ್ಕೆ ಆಗಲಿಲ್ಲ. ಅದರ ಜೊತೆಗೇ ಜಾಸ್ತಿ ಶಿಕ್ಷಕರನ್ನು ಕೂಡ ನೇಮಿಸಿಕೊಳ್ಳಬೇಕು. ಅದಕ್ಕೆ ತಕ್ಕಂತೆ ಕಟ್ಟಡಗಳನ್ನು ಕಟ್ಟಬೇಕು. ಶಿಕ್ಷಣದ ಮಟ್ಟ ಹೆಚ್ಚಾಗಬೇಕಾದರೆ ಟ್ರೈನ್ಡ್ ಶಿಕ್ಷಕರನ್ನೂ ಕೂಡ ತ್ವರಿತ ಗತಿಯಿಂದ ನೇಮಕ ಮಾಡಬೇಕೆಂಬುದನ್ನೂ ಕೂಡ ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಸ್ಕೂಲು ಕಟ್ಟಡಗಳ ವಿಚಾರ. ಇದು ಬಹಳ ದಿನಗಳಿಂದ ಬಂದ ಸಮಸ್ಯೆ ಇದನ್ನು ಬಗೆಹರಿಸುವುದಕ್ಕೆ ಸರಕಾರದಿಂದ ಸಾಧ್ಯವಿಲ್ಲ. ಜನರಿಂದಲೇ ಸಾಧ್ಯ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಜನತೆ ಮತ್ತು ಸರಕಾರ ಇಬ್ಬರೂ ಸೇರಿ ಈ ಕೆಲಸವನ್ನು ಮಾಡಬೇಕಾಗುತ್ತದೆ.

ಇನ್ನು ಉಚ್ಚ ಶಿಕ್ಷಣದ ವಿಚಾರ ಯೂನಿವರ್ಸಿಟಿಯವರು ಕಾಲೇಜುಗಳನ್ನು ಎಲ್ಲಿ ಮಾಡಬೇಕೋ ಅಲ್ಲಿ ಮಾಡುತ್ತಿರುವುದಿಲ್ಲ. ಹಿಂದುಳಿದ ಪ್ರದೇಶಗಳಲ್ಲಿ ಕಾಲೇಜು ಕರೆಯಲು ಅಸ್ಪದ ಮಾಡಿಕೊಡಬೇಕು ಮತ್ತು ಅಲ್ಲಿ ಶಿಕ್ಷಣದ ಮಟ್ಟವನ್ನು ಹೆಚ್ಚು ಸುಧಾರಿಸಲಿಕ್ಕೆ ಮನಸ್ಸು ಮಾಡಬೇಕೆಂದು ಯೂನಿವರ್ಸಿಟಿಯವರನ್ನು ಕೇಳಿಕೊಳ್ಳುತ್ತೇನೆ.

ಹಳ್ಳಿಗಾಡಿನಲ್ಲಿ ಕುಡಿಯುವ ನೀರಿನ ಅಭಾವ ನಿವಾರಣೆಯಾಗಿಲ್ಲ. ಕುಡಿಯುವ ನೀರಿನ ಅಭಾವದಿಂದ ಕೆಲವು ಗ್ರಾಮಗಳ ಜನರು ಮಲೆತಂತಹ ನೀರನ್ನು ಉಪಯೋಗಿಸುವದರಿಂದ ರೋಗಾದಿಗಳಿಂದ ಬಳಲುತ್ತಿದ್ದಾರೆ. ಕಾರಣ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ಅಂಥ ಗ್ರಾಮಗಳನ್ನು ಸೇರಿಸಬೇಕು. ಈಗ ಕೆಲವು ಕಡೆ ತೆಗೆದುಕೊಂಡಿದ್ದರೂ ಕೂಡ ಇನ್ನೂ ಮಾಡಬೇಕಾದ ಕಾರ್ಯ ಬಹಳವಾಗಿದೆ. ನಾನು ಡೆವಲಪ್‌ಮೆಂಟ್ ಮಿನಿಷ್ಟರನ್ನು ಕೇಳಿಕೆ ಳ್ಳುವುದಿಷ್ಟೇ. ಎಲ್ಲಾ ಕಡೆಯಲ್ಲೂ ಏಕಕಾಲಕ್ಕೆ ಎಲ್ಲಾ ಹಳ್ಳಿಗಳ ಪ್ರಗತಿಯನ್ನೂ ಮಾಡಲಿಕ್ಕೆ ಸಾಧ್ಯವಿಲ್ಲ. ಯಾವ ಪ್ರದೇಶದಲ್ಲಿ ನೀರಿನ ಕೊರತೆ ಇರುತ್ತದೆಯೋ ಮಳೆಯಾಗಿಲ್ಲವೋ ಅಂತಹ ಪ್ರದೇಶಗಳನ್ನು ನಿರ್ಲಕ್ಷ್ಯ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಕೆಲವೊಂದು ಪ್ರದೇಶದಲ್ಲಿ ಕುಡಿಯುವ ನೀರಿಗಾಗಿ ಜನರು ಒಂದು ಎರಡು ಮೈಲು ಹೋಗುತ್ತಾರೆ. ನೀರನ್ನು ತರುವುದೇ ಒಂದು ಉದ್ಯೋಗವಾಗಿದೆ ಎಲ್ಲ ಶಕ್ತಿ ನೀರನ್ನು ತರಲಿಕ್ಕೆ ಖರ್ಚಾಗುತ್ತದೆ. ಹೀಗಾದರೆ ಅವರು ತಮ್ಮ ಬೇರೆ ಒಕ್ಕಲ ತನದ ಕೆಲಸಗಳಿಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಾಗುವದಿಲ್ಲ. ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ನಾರು ಹುಣ್ಣುಗಳಿಂದ ಜನ ಬಳಲುತ್ತಿದ್ದಾರೆ. ಹೊಲಸು ನೀರನ್ನು ಉಪಯೋಗ ಮಾಡುವುದರಿಂದ ಈ ನಾರು ಹುಣ್ಣು ಬೇನೆ ಬರುತ್ತದೆ. ಇದು ಬಹಳ ಶೋಚನೀಯವಾದದ್ದು. ಇಂತಹ ಪರಿಸ್ಥಿತಿಯಲ್ಲಿ ಯಾವ ಭಾಗದ ಜನರು ಇದ್ದಾರೆ ಅವರಿಗೆ ಅನುಕೂಲವಾಗುವಂತೆ ಆ ಭಾಗದಲ್ಲಿ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಮಿನ ಯೋಜನೆಗಳನ್ನು ತೆಗೆದುಕೊಂಡು ಅವರ ಕಷ್ಟವನ್ನು ನಿವಾರಣೆ ಮಾಡಬೇಕೆಂದು ಹೇಳುತ್ತೇನೆ. ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರು ಸಿಕ್ಕಲಾರದಂತಹ ಪರಿಸ್ಥಿತಿ ಯುಂಟಾದಾಗ ಜನರು ಆ ಊರನ್ನೇ ಬಿಟ್ಟಂತಹ ಉದಾಹರಣೆಗಳು ಬಹಳವಾಗಿ ಇವೆ. ಅಂತಹ ಪ್ರದೇಶಗಳಿಗೆ ತಮ್ಮ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಕುಡಿಯುವ ನೀರಿನ ಬಾವಿಗಳ ವಿಚಾರವಾಗಿ ಒಂದು ಮಾತನ್ನು ಹೇಳಬೇಕೆಂದು ಇದ್ದೇನೆ ಈಗ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರು ಎಲ್ಲಾ ಕಡೆಯೂ ಬಾವಿ ತೆಗೆಯಲು ಹಣ ಕೊಡುತ್ತಿದ್ದರು ಅದರ ಜೊತೆಗೆ ಹರಿಜನರಿಗಾಗಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟಮೆಂಟಿನಿಂದ ಬಾವಿ ತೆಗೆಯಲು ಹಣ ಸಹಾಯ ಸಿಕ್ಕುತ್ತಾ ಇತ್ತು. ಈಗ ಆ ಸಹಾಯ ನಿಂತುಹೋಗಿದೆ. ಈ ಸೌಲತ್ತು ಸಿಕ್ಕದೇ ಹೋದುದರಿಂದ ಎಷ್ಟೋ ಹಳ್ಳಿಗಳಲ್ಲಿ ಷೆಡ್ಯೂಲ್ ಕ್ಯಾಸ್ಟ್‌ನವರು ಕಷ್ಟವನ್ನು ಅನುಭವಿಸುತ್ತಾ ಇರುವುದು ಕಂಡುಬರುತ್ತಾ ಇದೆ. ಅದಕಾರಣ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರಾಗಲಿ ಅಥವಾ ಯಾರೇ ಆಗಲಿ ಅವರಿಗೆ ಸಹಾಯ ಮಾಡಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಸಹಕಾರ ಇಲಾಖೆಯು ಸಂಬಂಧವಾಗಿ ಹೇಳಬೇಕಾದರೆ, ಈ ಡಿಪಾರ್ಟ್‌ಮೆಂಟಿನಲ್ಲಿ ಕೆಲಸಕ್ಕಿಂತ ಖರ್ಚು ಹೆಚ್ಚಾಗಿದೆ. ಎನ್ನುವಂತಹ ಮಾತನ್ನು ಹೇಳಬೇಕಾಗಿದೆ. ಈಗ ರೈತರಿಗೆ ಕೊಟ್ಟಂತಹ ಸಾಲವನ್ನು ವಸೂಲಿ ಮಾಡಲಿಕ್ಕೇನೆ. ಸಾಕಷ್ಟು ಸಿಬ್ಬಂದಿಯನ್ನು ನೇಮಿಸಲಾಗಿದೆ ಎಂದು ನಾನು ತಿಳಿದಿದ್ದೇನೆ. ಈಗ ನೇಮಕ ಮಾಡಿದಂಥ ಹೆಚ್ಚಿನ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಾಗಲಿ ಡೆಪ್ಯೂಟಿ ರಿಜಿಸ್ಟ್ರಾರ್‌ರವರಾಗಲೀ ಏನು ಮಾಡುತ್ತಾರೆ ತಿಳಿಯದಂತಾಗಿದೆ. ರೈತ ತಾನು ಯಾವ ಕಾರ್ಯಕ್ಕೆ ಸಾಲ ತೆಗೆದುಕೊಂಡಿದ್ದಾನೋ ಅದಕ್ಕೆ ಅವನು ಆ ಹಣವನ್ನು ವಿನಿಯೋಗ ಮಾಡಿಲ್ಲ. ಅದು ಯಾರದೇ ತಪ್ಪು ಇರಬಹುದು. ಇವತ್ತಿನ ಮಟ್ಟಿಗೆ ಅವನು ಸಾಲ ತಿರುಗಿ ಕೊಡುವ ಪರಿಸ್ಥಿತಿಯಲ್ಲಿ ಇಲ್ಲಾ. ಅವನು ತಂದ ಈ ಹಣವನ್ನು ಯಾತಕ್ಕೆ ವಿನಿಯೋಗಿಸಿದ್ದಾನೆ ಯಾರೂ ನೋಡಿಲ್ಲ. ಕಾರಣ ಸೊಸೈಟಿಗಳು ತಿರುಗಿ ಸಾಲ ಕೊಡುವ ಯೋಗ್ಯತೆ ಹೊಂದಿಲ್ಲ ಆ ಹಣ ವಸೂಲು ಮಾಡಲಿಕ್ಕೆ ಇಷ್ಟು ಸಿಬ್ಬಂದಿ ಅನಾವಶ್ಯಕ. ಕಡಿಮೆ ಸಿಬ್ಬಂಧಿ ಇದ್ದಾಗ ಹಿಂದೆ ಸಾಲ ವಸೂಲಾಗುತ್ತಾ ಇತ್ತು. ಈಗ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಒಬ್ಬ ಕೋ-ಅಪರೇಟೀವ್ ಎಕ್ಸಟೆನ್‌ಸ್ ಆಫೀಸರು ಇದ್ದಾರೆ. ಅವನ ಕೆಲಸ ಸಾಲ ವಸೂಲು ಮಾಡುವುದು. ಅದೇ ರೀತಿ ಸೂಪರ್‌ವೈಸರ್ ಇದ್ದಾರೆ, ಅವರ ಕೆಲಸವೂ ಕೂಡ ಸಾಲ ವಸೂಲು ಮಾಡುವುದೇ. ಸಾಲ ವಸೂಲು ಮಾಡಲಿಕ್ಕೇ ಇಷ್ಟೊಂದು ಜನ ಸಿಬ್ಬಂದಿಯನ್ನು ನೇಮಕ ಮಾಡುವುದು ಸರಿಯಲ್ಲ. ಆದಕಾರಣ ಅದನ್ನು ಕಡಿಮೆ ಮಾಡಿರಿ. ರೈತರಿಗೆ ಬಾವಿ ತೆಗೆಯಲಿಕ್ಕೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಹೆಚ್ಚಿನ ಸಾಲ ಸಿಕ್ಕುತ್ತಿದೆ ರೈತರಿಗೆ ಅನುಕೂಲ ಆಗುತ್ತದೆ ಎಂದು ಸರಕಾರದ ಅಭಿಪ್ರಾಯವಾಗಿತ್ತು, ಅದು ಸರಿಯಾದ ಅಭಿಪ್ರಾಯವಲ್ಲ ಎಂದು ಹೇಳುತ್ತೇನೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಮುಖಾಂತರ ಸಾಲ ದೊರೆಯುವುದು ರೈತರಿಗೆ ಬಹಳ ತೊಂದರೆಯಾಗಲಿಕ್ಕೆ ಹತ್ತಿದೆ. ಇವತ್ತಿನ ಮಟ್ಟಿಗೆ ಒಂದು ಒಂದೂವರೆ ವರ್ಷವಾದರೂ ಕೂಡ ಆ ಮೂಲಕ ಸಾಲ ಸಿಕ್ಕಿಲ್ಲ. ಮತ್ತು ಅವರು ಕೊಡುವಂತಹ ಸಾಲ ಕೂಡ ಬಹಳ ಕಡಿಮೆ. 5-6 ಸಾವಿರ ರೂಪಾಯಿಗಳಾದರೂ ನಮ್ಮ ಪ್ರದೇಶದಲ್ಲಿ ಬಾವಿ ಆಗುವುದಿಲ್ಲ. ಕೆಲವು ಕಡೆ ಹತ್ತು ಸಾವಿರ ರೂಪಾಯಿಗಳಾದರೂ ಕೂಡ ಆಗುತ್ತಿಲ್ಲ. ಇಂತಹ ಕಡೆ ಆತ ಲ್ಯಾಂಡ್ ರೆವಿನ್ಯೂ ಎಷ್ಟು ಕೊಡುತ್ತಾ ಇದ್ದಾರೆ ಎಂಬುದನ್ನು ನೋಡಿಕೊಂಡು ಅದರ ಮೇಲೆ ತಾವು ಸಾಲ ಮಂಜೂರು ಮಾಡಿದರೆ ಬಾವಿ ತೆಗೆಯಲಿಕ್ಕೆ ಖಂಡಿತ ಸಾಧ್ಯವಿಲ್ಲ. ಅದ್ದರಿಂದ ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನ್ ಅಂತ ಹೇಳಿ ಒಂದು ಕಾರ್ಪೊರೇಷನ್‌ನ್ನು ತಯಾರು ಮಾಡಿ ಅದರ ಮುಖಾಂತರ ಸಾಲ ಒದಗಿಸುವುದಾಗಲಿ, ಬಾವಿ ತೆಗೆಸುವುದಾಗಲಿ ಮಾಡಿದರೆ ಕೆಲಸ ತೀವ್ರವಾಗಿ ಆಗುತ್ತದೆ, ಅಂತಹ ಒಂದು ಕಾರ್ಯವನ್ನು ಮಾಡಬೇಕು ಎಂದು ಹೇಳುತ್ತೇನೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಮುಖಾಂತರ ದೊರೆಯುತ್ತಾ ಇರುವ ಸಾಲ ವೇಳೆಗೆ ಸರಿಯಾಗಿ ದೊರೆಯುತ್ತಾ ಇಲ್ಲ ಎಂದು ನನ್ನ ಭಾವನೆ. ಮತ್ತು ಅದಕ್ಕೆ ಉದಾಹರಣೆಗಳು ಕೂಡ ಬೇಕಾದಷ್ಟು ಇದೆ. ಇವತ್ತು ತಹಸೀಲ್ದಾರರು, ಅಸಿಸ್ಟೆಂಟ್ ಕಮಿಷನರು, ಡೆಪ್ಯೂಟಿ ಕಮಿಷನರು ಬಾವಿಗಳಿಗಾಗಿ ಸಾಲ ಕೊಡುವಾಗ ಎಷ್ಟು ಹಣ ಕೊಡುತ್ತಾ ಇದ್ದರು ಲ್ಯಾಂಡ್ ಡೆವಲಪ್‌ಮೆಂಟ್ ಬಾಂಕ್ ಮುಖಾಂತರ ಎಷ್ಟು ಕೇಸುಗಳು ವಿಲೇವಾರಿಯಾಗುತ್ತಾ ಇವೆ ಎಂಬುದನ್ನು ತಾವು ಪರಿಶೀಲನೆ ಮಾಡಿದರೆ ತಮಗೆ ಗೊತ್ತಾಗುತ್ತದೆ. ಅದ್ದರಿಂದ ಅದಕ್ಕೆ ಬದಲಾಗಿ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನ ಮುಖಾಂತರ ಕೊಡುವುದು ಸರಿ ಎಂದು ಕಾಣುತ್ತದೆ.

ಕೋ-ಅಪರೇಟೀವ್ ಮೂವ್‌ಮೆಂಟ್‌ದಲ್ಲಿ ವಿಶ್ವಾಸವಿರುವದು ಮುಖ್ಯ. ಅದೇ ಕಡಿಮೆಯಾಗುತ್ತಾ ಇದೆ. ಇದಕ್ಕೆ ಮುಖ್ಯ ಕಾರಣ ಹಳ್ಳಿಗಾಡಿನ ಜನತೆಗೆ ಸರಿಯಾದ ಟ್ರೈನಿಂಗ್ ಇಲ್ಲ. ಇವತ್ತು ಸೆಕ್ರೆಟೆರಿಯಾಗಲಿ ಅಥವಾ ಒಬ್ಬ ಚೇರ್‌ಮನ್ ಆಗಲಿ ಅಥವಾ ಬೇರೆ ಸಿಬ್ಬಂದಿಯಾಗಲಿ ಅವರಿಗೆ ಸರಿಯಾದ ಟ್ರೈನಿಂಗ್ ಇರುವುದಿಲ್ಲ. ಆದಕಾರಣ ಅವರು ಅವರ ಕೆಲಸದಲ್ಲಿ ತಪ್ಪಿ, ಸಹಕಾರದ ಚಳುವಳಿ ಕುಂಠಿತ ಆಗುವುದಕ್ಕೆ ಕಾರಣವಾಗುತ್ತಾ ಇದೆ, ಅದ್ದರಿಂದ ಇದನ್ನು ಸುಧಾರಿಸಲಿಕ್ಕೆ ಅವರಿಗೆ ಟ್ರೈನಿಂಗ್ ಕೊಡಬೇಕಾದ್ದೂ ಕೂಡ ಬಹಳ ಅಗತ್ಯ, ಅವಶ್ಯಕ ಎಂದು ಹೇಳುತ್ತಾ ಇದ್ದೇನೆ. ಇದರ ಬಗ್ಗೆ ಹೆಚ್ಚು ನಿಗಾವಹಿಸಬೇಕು. ಸಿಬ್ಬಂದಿ ಬಹಳವಾಗಿ ಬೆಳೆಯುತ್ತಾ ಇದೆ. ಡೆಪ್ಯೂಟಿ ಬಿ.ಡಿ.ಓ., ಬಿ.ಡಿ.ಓ. ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರ್, ಸೋಷಿಯಲ್ ವೆಲ್ ಫೇರ್ ಆಫೀಸರು, ಅದೇ ರೀತಿ ಶಿಕ್ಷಣ ಖಂಗದಲ್ಲಿ ಇನ್‌ಸ್ಪೆಕ್ಟರುಗಳು, ಎನ್.ಇ.ಎಸ್. ಅಧಿಕಾರಿಗಳು ಈ ರೀತಿ ಒಂದು ಕೆಲಸದ ಮೇಲೆ ವಿಚಾರಣೆ ನಡೆಸತಕ್ಕ ಅನೇಕ ಜನ ಅಧಿಕಾರಿಗಳು ಇದ್ದಾರೆ. ಎಷ್ಟು ಬೇಕೋ ಅಷ್ಟು ಜನರನ್ನು ಇಟ್ಟುಕೊಂಡು ಅಧಿಕವಾಗಿರತಕ್ಕ ಜನರನ್ನು ತೆಗೆದುಹಾಕಿದರೆ 4-5 ಲಕ್ಷ ರೂಪಾಯಿಗಳು ಒಂದೊಂದು ಜಿಲ್ಲೆಯಲ್ಲಿ ಉಳಿತಾಯವಾಗಬಹುದು. ಆದಕಾರಣ ಅಭಿವೃದ್ಧಿ ಕಾರ್ಯಗಳ ಜೊತೆಗೆ ಉಳಿತಾಯದ ಕಡೆಗೂ ಹೆಚ್ಚು ಲಕ್ಷ್ಯ ವಹಿಸಬೇಕು, ವಹಿಸಿದರೆ ನಮ್ಮ ರಾಜ್ಯದ ಪ್ರಗತಿಯನ್ನು ನಾವು ಸಾಧಿಸಲಿಕ್ಕೆ ಸಾಧ್ಯವಿದೆ ಎಂದು ನನ್ನ ಅಭಿಪ್ರಾಯ.

(ಶ್ರೀ ಎಸ್. ಎಂ. ಗುರೆಡ್ಡಿ)

ಲ್ಯಾಂಡ್ ರೆವಿನ್ಯೂ ಅಬಾಲಿಷ್ ಮಾಡುವ ವಿಚಾರ ಈಗ ಕೇಳಿ ಬರುತ್ತದೆ ಅದನ್ನು ಏಕೆ ಅಬಾಲಿಷ್ ಮಾಡಬೇಕೆಂದು ನಾನು ಕೇಳುತ್ತೇನೆ ? ಈವತ್ತು ರೈತ ಬೆಳೆಯುವ ಮಾಲಿಗೆ ಧಾರಣೆ ಇದೆ, ಒಂದು ಚೀಲ ಸೇಂಗಾಕ್ಕೆ 60 ರೂಪಾಯಿ ಧಾರಣೆ ಈಗ ಇದೆ. ಹೀಗಿರುವಾಗ ಯಾವ ರೈತನೂ ಸರ್ಕಾರಕ್ಕೆ ಕೊಡುವ ಕಂದಾಯವನ್ನು ಕೊಡುವುದಕ್ಕೆ ಹಿಂದೆಗೆಯುವುದಿಲ್ಲ ; ಇಷ್ಟು ಅಲ್ಪ ಕಂದಾಯವನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಯಾವ ರೈತನೂ ಹೇಳುವುದಿಲ್ಲ. ಕಂದಾಯ ಕೊಡತಕ್ಕದ್ದು ಒಂದು ಪ್ರೆಸ್ಟೀಜೆಂದು ರೈತ ತಿಳಿದಿದ್ದಾನೆ. ಹಾಗಿರುವಾಗ ಕಂದಾಯವನ್ನು ತಪ್ಪಿಸಬೇಕೆಂದು ಹೇಳುವುದು ಸರಿಯಾದ್ದಲ್ಲ. ಆದರೆ ಸರ್ಕಾರದವರು ಈ ದಿವಸ ಲ್ಯಾಂಡ್ ರೆವಿನ್ಯೂ ಎಂಬ ಒಂದು ಹೆಸರನ್ನು ತೆಗೆದುಹಾಕಿ ಇದನ್ನೇ ಒಂದು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎಂದು ಹಾಕುತ್ತಾರೆಂದು ತಿಳಿದು ಅವನು ಬಹಳ ಭಯಪಡುತ್ತಿದ್ದಾನೆ. ರೈತನಿಗೆ ಕಂದಾಯ ರೂಪದಲ್ಲಿ 4 ರೂಪಾಯಿ ಕೊಡುವುದಕ್ಕೆ ಮನಸ್ಸಿದೆ. ಅದರ ಬದಲು 2 ರೂಪಾಯಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕೊಡು ಅಂದರೆ ಅವನಿಗೆ ಬಹಳ ತೊಂದರೆಯಾಗುತ್ತದೆ. ಈಗಾಗಲೇ ರೈತರು ಹೆಚ್ಚಿಸಿದ ಲ್ಯಾಂಡ್ ರೆವಿನ್ಯೂ ಕೊಡುತ್ತಿದ್ದಾರೆ. ಯಾವ ತೊಂದರೆಯೂ ಇಲ್ಲದೆ ಇದು ನಡೆದು ಕೊಂಡು ಬರುತ್ತಿದೆ. ಇದನ್ನು ಬದಲಾಯಿಸಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಅಂತ ಮಾಡಬೇಡಿ ಎಂದು ನಾನು ಹೇಳುತ್ತೇನೆ. ಈ ಬಾಬಿನಿಂದಲೂ ಈಗ ಸರ್ಕಾರಕ್ಕೆ ಬಹಳ ಉತ್ಪನ್ನ ಬರುತ್ತಿದೆ. ಆದುದರಿಂದ ಇದನ್ನು ಸಂಪೂರ್ಣವಾಗಿ ರದ್ದು ಮಾಡಬಾರದೆಂದು ನಾನು ಹೇಳುತ್ತೇನೆ.

ಇನ್ನು ಪಾನ ನಿರೋಧ ವಿಚಾರಕ್ಕೆ ಬಂದರೆ ಇದು ಬೇಕೋ ಬೇಡವೋ ಅದು ವಿವಾದಕ್ಕೊಳ ಗಾದ ಅಂಶವಾದ್ದರಿಂದ ಈಗ ಅದರ ವಿಚಾರ ಬೇಡ. ಈ ದಿವಸ ನಾವು ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸುವುದಾದರೆ, ದೇಶದಲ್ಲಿ ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳ ಬೇಕೆಂಬುದು ಅತ್ಯಗತ್ಯ ಎಂದು ನನಗನಿಸುತ್ತಿದೆ. ಈಗ ಕೇವಲ ಪರ್ಮಿಟ್ ಪಡೆದುಕೊಂಡಿರತಕ್ಕ ವರೇ ಅಲ್ಲದೆ ಪರ್ಮಿಟ್ ಇಲ್ಲದವರೂ ಕುಡಿಯುತ್ತಿದ್ದಾರೆ. ಬ್ಲಾಕ್‌ಮಾರ್ಕೆಟ್ಟಿನಲ್ಲಿ ಕುಡಿತ ವಿಶೇಷ ವಾಗಿದೆ. ಸರ್ಕಾರಕ್ಕೆ ಈ ಬಾಬಿನಿಂದ ಎಷ್ಟು ವರಮಾನ ಬರಬೇಕೋ ಅಷ್ಟು ಬರುತ್ತಿಲ್ಲ. ಆದ್ದ ರಿಂದ ಹಾಲಿ ಇರತಕ್ಕ ಪರ್ಮಿಟ್ ಸಿಸ್ಟಂ ಏನಿದೆ ಅದನ್ನು ಬದಲಾಯಿಸಿ, ಯಾರು ಯಾರು ಲೈಸೆನ್ಸ್ ಕೇಳುತ್ತಾರೋ ಅಂಥವರಿಗೆಲ್ಲಾ ಲೈಸೆನ್ಸ್ ಕೊಡುವುದಕ್ಕೆ ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ನನಗನಿಸುತ್ತಿದೆ. ಹೀಗೆ ಮಾಡಿದರೆ ಸರ್ಕಾರಕ್ಕೂ ಹೆಚ್ಚಿನ ವರಮಾನ ಬರುತ್ತದೆ. ಈ ದಿವಸ ದೇಶದಲ್ಲಿ ಬಡವ ಶ್ರೀಮಂತ ಇಬ್ಬರೂ ಕುಡಿಯುತ್ತಾರೆ. ಕುಡಿತದ ವಿಚಾರದಲ್ಲಿ ದುಡ್ಡಿದ್ದವನೂ, ಇಲ್ಲದವನೂ ಇಬ್ಬರೂ ಒಂದೇ. ನಾವು ಈ ದಿವಸ ಜನರಿಗೆ ಸಾಕಷ್ಟು ವಿದ್ಯಾಭ್ಯಾಸವನ್ನು ಕೊಟ್ಟಿ ದ್ದೇವೆ ; ಆದುದರಿಂದ ಈ ದಿವಸ ಪ್ರತಿಯೊಬ್ಬರೂ ಆಲೋಚನೆ ಮಾಡಿ ಯಾವುದು ಕೆಟ್ಟದ್ದು, ಯಾವುದು ಒಳ್ಳೆಯದು ಎಂಬುದನ್ನು ಅವರೇ ತಿಳಿದುಕೊಳ್ಳಬೇಕು. ಆದರೆ ಈ ದಿವಸ ಟಾಡಿಯ ಬಗ್ಗೆ ಜನರು ವಿಶೇಷವಾಗಿ ಮಾತನಾಡುತ್ತಿದ್ದಾರೆ. ನಾವು ಈ ಹಿಂದೆ ದೇಶದಲ್ಲಿ ಈ ಕುಡಿತದ ಅನಾಹುತವನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಪಾನನಿರೋಧವನ್ನು ದೇಶದಲ್ಲಿ ಜಾರಿಗೆ ತರ ಲಾಯಿತು. ಆದರೆ ಈ ದಿವಸ ದೇಶದಲ್ಲಿ ಕುಡುಕತನ ಹೋಗಿಲ್ಲ. ಮೊದಲದ್ದುದಕ್ಕಿಂತಲೂ ದೇಶ ದಲ್ಲಿ ಕುಡುಕರ ಸಂಖ್ಯೆ ಜಾಸ್ತಿಯಾಗಿದೆ. ನಾವು ಆ ದಿವಸ ಇದನ್ನು ಏನೋ ಒಂದು ನೀತಿ ಎಂದು ಆ ಕಾಲಕ್ಕೆ ಇದನ್ನು ಜಾರಿಗೆ ತಂದೆವು. ಆದರೆ ಆ ಕಾಲಕ್ಕೆ ಸರಿ ಎನಿಸಿದ್ದು ಈ ಕಾಲಕ್ಕೆ ಸರಿ ಹೋಗುವುದಿಲ್ಲ. ಟಾಡಿಯನ್ನು ಕುಡಿಯುವುದು ಆರೋಗ್ಯಕ್ಕೂ ಒಳ್ಳೆಯದೆಂದು ಅನೇಕರು ಹೇಳು ತ್ತಿದ್ದಾರೆ. ಆದುದರಿಂದ ಅದನ್ನು ಉಪಯೋಗಿಸಲು ಅನುಮತಿ ನೀಡಬೇಕು ಮತ್ತು ಈಗ ಇರ ತಕ್ಕ ಪರ್ಮಿಟ್ ಸಿಸ್ಟಂನ್ನು ರದ್ದುಪಡಿಸಿ ಯಾರು ಕುಡಿಯಬೇಕೆಂದು ಬರುತ್ತಾರೋ ಅಂಥವರಿಗೆಲ್ಲಾ ಖುಲ್ಲಾ ಇರಬೇಕು, ಮಾರಾಟ ಮಾಡುವವರಿಗೆ ಲೇಸನ್ಸ್ ಫೀ ಹೆಚ್ಚು ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಇನ್ನು ಮುಂದೆ ಕಂಟ್ರಿಶೇಂದಿ, ಬ್ರಾಂಡಿ ಇತ್ಯಾದಿಗಳಿಗೆ ಲೈಸನ್ಸ್‌ನ್ನು ಕೊಡ ಬೇಕೆಂದು ಕೇಳುತ್ತೇನೆ. ಇದರಿಂದ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯಾದರೂ ಉತ್ತಮಗೊಳ್ಳು ತ್ತದೆ. ಲ್ಯಾಂಡ್ ರೆವಿನ್ಯೂ, ಎಕ್ಸೈಜ್, ಮಾರಾಟ ತೆರಿಗೆ ಬಾಬುಗಳಿಂದ ಹೆಚ್ಚು ಹಣ ಸರ್ಕಾರಕ್ಕೆ ಬಂದರೆ ಅದರಿಂದ ದೇಶದಲ್ಲಿ ಅನೇಕ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನು ಇನ್ನು 8-10 ವರ್ಷಗಳಲ್ಲಾದರೂ ಮುಗಿಸುವುದಕ್ಕೆ ಸಾಧ್ಯವಾಗಬಹುದೆಂದು ನನಗನಿಸುತ್ತಿದೆ. ಕೆಲವು ಜನರು ರೈತರಿಗೆ ಕರಭಾರ ಜಾಸ್ತಿಯಾಗಿದೆ ಎಂಬ ಕೂಗೆಬ್ಬಿಸಿದ್ದರಿಂದ ನಾವು ಇದೇ ಮನೆಯಲ್ಲಿ ಪಾಸ್ ಮಾಡಿದಂಥ ವಾಟರ್‌ರೇಟನ್ನು ಈಗ ತಗ್ಗಿಸುವುದಕ್ಕೆ ಹೊರಟಿದ್ದೇವೆ. ಇದು ಸರಿಯಲ್ಲ. ಕೂಗೆಬ್ಬಿಸಿದರೆಂದು ಅದಕ್ಕೆ ಸರ್ಕಾರದವರು ಬಗ್ಗಬಾರದು. ಹೀಗೆ ಸಡಿಲ ಮಾಡುತ್ತಾ ಹೋದರೆ ಮುಂದೆ ನಾವು ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಈ ದಿವಸ ರೈತ ಬೆಳೆದ ಮಾಲಿಗೆ

ಸರಿಯಾದ ಬೆಲೆ ಬರುತ್ತದೆ. ಹೀಗಿರುವಾಗ ಒಮ್ಮೆ ತೆಗೆದುಕೊಂಡ ನಿರ್ಣಯಗಳನ್ನು ವಿನಾಕಾರಣ ಬದಲಾಯಿಸುವುದು ಸರಿಯಲ್ಲ. ನಮ್ಮ ತೀರ್ಮಾನವನ್ನು ಬದಲಾಯಿಸುತ್ತಾ ಹೋದರೆ ನಮ್ಮ ಡೆವಲಪ್‌ಮೆಂಟ್ ಕೆಲಸಕಾರ್ಯಗಳಿಗೆ ನಾವೇ ಕಲ್ಲು ಹಾಕಿದಂತಾಗುತ್ತದೆ. ಯಾವ ರೈತ ನೀರಿನಿಂದ ಅನುಕೂಲ ಪಡೆಯುತ್ತಿದ್ದಾನೋ ಅಂಥವನು ಸರ್ಕಾರಕ್ಕೆ ತೆರಿಗೆಯನ್ನು ಕೊಡಲೇಬೇಕು. ದೇಶದ ಅಭಿವೃದ್ಧಿಯ ಹಿತದೃಷ್ಟಿಯಿಂದ ಸರಕಾರದವರು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕೆಂದು ಹೆಜ್ಜೆಯನ್ನು ಮುಂದಿಟ್ಟಿದ್ದಾರೋ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬಾರದು. 10 ಕೋಟಿ ರೂಪಾಯಿಗಳ ಮೇಲ್ಪಟ್ಟು ತಗಲತಕ್ಕ ನೀರಾವರಿ ಕೆಲಸ ಕಾರ್ಯಗಳನ್ನು ಕೇಂದ್ರ ಸರ್ಕಾರದವರೇ ವಹಿಸಿಕೊಳ್ಳುವಂತೆ ಅವರನ್ನು ಒತ್ತಾಯ ಮಾಡಬೇಕು ಎಂದು ಪುನಃ ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ARREST OF A MEMBER

Announcement.

Mr. DEPUTY SPEAKER.—Before I call upon other Members to speak, I have to announce that I have received a communication from the Commissioner of Police, Bangalore that Sri S. Gopala Gowda, a member of the House has been arrested by the Upparpet Police today at 12-30 P.M. near Mysore Bank Circle along with sixty others for causing rioting and defying the prohibitory orders under section 35 of the Mysore Police Act and that a case has been registered under Sections 143, 147, 148, 149, 427, 332 and 353 of the Indian Penal Code and that he has been lodged at the Upparpet Police Station and that he will be produced before the jurisdiction Magistrate.

BUDGET ESTIMATES FOR 1967-68.

General Dicussion.

(Debate Continued).

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ) —ಮಾನ್ಯ ಸಭಾಧ್ಯಕ್ಷರೇ, ನಮ್ಮ ಮಾನ್ಯ ಅರ್ಥಿಕ ಸಚಿವರು ಸಾಕಷ್ಟು ತೃಪ್ತಿಕರವಾಗಿ ದೇಶದ ಹಿತದೃಷ್ಟಿಯಿಂದ ಈ ಬಡ್ಜೆಟ್ಟನ್ನು ತಯಾರಿಸಿ ನಮ್ಮ ಮುಂದೆ ಇಟ್ಟಿದ್ದಾರೆ. ಇವರು ಬಹಳ ಅನುಭವಿಗಳು ಇದನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈ ಅಧಿವೇಶನಕ್ಕೆ ನಾವು ಅನೇಕರು ಹೊಸಬರಾಗಿ ಬಂದಿದ್ದೇವೆ; ನಾವು ಹೊಸ ಹೊಸ ಅಭಿಪ್ರಾಯಗಳನ್ನು ಕೊಡತಕ್ಕವರಾಗಿದ್ದೇವೆ. ಹಾಗೆ ನಾವು ಕೊಡತಕ್ಕ ಹೊಸ ಅಭಿಪ್ರಾಯಗಳನ್ನು ಸರ್ಕಾರದವರು ಸ್ವೀಕರಿಸಿ ಅವುಗಳಿಗೆ ಮನ್ನಣೆಯನ್ನು ಕೊಡುತ್ತಾರೆಂದು ನಾನು ನಂಬಿದ್ದೇನೆ.

ಈ ಸಂದರ್ಭದಲ್ಲಿ ನಾನು ಅನೇಕ ವಿಚಾರಗಳನ್ನು ಪ್ರಶ್ನೆ ಮಾಡಬೇಕಾಗಿದೆ. ಭೂಕಂದಾಯದ ವಿಚಾರವಲ್ಲಿ ಒಂದು ದೊಡ್ಡ ಗೊಂದಲವನ್ನೇ ಎಬ್ಬಿಸಿದ್ದಾರೆ. ನಮ್ಮ ಸರ್ಕಾರ ಕಳೆದ ಚುನಾವಣೆಗಳಿಗೆ ಮುನ್ನ ಹಾಗೂ ಕಳೆದ ಚುನಾವಣೆಗಳ ಕಾಲದಲ್ಲಿ ದೇಶಾದ್ಯಂತವೂ ಜನರ ಮುಂದೆ ಭೂಕಂದಾಯವನ್ನು ಸಂಪೂರ್ಣವಾಗಿ ರದ್ದುಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳುವುದರಲ್ಲಿದ್ದೇವೆಂದು ಅನೇಕ ಬಾರಿ ಹೇಳಿದ್ದರೂ ಅದನ್ನಿನ್ನೂ ಕಾರ್ಯಗತ ಮಾಡಲಿಲ್ಲ. ಈಗಾಗಲೇ ಅನೇಕ ಸ್ನೇಹಿತರು ಹೇಳಿದಹಾಗೆ ರೈತರಿಗೆಲ್ಲಾ 2 ವರ್ಷಗಳ ಕಂದಾಯವನ್ನೂ ಒಮ್ಮೇಲೆ ಕೊಡಬೇಕೆಂದು ನೋಟೀಸುಗಳನ್ನು ಕಳುಹಿಸಿದ್ದಾರೆ. ಹೀಗಾಗಿ ನಾವು ಈ ದಿವಸ ರಸ್ತೆಯಲ್ಲಿ ಜನರ ಎದುರು ತಿರುಗಾಡದಂತಾಗಿದೆ. ಜನರು ನಮ್ಮನ್ನು ನೀವು ಹೇಳುವುದೇ ಒಂದು, ಮಾಡುವುದೇ ಒಂದು ಎಂದು

(ಶ್ರೀ ಕೆ. ಎನ್. ವೀರಪ್ಪಗೌಡ)

ಪ್ರಶ್ನೆ ಮಾಡುತ್ತಿದ್ದಾರೆ. ಈ ಹಿಂದೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು ಜಾರಿಗೆ ತರತಕ್ಕ ಕಾಲದಲ್ಲಿ ಆಗ ನೇಮಕವಾಗಿದ್ದ ಕಾಂಗ್ರೆಸ್ ಎಗ್ಸಿಕ್ಯುಟೀವ್ ಕಮಿಟಿಯ ಸದಸ್ಯರಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಆ ಕಾಲದಲ್ಲಿ ಕಂದಾಯವನ್ನು ಸುಮ್ಮನೆ ಏರಿಸುವುದರಿಂದ ಅದರಲ್ಲಿ ಇವನು ಬಡವ, ಇವನು ಸಾಹುಕಾರ ಎಂಬ ಭೇದವನ್ನು ಮಾಡುವುದಕ್ಕಾಗುವುದಿಲ್ಲ, ಎಲ್ಲರಿಗೂ ಒಂದೇ ಸಮನಾಗಿ ಕಂದಾಯ ಬೀಳುತ್ತದೆ. ಅದಕ್ಕಾಗಿ ಬಡವರಿಗೆ ಕಂದಾಯದ ಹೊರೆಯನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಆ ದಿವಸ ಆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು ಜಾರಿಗೆ ತರುತ್ತೇವೆಂದು ಹೇಳಿದ್ದರು. ಈಗ ಕೆಲವು ವರ್ಷಗಳು ಕಳೆದಮೇಲೆ ಪುನಃ ಕಂದಾಯವನ್ನು ಜಾಸ್ತಿ ಮಾಡಬೇಕು ಎಂದು ಹೊರಟಿರುವುದು ರೈತರಿಗೆ ಎಷ್ಟು ಮಟ್ಟಿನ ತೊಂದರೆಯಾಗಿರಬಹುದು ಎಂಬುದನ್ನು ತಾವೂ ಕೂಡ ಯೋಚನೆ ಮಾಡುವ ಅವಶ್ಯಕತೆ ಇದೆ. ಈಗ ಸುಮಾರು 4 ರೂಪಾಯಿಗಳಿದ್ದ ತರೀ ಕಂದಾಯ ಸುಮಾರು 8 ರೂಪಾಯಿ 15 ಪೈಸೆಗಳಷ್ಟು ಜಾಸ್ತಿ ಕಂದಾಯವಾಗಿದೆ. ಜೊತೆಗೆ ಸೆಸ್ಸುಗಳನ್ನು ಹಾಕುತ್ತಾರೆ. ಅದೆಲ್ಲಾ ಸೇರಿದರೆ ಸುಮಾರು ಹತ್ತು ರೂಪಾಯಿಗಳಾಗುತ್ತದೆ. ಈಗ ಆಹಾರದ ಕೊರತೆ ಹೆಚ್ಚಾಗಿದೆ ಎಂದು ಹೇಳುವ ಕಾಲದಲ್ಲಿ ತರೀ ಜಮೀನಿಗೆ ಇಷ್ಟರಮಟ್ಟಿಗೆ ಕಂದಾಯ ಹಾಕಿದರೆ ರೈತರಿಗೆ ಹೇಗೆ ಪ್ರೋತ್ಸಾಹ ಬಂದು ಬೆಳೆಯುವುದಕ್ಕೆ ಅವಕಾಶವಾಗುತ್ತದೆಂದು ಯೋಚಿಸಬೇಕು. ಇನ್ನು ಇವತ್ತು ಅಡಿಕೆ ತೋಟಕ್ಕೆ ಸುಮಾರು ಹತ್ತು ರೂಪಾಯಿಗಳಷ್ಟು ಕಂದಾಯವಿರುವುದು 50 ರೂಪಾಯಿಗಳ ವರೆಗೂ ಹೋಗಿದೆ. ಒಂದು ಸಂದರ್ಭ ಅಡಿಕೆಗೆ ಒಳ್ಳೆಯ ಬೆಲೆಯಿದೆಯೆಂದು ರೈತರು ಒಪ್ಪಿದರೂ ಕೂಡ ಸರ್ಕಾರದವರಲ್ಲಿ ನಿಜವಾಗಿ ಅವರ ಮೇಲೆ ಎರಡು ತರಹ ಕಂದಾಯವನ್ನು ಮಾತ್ರ ಹಾಕಬೇಡಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ ಒಂದು ಕಡೆ ಕಂದಾಯವನ್ನು ತೆಗೆಯುತ್ತೇವೆಂದು ಹೇಳುತ್ತಾರೆ. ಈ ವಿಚಾರದಲ್ಲಿ ಸರ್ಕಾರದವರು ಯಾವುದಾದರೂ ಒಂದು ಸ್ಥಿಮಿತಕ್ಕೆ ಬರುವುದು ಒಳ್ಳೆಯದು. ಆದ್ದರಿಂದ ಈಗ ವ್ಯವಸಾಯ ವರಮಾನ ತೆರಿಗೆಯನ್ನು ತೆಗೆದು ಅದನ್ನು ವಿಧಿಸಿದ್ದರಿಂದ ಉಂಟಾಗುತ್ತಿರತಕ್ಕ ಕಿರುಕುಳವನ್ನು ಮೊದಲು ತಪ್ಪಿಸಬೇಕು. ಇದಕ್ಕೆ ಸಂಬಂಧಪಟ್ಟ ಇಲಾಖೆಯನ್ನು ಇಟ್ಟುಕೊಂಡಿರುವುದರಿಂದ ಆಗತಕ್ಕ ಖರ್ಚು ಎಷ್ಟು, ಅದರಿಂದ ನಿಜವಾಗಿ ನ್ಯಾಯವಾದ ರೀತಿಯಲ್ಲಿ ಜನರಿಗೆ ಅನುಕೂಲವಾಗುತ್ತಿದೆಯೇ ಎಂಬ ಪ್ರಶ್ನೆ ಅನೇಕ ಕಡೆಗಳಿಂದ ಬಂದಿದೆ. ಅದು ತಮ್ಮ ಅವಗಾಹನೆಗೂ ಬಂದಿರಬಹುದು. ಅನೇಕ ಅಧಿಕಾರಿಗಳು ಈ ವಸೂಲಿ ವಿಷಯದಲ್ಲಿ ಎಷ್ಟು ಶ್ರದ್ಧೆ ವಹಿಸಿ ನ್ಯಾಯಬದ್ಧವಾಗಿ ವಸೂಲಿ ಕೆಲಸವನ್ನು ಮಾಡುತ್ತಾರೆ. ನ್ಯಾಯಬದ್ಧವಾಗಿ ಲೆಕ್ಕಗಳನ್ನು ಪರಿಶೀಲನೆ ಮಾಡುತ್ತಾರೆಯೇ ಎನ್ನುವ ವಿಷಯ ತಮಗೆಲ್ಲರಿಗೂ ಗೊತ್ತಿರುವ ವಿಷಯ. ಅದು ನಮಗಂತೂ ಅರಿವಾಗಿದೆ. ನನ್ನ ಸ್ನೇಹಿತರೊಬ್ಬರು ಸಂಬಂಧಪಟ್ಟ ಆಫೀಸಿಗೂ ಹೋಗಿ ಬಂದು ತಿಳಿಸಿದ್ದಾರೆ. ಆಂಟಿ ಕರಪ್‌ಷನ್ ಇಲಾಖೆಯೇನೋ ಇದೆ. ಅದಿರಲಿ. ಪಕ್ಕದ ಕೊಠಡಿಯಲ್ಲಿಯೇ ಇನ್‌ಸ್ಪೆಕ್ಟರ್ ಇದ್ದಾರೆ. ನಾವೇನೂ ಯೋಚಿಸುವದಿಲ್ಲ, ಕೊಡುವುದನ್ನು ಕೊಡಿ. ನೋಡಿಕೊಳ್ಳುತ್ತೇವೆ ಎಂದಿದ್ದಾರಂತೆ. ಈ ರೀತಿಯಾಗಿ ಆಗುತ್ತಿರುವುದರಿಂದ ನಿಜವಾಗಿ ರೈತರಿಗೆ ವಿಪರೀತವಾಗಿ ತೊಂದರೆಗಳು ಆಗುತ್ತಿವೆ. ಅಧಿಕಾರಿಗಳಿಂದ ಹೆಚ್ಚಿಗೆ ಕಿರುಕುಳವುಂಟಾಗುತ್ತಿದೆ. ಸರ್ಕಾರಕ್ಕೆ ಬರುವ ಉತ್ಪತ್ತಿ ನಿಜವಾಗಿ ಬರುತ್ತಿದೆಯೇ ಎನ್ನುವುದನ್ನು ಬಹಳಮಟ್ಟಿಗೆ ವಿಮರ್ಶೆ ಮಾಡಬೇಕಾಗಿದೆ. ಆದ್ದರಿಂದ ಭೂಕಂದಾಯವನ್ನು ಜಾಸ್ತಿ ಮಾಡುವ ಸಂದರ್ಭದಲ್ಲಿ ತಾವು ದಯಮಾಡಿ ವ್ಯವಸಾಯ ವರಮಾನ ತೆರಿಗೆಯನ್ನು ಕೂಡಲೇ ತೆಗೆದುಹಾಕಬೇಕು. ಇಲ್ಲದಿದ್ದರೆ ಭೂಕಂದಾಯವನ್ನು ಜಾಸ್ತಿ ಮಾಡುವುದನ್ನು ಕೈಬಿಡಬೇಕು. ಆದರೆ ಕಂದಾಯವನ್ನು ತೆಗೆಯದೇಕೆಂದು ಯಾವ ರೈತನೂ ಸಹ ಹೇಳಲಿಲ್ಲ. ಅದನ್ನು ಯಾರೂ ಒಪ್ಪುವುದಿಲ್ಲ. ಅನೇಕರು ಕಂದಾಯ ತೆಗೆದು ಹಾಕುವುದು ಬೇಡವೆಂದು ಒತ್ತಾಯ ಮಾಡುತ್ತಿದ್ದಾರೆ. ಅನೇಕ ರೈತರು ಬಾಗಾಯಿತು ಭೂಮಿಗೆ ಕಂದಾಯ ಜಾಸ್ತಿ ಹಾಕಿದ್ದರೂ ವ್ಯವಸಾಯ ವರಮಾನ ತೆರಿಗೆಯನ್ನು ಕೊಡುವುದನ್ನು ತಪ್ಪಿಸಬೇಕೆಂದು ಕೇಳುತ್ತಿದ್ದಾರೆ. ಕಂದಾಯ ಹೆಚ್ಚು ಕೊಡಬಹುದು, ಆದರೆ ತೆರಿಗೆಯನ್ನು ಮಾತ್ರ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಕಾರಣ ಅಧಿಕಾರಿಗಳಿಂದ ಕಿರುಕುಳವನ್ನು ಸಹಿಸುವುದಕ್ಕೆ ಸಾಧ್ಯವಿಲ್ಲವೆಂದು ಬೇರೆ ಹೇಳುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಸಾಕಷ್ಟು ಸುಲಭವಾಗಿ ವ್ಯವಹಾರ ನಡೆಯುವ ಬಗ್ಗೆ ಯೋಚನೆ ಮಾಡಬೇಕಾಗಿದೆ. ಆದರೆ ಒಂದು ವಿಷಯ. ಇದರ ಬಗ್ಗೆ ವ್ಯವಹಾರ ನಡೆಸುವುದು ಸಾಮಾನ್ಯ ರೈತರಿಗೆ ಅದರಲ್ಲೂ ಹೆಚ್ಚಿನ ವಿದ್ಯಾಭ್ಯಾಸ ಇಲ್ಲದೇ ಇರುವವರಿಗೆ ಬಹಳ ಕಷ್ಟವಾಗುತ್ತದೆ. ಯಾವುದಾದರೂ ಒಂದು ವ್ಯವಹಾರದಲ್ಲಿ ರೈತನು ಕೊಟ್ಟಂಥ ಅಂಕಿ ಅಂಶದಲ್ಲಿ ಇಂಥಾದ್ದು ಸರಿಯಾಗಿಲ್ಲವೆಂದು ಅಧಿಕಾರಿ ಹೇಳಿದರೆ ಅದನ್ನು ಸರಿಮಾಡಿಕೊಂಡು ಹೋದರೆ ಮತ್ತೆ ಇನ್ನೊಂದು ನೋಟೀಸ್ ಬರುತ್ತದೆ. ಈ ಪಾಯಿಂಟ್ ಕ್ಲಿಯರ್ ಮಾಡಲಿಲ್ಲ. ಹೀಗೆ ಒಂದೊಂದು ಪಾಯಿಂಟ್ ಕ್ಲಿಯರ್ ಮಾಡಬೇಕೆಂದು ಮತ್ತೆ ಮತ್ತೆ ನೋಟೀಸು

ಗಳನ್ನು ರೈತರಿಗೆ ಕಳುಹಿಸುವುದರಿಂದ ಅವರು ಒಂದೆರಡು ಸಾರಿ ಕಚೇರಿಗಳಿಗೆ ತಿರುಗಿದಾಗ ಬೇಜಾರು ಬಂದು ಕಾರಣಾಂತರಗಳಿಂದ ಅಧಿಕಾರಿಗಳನ್ನೂ ಸಹ ತಪ್ಪುದಾರಿಗೆ ಎಳೆಯುತ್ತಾರೆ. ಆದ್ದರಿಂದ ಈ ವ್ಯವಸಾಯ ವರಮಾನ ತೆರಿಗೆಯನ್ನು ತೆಗೆದುಹಾಕಿ ಈಗಿರತಕ್ಕ ಕಂದಾಯವನ್ನು ಖಾಯಂ ಮಾಡುವುದರಲ್ಲಿ ಪ್ರಯತ್ನಪಡಬೇಕು. ಇರತಕ್ಕ ಕಂದಾಯವನ್ನು ಜಾಸ್ತಿಮಾಡುವುದಕ್ಕಿಂತ ಏನು ಕಂದಾಯ ಮೊದಲಿನಿಂದಲೂ ಇದೆಯೋ ಅದನ್ನು ಕೂಡಲೇ ಖಾಯಂ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಭೂಸುಧಾರಣೆಯ ವಿಷಯದಲ್ಲಿ ತಾವು ಅನೇಕಸಾರಿ ಚರ್ಚೆ ನಡೆಸಿ ಒಂದು ತೀರ್ಮಾನಕ್ಕೆ ಬಂದ ಮೇ 2ನೇ ತಾರೀಖೇ ಕೊನೆಯ ತಾರೀಖು ಎಂಬುದಾಗಿ ಹೇಳಿ ಅಷ್ಟರವರೆಗೆ ಬಿಡಿಸಿಕೊಳ್ಳತಕ್ಕವರು ಅರ್ಜಿ ಹಾಕಲು ಒಂದು ಅವಕಾಶ ಕೊಟ್ಟಿದ್ದಿರಿ. ಅದು ಮುಗಿದಿದೆ. ಇವತ್ತು ಕೋರ್ಟಿನಲ್ಲಿ ಅವನ್ನು ತೀರ್ಮಾನ ಮಾಡಬೇಕು. ಈ ಬಗ್ಗೆ ಸ್ಪೆಷಲ್ ಕೋರ್ಟನ್ನು ಮಾಡುವಾಗ್ಗೆ ವಿಚಾರ ಮಾಡುವುದು ನಿಧಾನವಾಗುತ್ತಿದೆಯೆಂದು ಹೇಳುತ್ತಾರೆ. ಜಮೀನು ಬಿಡಿಸಿಕೊಳ್ಳುವ ಬಗ್ಗೆ ಅರ್ಜಿ ಹಾಕದೇ ಇರತಕ್ಕ ಗೇಣೀದಾರರು ಗೇಣಿಯನ್ನು ಪಾವತಿ ಮಾಡುವ ವಿಷಯದಲ್ಲಿ ಯಾವ ರೀತಿಯಲ್ಲಿ ನಡೆಯಬೇಕು ಎನ್ನುವುದರಲ್ಲಿ ಸರಿಯಾದ ತಿಳುವಳಿಕೆಯನ್ನು ಇನ್ನೂ ಕೊಟ್ಟಿಲ್ಲ. ಗೇಣಿ ಕೊಡಬೇಕೋ ಅಥವಾ ಬಿಡಬೇಕೋ ಎನ್ನುವುದನ್ನು ತಿಳಿಯುವುದಕ್ಕೆ ಈಗ ಒಂದು ತೊಂದರೆಯಾಗಿದೆ, ಅದಕ್ಕೆ ತಕ್ಕ ಪರಿಹಾರವನ್ನು ಸಾಕಷ್ಟು ಜಾಗ್ರತೆಯಾಗಿ ಸರ್ಕಾರದವರು ತಿಳಿಸಬೇಕು.

ಇನ್ನು ಲೆವಿ ವಿಷಯದಲ್ಲಿ ಅನೇಕ ಬಾರಿ ಮಾತನಾಡಿದ್ದೇನೆ. ಇದರಿಂದ ರೈತರಿಗೆ ವಿಪರೀತವಾಗಿ ಕಿರುಕುಳವಾಗುತ್ತಿದೆ. ಇದರ ಬಗ್ಗೆ ಸರ್ಕಾರದ ಪಾಲಿಸಿ ಸರಿಯಾಗಿದೆ. ಆದರೆ ಅದನ್ನು ಜಾರಿಗೆ ಕೊಡುವ ಸಂದರ್ಭದಲ್ಲಿ ಅಧಿಕಾರಿಗಳ ಕೈವಾಡಕ್ಕೆ ಅವಕಾಶ ಆಗಿದೆ. ಇದರಿಂದ ರೈತರಿಗೂ ಹಾಗೂ ಸರ್ಕಾರದ ಅಧಿಕಾರಿಗಳಿಗೂ ಬಾಂಧವ್ಯವೇ ಸರಿಹೋಗುವುದಿಲ್ಲ. ಅನೇಕ ಕಾನೂನುಗಳು ಅಧಿಕಾರಿಗಳ ಕೈಗೆ ಹೋದಾಗ ಅವರು ಅದನ್ನು ಒಂದು ಬಾಣವಾಗಿ ಉಪಯೋಗಿಸುವುದರಿಂದ ರೈತರು ವಿಪರೀತವಾಗಿ ತೊಂದರೆಪಡುತ್ತಿದ್ದಾರೆ. ಅನೇಕ ಕಡೆಗಳಲ್ಲಿ 100 ಅಥವಾ 150 ಕ್ವಿಂಟಾಲ್‌ನಂತೆ ಕೊಡುವವರಿಗೆ ಕೇವಲ 20-25 ಕ್ವಿಂಟಾಲ್ ತೆಗೆದುಕೊಂಡು ರಿಯಾಯಿತಿ ಅಥವಾ ಸರ್ಟಿಫಿಕೇಟ್ ನೇರವಾಗಿ ಇಷ್ಯೂ ಮಾಡಿದ್ದಾರೆ. ಆದರೆ ಒಂದೆರಡು ಅಥವಾ 10 ಕ್ವಿಂಟಾಲ್ ಕೊಡುವ ವ್ಯಕ್ತಿ 5 ಕ್ವಿಂಟಾಲ್ ಕೊಟ್ಟರೂ ಆತನ ವಿಷಯದಲ್ಲಿ ಕರುಣೆಯನ್ನೂ ಸಹ ತೋರಿಸದೆ ಇರುವ ಕೆಲವು ನಿದರ್ಶನಗಳೂ ಇವೆ. ನರಸಿಂಹರಾಜಪುರದ ತಾಲ್ಲೂಕಿನ ಅಧಿಕಾರಿಗಳಿಗೆ ಈ ವಿಷಯದಲ್ಲಿ ಆಗುತ್ತಿರುವ ತೊಂದರೆಯನ್ನು ನಾನು ಪ್ರತಿಸಾರಿಯೂ ಸರ್ಕಾರದ ಗಮನಕ್ಕೆ ತಂದಿದ್ದೇನೆ ಪ್ರಯೋಜನವಾಗಿಲ್ಲ. ಆದ್ದರಿಂದ ಈ ಸಂಬಂಧವಲ್ಲಿ ಇರತಕ್ಕ ಕೆಲವು ಕಾನೂನುಗಳನ್ನು ತೆಗೆದುಹಾಕಿ ರೈತರಿಗೆ ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯವಾದಂಥ ಕಾನೂನುಗಳನ್ನು ಮಾಡಲು ಕೂಡಲೆ ವಿಮರ್ಶೆಮಾಡಬೇಕಾಗಿದೆ. ಈ ಭೂಸುಧಾರಣೆಯ ವಿಷಯದಲ್ಲಿ ಒಂದು ನಿರ್ದಿಷ್ಟವಾದ ನೀತಿಯನ್ನು ಗೇಣಿದಾರರಿಗೆ ತಿಳಿಸುವುದು ಬಹಳ ಅಗತ್ಯವಾಗಿದೆ. ಇನ್ನು ಲೆವಿ ಸಿಸ್ಟಂ ಕಾನೂನಿನಲ್ಲಿ ಏನು ಹೇಳಿದ್ದಾರೆಂದರೆ ಈಗ ಗೇಣಿ ಏನು ಕೊಡಬೇಕೋ ಆದರಲ್ಲಿ ಕಾಲುಭಾಗದಷ್ಟು ವಜಾಮಾಡಿ ಲೆವಿಗೆ ಕೊಡಬೇಕು ಎಂದು ಹೇಳಿದ್ದಾರೆ. ಆದರೆ ಇದನ್ನು ಯಾವ ತಹಸೀಲ್ದಾರನೂ ರೈತರಿಗೆ ತಿಳಿಸದೇ ಇರುವುದರಿಂದ ಅನೇಕ ಅಧಿಕಾರಿಗಳು ರೈತರ ಹತ್ತಿರ ಹೋಗಿ ನೀವು ಕೊಡುವ ಲೆವಿ ಸರ್ಕಾರಕ್ಕೆ ಕೊಟ್ಟಿಲ್ಲ, ಪೂರ್ತಿಯಾಗಿ ಕೊಡಬೇಕು ಎಂದು ಕೇಳುತ್ತಿದ್ದಾರೆ, ತೊಂದರೆ ಕೊಡುತ್ತಿದ್ದಾರೆ. ನಮ್ಮ ಡೆವಲಪ್‌ಮೆಂಟ್ ಕಮಿಷನರ್ ಆಗಿರತಕ್ಕ ಶ್ರೀಮಾನ್ ಜಿ.ಕೆ.ವಿ. ರಾವ್ ಅವರೂ ಸಹ ಮೊನ್ನೆ ಬಂದಾಗ ತಾಲ್ಲೂಕ್ ಬೋರ್ಡಿನಲ್ಲಿಯೇ ಗೇಣಿದಾರರಿಗೆ ಆ ರೀತಿ ತೊಂದರೆಯಾಗುವುದಕ್ಕೆ ಅವಕಾಶವಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ರೈತರಿಗೆ ಸೂಕ್ತವಾದ ತಿಳಿವಳಿಕೆಯನ್ನು ಈ ಬಗ್ಗೆ ಕೊಡುವಂತೆ ಹೇಳಿದ್ದಾರೆ. ಇವತ್ತೂ ಕೂಡ ಪ್ರಶ್ನೋತ್ತರ ಕಾಲದಲ್ಲಿ ಸರ್ಕಾರದವರು ಉತ್ತರ ಹೇಳಿದ್ದಾರೆ. ಆಕ್ಟ್‌ನಲ್ಲಿರುವುದನ್ನು ರೈತರಿಗೆ ಯಾವ ರೀತಿ ತಿಳಿಸಬೇಕೆಂದು ಹೇಳಲಿಲ್ಲ. ಅದಕೋಸ್ಕರ ನಾವು ತಿಳಿಸಲಿಲ್ಲ ಎಂದು ಕೆಲವು ಅಧಿಕಾರಿಗಳು ಹೇಳಿದರು. ಆದ್ದರಿಂದ ಅನೇಕ ರೀತಿಯಲ್ಲಿ ಈ ಬಗ್ಗೆ ಸರ್ಕಾರದು ಪ್ರಜೆಗಳಿಗೆ ಹಾಗೂ ರೈತರಿಗೆ ಅನುಕೂಲಗಳನ್ನು ಒದಗಿಸಲು ತಕ್ಕ ಕಾನೂನುಗಳನ್ನು ಮಾಡಿದ್ದರೂ. ಅವನ್ನು ಜಾರಿಗೆ ಕೊಡುವ ಸಂದರ್ಭದಲ್ಲಿ ಕೆಲವು ಅಧಿಕಾರಿಗಳಿಂದ ರೈತರಿಗೆ ಬಹಳ ತೊಂದರೆಗಳು ಆಗುತ್ತಿವೆ. ಅವನ್ನು ಕೂಡಲೇ ಸರಿಪಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಪಡಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ದೇವಸ್ಥಾನಗಳ ಜಮೀನು ವಿಷಯ. ಅದು ಈಗ ಎಷ್ಟು ದೊಡ್ಡ ಸಮಸ್ಯೆಯಾಗಿದೆಯೋ ನನಗೆ ತಿಳಿಯದು. ಈ ವಿಷಯದಲ್ಲಿ ಸರ್ಕಾರಕ್ಕೆ ಅನೇಕ ವಿಷಯಗಳು ಕಂಡು ಬಂದಿಲ್ಲ. ಅವುಗಳಿಗೆ ಲಕ್ಷಾಂತರ ರೂಪಾಯಿಗಳಷ್ಟು ಉತ್ಪತ್ತಿ ಬರುತ್ತಿದೆ. ಆದರೆ ಆ ಲೆಕ್ಕ ಏನಾಯಿತು

(ಶ್ರೀ ಕೆ. ಎನ್. ವೀರಪ್ಪಗೌಡ)

ಎಂಬುದಾಗಿ ಸರ್ಕಾರ ಪರಿಶೀಲನೆ ಮಾಡಿದ ಹಾಗೆ ಕಾಣುತ್ತಿಲ್ಲ. ಯಾವಾಗಲೂ ಸಾರ್ವಜನಿಕರು ಸಾಮಾನ್ಯವಾಗಿ ಒಳ್ಳೆಯ ಉದ್ದೇಶಕ್ಕಾಗಿಯೇ ಕೊಡುತ್ತಾರೆ. ಸಾರ್ವಜನಿಕರು ಕೊಡುವುದನ್ನು ಮಠಗಳು ಹೇಗೆ ಬೇಕಾದರೂ ಉಪಯೋಗಿಸಿಕೊಳ್ಳಬಹುದು ಎಂದು ಯಾರೂ ಕೊಡುವುದಿಲ್ಲ. ಆದರೆ ಅನೇಕ ದೇವಸ್ಥಾನಗಳಲ್ಲಿ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಎಷ್ಟರಮಟ್ಟಿಗೆ ದುಡ್ಡು ಬರುತ್ತದೆ ಎಂಬುದು ಸರ್ಕಾರಕ್ಕೇ ಗೊತ್ತಿಲ್ಲ. ಅದು ಯಾವ ರೂಪದಲ್ಲಿ ಖರ್ಚು ಆಗುತ್ತದೆ, ಯಾವ ಉದ್ದೇಶದಿಂದ ಅದನ್ನು ಸ್ಥಾಪನೆ ಮಾಡಿದ್ದಾರೋ ಆ ಉದ್ದೇಶಕ್ಕೆ ಖರ್ಚಾಗುತ್ತದೆಯೋ ಇಲ್ಲವೋ ಎಂಬುದನ್ನು ವಿಮರ್ಶೆ ಕೂಡ ಮಾಡುವುದಿಲ್ಲ. ನಾನು ಕೆಲವು ವಿಷಯಗಳನ್ನು ತಿಳಿದುಕೊಂಡಿದ್ದೇನೆ ಶೃಂಗೇರಿ ಮಠದ ವಿಷಯದಲ್ಲಿ ಅಧಿಕಾರಿಗಳು ಲೆಕ್ಕವನ್ನು ಕೊಡಬೇಕು ಎಂಬುದಾಗಿ ಕೇಳಿದ್ದಕ್ಕೆ ಆ ಬಗ್ಗೆ ಉತ್ತರವನ್ನೂ ಕೂಡ ಇದುವರೆಗೂ ಕೊಟ್ಟಿಲ್ಲ. ಯಾರೋ ಒಬ್ಬ ಅಧಿಕಾರಿ ಆ ವಿಷಯವನ್ನು ನನ್ನ ಕಿವಿಗೆ ಹಾಕಬೇಡಿ ಎಂದೂ ಸಹ ಹೇಳಿದ್ದಾರೆ. ಅಂದಮೇಲೆ ಅವರ ಬಗ್ಗೆ ತಕ್ಕ ಕ್ರಮ ತೆಗೆದು ಕೊಳ್ಳುವುದಕ್ಕೆ ಅವಕಾಶವಿದೆಯೋ ಇಲ್ಲವೋ ಗೊತ್ತಿಲ್ಲ. ಶೃಂಗೇರಿ ಮಠಕ್ಕೆ ತಮಗೆ ಗೊತ್ತಿರುವ ಹಾಗೆ ಸರ್ಕಾರದವರು ಲಕ್ಷಾಂತರ ರೂಪಾಯಿ ಕೊಡುತ್ತಿದ್ದಾರೆ. ಹಿಂದೆ ಅನೇಕ ರಾಜಾಧಿ ರಾಜರುಗಳು ಮಠಗಳಿಗೆ ಇನಾಂತಿಗಳನ್ನು ಕೊಟ್ಟಿದ್ದರು. ರಾಜಾಧಿರಾಜರುಗಳೇ ಹೋದಾಗ ಅವರು ಕೊಟ್ಟಿದ್ದು ಹೇಗೆ ಉಳಿಯಬೇಕು ? ಈವೊತ್ತು ಸರ್ಕಾರಿ ಜಮೀನುಗಳನ್ನು ಮಠದವರು ಆಕ್ರಮಿಸಿಕೊಂಡರೂ ಕೂಡ ಸರ್ಕಾರದ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವ ಗೋಜಿಗೆ ಹೋಗಿಯೇ ಇಲ್ಲ. ಆದುದರಿಂದ ಸರ್ಕಾರದವರು ಈ ವಿಷಯದಲ್ಲಿ ಹೆಚ್ಚಿನ ಒಂದು ಗಮನವನ್ನು ತೆಗೆದುಕೊಳ್ಳಬೇಕು. ಅನೇಕ ಸರ್ಕಾರಿ ಅಧಿಕಾರಿಗಳು ತಪ್ಪು ದಾರಿಯನ್ನು ಹಿಡಿದರೆ ಸರಕಾರ ಉಗ್ರಕಾರ್ಯಕ್ರಮ ಕೈಗೊಳ್ಳಬೇಕು. ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಈ ವಿಷಯ ದಲ್ಲಿ ಸರ್ಕಾರದವರು ಹೆಚ್ಚು ಗಮನಕೊಡದಿದ್ದಲ್ಲಿ ಸಾರ್ವಜನಿಕರ ಟೀಕೆಗೆ ಗುರಿಯಾಗಬೇಕಾಗುತ್ತದೆ ಒಬ್ಬ ಮನುಷ್ಯ ಒಂದು ಎಕರೆ ಮಾಡುವಾಗ 1 – 2ಗುಂಟೆ ಹೆಚ್ಚಿಗೆ ಮಾಡಿದರೆ ಅದಕ್ಕೆ ಅಧಿಕಾರಿಗಳು ಅವನಿಗೆ ಕೊಡತಕ್ಕ ಹಿಂಸೆ ನೋಡಿದರೆ ಅಸಾಧ್ಯವಾಗಿರುತ್ತದೆ. ಸರ್ವೆ ವಗೈರೆಗಳನ್ನು ಮಾಡಿಸಿ ತೊಂದರೆ ಕೊಟ್ಟು ಹಿಂಸೆ ಮಾಡುವುದು ಜನಜನಿತವಾದ ವಿಷಯ. ಹೀಗಿರುವಾಗ ನೂರಾರು ಎಕರೆ ಜಮೀನುಗಳನ್ನು ಹೇಳದೆ ಕೇಳದೆ ಆಕ್ರಮಿಸಿಕೊಂಡಿರುವ ಮಠದವರನ್ನು ಕೇಳತಕ್ಕಂಥವರೇ ಇಲ್ಲ. ಈ ರೀತಿ ಅಧಿಕಾರಿಗಳು ಮಠಗಳಿಗೆ ಏತಕ್ಕೆ ತಲೆಬಾಗಿ ಅವರ ಮಾತಿಗೆ ಒಪ್ಪಿಕೊಳ್ಳುತ್ತಾರೆ ಎಂಬುದನ್ನು ವಿಮರ್ಶೆ ಮಾಡಬೇಕಾಗಿದೆ. ಅಂತಹವರ ವಿಷಯದಲ್ಲಿ ಸರ್ಕಾರ ತೀವ್ರ ಗಮನ ತೆಗೆದುಕೊಳ್ಳಬೇಕು. ಹೀಗೆ ತೆಗೆದುಕೊಳ್ಳದೇ ಇದ್ದ ಪಕ್ಷದಲ್ಲಿ ಮುಂದೆ ಯಾವ ಪರಿಸ್ಥಿತಿ ಬರುತ್ತದೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಇದು ಸಾಮಾನ್ಯವಾಗಿ ದೇವಸ್ಥಾನಗಳಿಗೆ ಸಂಬಂಧ ಪಟ್ಟಂತಾದರೂ ಅದೇ ಮಟ್ಟದಲ್ಲಿ ದೊಡ್ಡ ದೊಡ್ಡ ಜಮೀನ್ದಾರರಿಗೂ ಇದು ಅನ್ವಯಿಸುತ್ತದೆ. ದೊಡ್ಡ ದೊಡ್ಡ ಜಮೀನ್ದಾರರುಗಳಾದವರಿಗೆ ಸಾಮಾನ್ಯವಾಗಿ ಗುಂಟೆ ಲೆಕ್ಕ ಸಿಕ್ಕುವುದಿಲ್ಲ. ನೂರಾರು ಎಕರೆಯನ್ನು ಆಕ್ರಮಿಸಿಕೊಳ್ಳುತ್ತಾರೆ. ನರಸಿಂಹರಾಜಪುರದಲ್ಲಿ ಇಂಥಾದ್ದು ಒಂದು ನಡೆದಿದೆ ಯಾವ ಸರ್ವೆ ಸೂಪರಿಂಟೆಂಡೆಂಟ್‌ನ್ನು ಕಳುಹಿಸಿದರೂ ಕೂಡ ಅವರು ಕಂಡು ಹಿಡಿಯು ವುದಕ್ಕೆ ಇಷ್ಟಪಡುವುದಿಲ್ಲ. ನೀವು ಏನಾದರೂ ಮಂತ್ರಿಗಳನ್ನು ನಿಲ್ಲಿಸಿಕೊಂಡು ಅಳತೆ ಮಾಡಿದರೆ ಸಿಕ್ಕಬಹುದು ಎಂದು ಜನಗಳು ಹೇಳುತ್ತಾ ಇದ್ದಾರೆ. ನೂರಾರು ಎಕರೆ ಆಕ್ರಮ ಇದೆಯೆಂದು ಹೇಳುತ್ತಾರೆ. ಹೀಗೆ ದೊಡ್ಡ ದೊಡ್ಡ ಮಠಗಳಿಗೂ, ಶ್ರೀಮಂತರಿಗೂ ಒಳಗಾಗಿ ಅಧಿಕಾರಿಗಳು ಸುಖವಾಗಿ ಬಾಳುವ ಪರಿಸ್ಥಿತಿ ಜಾಸ್ತಿಯಾಗಿದೆ. ಇದನ್ನು ತಪ್ಪಿಸಲು ನಿರ್ದಿಷ್ಟವಾದ ಕಾರ್ಯ ಕ್ರಮಗಳನ್ನು ಕೈಗೊಂಡು ಕೆಲವು ಕೇಸುಗಳನ್ನಾದರೂ ಕೂಡ ರೆಗ್ಯುಲರ್ ಎನ್‌ಕ್ವೈರಿ ಮಾಡಿ. ಅಂತಹ ಅಧಿಕಾರಿಗಳಿಗೆ ದೇಶದ ಹಿತದೃಷ್ಟಿಯಿಂದ ಅಥವಾ ಎಲ್ಲಾ ಅಧಿಕಾರಿಗಳು ಎಚ್ಚೆತ್ತುಕೊಳ್ಳುವ ದೃಷ್ಟಿಯಿಂದ ಮನೆಗೆ ಕಳುಹಿಸತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಬಹಳ ಸೂಕ್ತ ಎಂದು ನಾನು ಇಷ್ಟಪಡುತ್ತೇನೆ. ತಾವು ಈ ವಿಷಯದಲ್ಲಿ ಸಂಪೂರ್ಣವಾದ ಒಂದು ವಿಮರ್ಶೆ ಮಾಡಿ ಕಾನೂನು ಮಾಡಬೇಕಾಗಿದೆ.

ಶ್ರೀ ಬಿ. ಪಿ. ಗಂಗಾಧರ್.—ಅವರಿಗೆ ಗೌರ್ನಮೆಂಟ್ ಪ್ರೊಟೆಕ್ಷನ್ ಇರುತ್ತದೆ. ಆದುದರಿಂದ ಅವರ ಮೇಲೆ ಏನು ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ವಿದ್ಯಾಭ್ಯಾಸದ ವಿಷಯದಲ್ಲಿ ಸರ್ಕಾರದವರು ಸಾಕಷ್ಟು ಹಣ ಕಾಸನ್ನು ಖರ್ಚುಮಾಡುತ್ತಿದ್ದಾರೆ. ಅನುಕೂಲವೂ ಕೂಡ ಆಗುತ್ತಾ ಇದೆ. ಕಳೆದ ಕೆಲವು ವರ್ಷಗಳ ಹಿಂದೆ ಸರ್ಕಾರಿ ಹೈಸ್ಕೂಲುಗಳನ್ನು ಕೊಡುವುದಕ್ಕೆ ಸಾಧ್ಯ ಇಲ್ಲದೇ ಇರುವಾಗ ಖಾಸಗೀ

ಹೈಸ್ಕೂಲುಗಳನ್ನು ಮಾಡಿಕೊಂಡು ಅದು ಮೂರು ವರ್ಷ ಕಾಲ ನಡೆಸಿದರೆ ಆಮೇಲೆ ಸರ್ಕಾರ ಗ್ರ್ಯಾಂಟ್ ಕೊಡುವುದನ್ನು ವಿಮರ್ಶೆ ಮಾಡುವುದಕ್ಕೆ ಒಂದು ನೀತಿಯನ್ನು ಹಾಕಿದರು. ಅಂತಹ ಒಂದು ಸಂದರ್ಭದಲ್ಲಿ ಅನೇಕ ಖಾಸಗೀಯವರು ಹೈಸ್ಕೂಲುಗಳನ್ನು ಮಾಡಬೇಕೆಂದು ಪ್ರಾರಂಭ ಮಾಡಿ ಸ್ಕೂಲ್‌ಗಳನ್ನು ಪ್ರಾರಂಭ ಮಾಡಿದರು. ಇದು ತಮಗೆ ತಿಳಿದಿದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಎಷ್ಟು ಫಲಿತಾಂಶ ಬರುತ್ತಾ ಇದೆ ಎನ್ನುವುದು ತಮಗೆ ತಿಳಿದಿದೆ. ಖಾಸಗಿ ಯವರಿಗೆ ಹಣಕಾಸಿನ ಪರಿಸ್ಥಿತಿ ಕಷ್ಟ ಇದೆ. ಆದುದರಿಂದ ಸರಿಯಾದ ಉಪಾಧ್ಯಾಯರು ಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಕಷ್ಟ ಇದೆ. ಸಾರ್ವಜನಿಕರು ಅದರಲ್ಲೂ ಮಲೆ ನಾಡಿನ ಪ್ರದೇಶದಲ್ಲಿರತಕ್ಕಂಥವರ ಮಕ್ಕಳು ಸ್ಕೂಲಿಗೋಸ್ಕರ 10-15 ಮೈಲಿ ಹೋಗುವುದಕ್ಕೆ ಕಷ್ಟವಾಗುತ್ತದೆ ಎಂದು ತಿಳಿದುಕೊಂಡು ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಖಾಸಗೀ ಹೈಸ್ಕೂಲುಗಳನ್ನು ಪ್ರಾರಂಭ ಮಾಡಿದರು. ಹೀಗಿರುವಾಗ ಈವೊತ್ತಿನ ವಿದ್ಯಾಭ್ಯಾಸದ ಪರಿಸ್ಥಿತಿ ಏನಾಗಿದೆ ಎಂದು ತಮಗೆ ಗೊತ್ತಿದೆ. ಇತ್ತೀಚೆಗೆ ಹೈಸ್ಕೂಲ್ ಎಜುಕೇಷನ್ ವಿಷಯದಲ್ಲಿ ಒಂದು ಪ್ರೆಸ್ ನೋಟನ್ನು ಇಸ್ಯೂ ಮಾಡಿದ್ದಾರೆ. ಅದರ ಪ್ರಕಾರ ಸೆಂಟ್‌ಪರ್ಸೆಂಟ್ ಸಂಬಳ ಕೊಡುತ್ತಿದ್ದಾರೆ. ವಿದ್ಯಾಭಾಸಕ್ಕಾಗಿ ಕೋಟಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದಾರೆ. ಅದರಲ್ಲಿ ಲಕ್ಷಗಟ್ಟಲೆ ಖರ್ಚು ಮಾಡಿ. ಎಜುಕೇಶನ್ ವಿಷಯದಲ್ಲಿ ಒಂದು ಹೆಚ್ಚಿನ ಅನುಕೂಲವಾಗುವುದಕ್ಕೆ ಅವಕಾಶಮಾಡಿಕೊಡುವುದು ಒಳ್ಳೆಯದು. ಇವೊತ್ತು ಹೈಸ್ಕೂಲು ಗಳನ್ನು ಖಾಸಗಿಯವರೇ ನಡೆಸಲಿ ಯಾರೇ ನಡೆಸಲಿ ಸರಕಾರದ ಈಗಿನ ಪ್ರೆಸ್ ನೋಟಿನಂತೆ ಎಲ್ಲಾ ಹೈಸ್ಕೂಲುಗಳಿಗೂ ಮೂರು ವರ್ಷದ ಗಣನೆ ಇಟ್ಟುಕೊಳ್ಳದೆ ಅವರಿಗೆ ಅನುಕೂಲ ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ವಿಧ್ಯಾಭ್ಯಾಸದ ವಿಷಯದಲ್ಲಿ ನಮ್ಮ ಸರ್ಕಾರದವರು ಒದಗಿಸಿರತಕ್ಕ ಅನುಕೂಲತೆಯನ್ನು ಯಾರು ದೂರುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಹೈಸ್ಕೂಲ್ ಎಜುಕೇಷನನ್ನು ಫ್ರೀ ಕೊಡುತ್ತಿದ್ದಾರೆ ಎಂದು ಕೇಳಿ ನಮ್ಮ ರೈತರು ಬಹಳ ಸಂತೋಷಪಟ್ಟಿದ್ದಾರೆ. ಸರ್ಕಾರ ಟ್ಯಾಕ್ಸ್ ಹಾಕಿದಾಗ ಈ ಸಮಾಧಾನವನ್ನು ನಾವು ಹೇಳುತ್ತಿ ದ್ದೇವೆ. ಇದು ಸರಿಯಾಗಿದೆ ಎಂದು ಹೇಳುತ್ತೇನೆ. ಸಾಕಷ್ಟು ಅನುಕೂಲಗಳು ಆಗಿವೆ. ಆದರೆ ಈಗ ಇರತಕ್ಕಂಥ ಎಲ್ಲಾ ಹೈಸ್ಕೂಲ್‌ಗಳಿಗೂ ಸರಿಯಾದ ಒಂದು ಅನುಕೂಲವನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಎಲೆಕ್ಟ್ರಿಸಿಟಿ ವಿಷಯದಲ್ಲಿ ಸ್ವಲ್ಪ ಹೆಚ್ಚಿನ ಅನುಕೂಲತೆ ಜನಗಳಿಗೆ ಆಗಬೇಕು? ಎಂದು ಸರ್ಕಾರದ ಉದ್ದೇಶ ಇದು. ಸಾಕಷ್ಟು ಅನುಕೂಲತೆಗಳನ್ನು ಮಾಡಿಕೊಡುತ್ತಿದ್ದಾರೆ. ಆದರೆ ಈ ಅಧಿಕಾರಿ ಗಳ ವಲಯದಲ್ಲಿ ಸ್ವಲ್ಪಮಟ್ಟಿಗೆ ನಿಧಾನವಾಗಿದೆ. ಅದು ಏಕೆ ನಿಧಾನವಾಗಿದೆ ಎಂದು ಹೇಳುವುದು ಅಷ್ಟೊಂದು ಸೂಕ್ತವಲ್ಲದಿದ್ದರೂ ಈ ರೋಗ ಎಲ್ಲಾ ಕಡೆಗೂ ಹರಡಿದೆ. ಅಧಿಕಾರಿಗಳು ಯಾರೇ ಆಗಲಿ ರೈತರು ಪ್ರಯತ್ನಪಟ್ಟು ಅವರನ್ನ ಹಾಸನಕ್ಕೆ ಕರೆದುಕೊಂಡು ಹೋಗಿ ಅಥವಾ ಮೈಸೂರಿಗೆ ಕರೆದುಕೊಂಡು ಹೋಗಿ ಸ್ಯಾಂಕ್ಷನ್ ಮಾಡಿಸಿಕೊಂಡು ಬರಬೇಕಾದ ಸಂದರ್ಭ ಇದೆ. ಇದು ತಮಗೆ ಕಾರಣ ಅರ್ಥವಾಗಬಹುದು. ಇದರ ಮೇಲೆ ಸರ್ಕಾರದವರು ಹೆಚ್ಚಿನ ಒಂದು ದೃಷ್ಟಿ ಇಡಬೇಕು. ರೆವಿನ್ಯೂ ಮತ್ತು ಎಲೆಕ್ಟ್ರಿಸಿಟಿ ಏನು ಇದೆ ಅದು ನೇರವಾಗಿ ದೇಶಕ್ಕೆ ಉತ್ಪತ್ತಿ ಕೊಡುವಂಥ ಇಲಾಖೆ. ಎಷ್ಟು ಮುಂಚೆ ಕೊಟ್ಟರೆ ಅಷ್ಟು ದುಡ್ಡು ಬರುತ್ತದೆ. ಕಿರುಗೋಡು ರೈತರು 2 ವರ್ಷದ ಹಿಂದೆ ಪಂಪುಸೆಟ್ಟಿಗೆ ಅರ್ಜಿ ಹಾಕಿಕೊಂಡು ಡಿಪಾಜಿಟ್ ಕಟ್ಟಿ ಕೇಳುತ್ತಾ ಇದ್ದು $1\frac{1}{2}$ ವರ್ಷ 2 ವರ್ಷ ಆಗಿದೆ. ಅವರಿಗೆ ಕೆಲಸ ಮಾಡಿಕೊಟ್ಟಿದ್ದರೆ ಸರ್ಕಾರಕ್ಕೆ ಎಷ್ಟೋ ಉತ್ಪತ್ತಿ ಈ ಇಲಾಖೆಗೆ ಬರುತ್ತಿತ್ತು. ಈ ರೀತಿ ನಿಧಾನ ಮಾಡಿದಾಗ ಈ ಲುಕ್ಸಾನಿಗೆ ಯಾರು ಜವಾಬ್ದಾರರು ಈ ಲುಕ್ಸಾನನ್ನು ಅಂಥ ಅಧಿಕಾರಿಗಳಿಂದ ವಸೂಲಿಗೆ ಹೊರಟರೆ ಲಂಚ ಕಡಿಮೆಯಾಗಲು ಅವಕಾಶ ವಾಗುತ್ತದೆ. ಈ ದೇಶದಲ್ಲಿ ಲಂಚ ಬಹಳ ಜಾಸ್ತಿ ಆಗಿದೆ ಎಂದು ಹೇಳುತ್ತಾರೆ. ಇದನ್ನು ಕಡಿಮೆ ಮಾಡುವುದಕ್ಕೆ ಒಂದು ಇಲಾಖೆ ಮಾಡಿದ್ದೀರಿ. ಅದರಿಂದ ಪ್ರಯೋಜನ ಆಗುವುದು ಕಷ್ಟ. ಅದರ ಬದಲು ಯಾರು ಉತ್ಪತ್ತಿಗೆ ನಷ್ಟ ಮಾಡಿದ್ದಾರೆ ಅವರ ಮೇಲೆ ಕ್ರಮ ಕೈಕೊಳ್ಳುವಂತಿರಬೇಕು. ಕೆಲಸವೂ ಜಾಗ್ರತೆ ಆಗಿ ಅದರಿಂದ ಉತ್ಪತ್ತಿಜಾಸ್ತಿಯಾಗುತ್ತದೆ ಎಂದು ನಾನು ನನ್ನ ಅನುಭವ ದಿಂದ ಹೇಳುತ್ತೇನೆ. ಈ ರೆವಿನ್ಯೂ ಇಲಾಖೆಯಲ್ಲಿ 3-4 ವರ್ಷ ಆದರೂ ಕೂಡ ದರಖಾಸ್ತುಗಳು ವಿಲೇವಾರಿ ಆಗುತ್ತಾ ಇಲ್ಲ. ಅನೇಕ ವೇಳೆ 10 ವರ್ಷ 12 ವರ್ಷ ನಿಧಾನವಾಗಿರತಕ್ಕ ನಿದರ್ಶನ ಗಳನ್ನು ಕೊಡಬಲ್ಲೆ. ಏಕೆಂದರೆ ಈ ಜಿಲ್ಲಾಧಿಕಾರಿಗಳು ಒಂದು ತೀರ್ಮಾನವನ್ನು ಮಾಡಿ ಡಿವಿಷನಲ್ ಕಮಿಷನರಿಗೆ ಕಳುಹಿಸುತ್ತಾರೆ. ಆವಾಗ 2 ವರ್ಷ ಅಪೀಲು ರೂಪದಲ್ಲಿ ಸಲ್ಪಮಟ್ಟಿಗೆ ತಳ್ಳುತ್ತಾರೆ ಆಮೇಲೆ ಒಂದು ದಿವಸ ಒಬ್ಬ ಗುಮಾಸ್ತೆ ಯಾವುದೋ ಪಾಯಿಂಟನ್ನು ಡೆಪ್ಯುಟಿ ಕಮಿಷನರವರ ವರದಿಯಲ್ಲಿ ಇಲ್ಲ ಎಂದು ಅಪೀಲನ್ನು ರಿಮ್ಯಾಂಡ್ ಮಾಡಿ ಹಿಂದಕ್ಕೆ ಕಳುಹಿಸುತ್ತಾನೆ. ಅದು ವಾಪಸ್ಸು ಡೆಪ್ಯೂಟಿ ಕಮಿಷನರಿಗೆ ಬರುತ್ತದೆ. ಎರಡು ವರ್ಷ ಇಲ್ಲಿ ನಿಧಾನವಾಗುತ್ತೆ ಇದಕ್ಕೆ

(ಶ್ರೀ ಕೆ. ಎನ್. ವೀರಪ್ಪಗೌಡ)

ಅನೇಕ ನಿದರ್ಶನಗಳನ್ನು ಕೊಡಬಲ್ಲೆ. ಹೀಗೆ 10 ವರ್ಷ ಮೇಲಿಂದ ಕೆಳಗೆ ಕೆಳಗಿನಿಂದ ಮೇಲಕ್ಕೆ ಈರೀತಿ ಓಡಾಡುತ್ತಾ ಇರುತ್ತದೆ. ಇದರಿಂದ ನೂರಾರು ಎಕರೆ ಜಮೀನು ಸ್ಯಾಂಕ್ಷನ್ನು ಆಗದೆ ಜಮೀನು ಉತ್ಪತ್ತಿಯಿಂದ ಸರ್ಕಾರಕ್ಕೆ ಬಹಳ ನಷ್ಟವಾಗುತ್ತದೆ. ಅದರಿಂದ ರೈತರಿಗೂ ಅನಾನುಕೂಲ ವಾಗಿದೆ. ಇದನ್ನು ತಿಳಿದುಕೊಳ್ಳಬೇಕು. ಆದುದರಿಂದ ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ. ಈ ರೀತಿ ಮಾಡಿದರೆ ರೈತರಿಗೂ ಸರ್ಕಾರಕ್ಕೂ ಅನುಕೂಲವಾಗುತ್ತದೆ ಎಂದು ತಮಗೆ ಹೇಳಬಯಸುತ್ತೇನೆ. ಈ ಲುಕ್ಸಾನುಗಳಿಗೆ ಅಧಿಕಾರಿಗಳ ಜವಾಬ್ದಾರಿ ನಿಗದಿ ಮಾಡುವ ಅವಕಾಶ ಕಾನೂನಿನಲ್ಲಿ ತಂದರೆ ಕಾರ್ಯ ಬೇಗ ಆಗುತ್ತದೆ.

ಇದರ ಜೊತೆಯಲ್ಲಿ ಡಿವಿಜನಲ್ ಕಮೀಷನರುಗಳ ಆಫೀಸುಗಳು ಮತ್ತು ಸಬ್ ಡಿವಿಜನ್ ಆಫೀಸುಗಳು ಇವೆ. ಈ ಎರಡು ಆಫೀಸುಗಳ ಅಗತ್ಯವಿಲ್ಲ ಎಂದು ಅನೇಕ ವೇಳೆ ಅಭಿಪ್ರಾಯ ಬಂದಿದೆ. ಅದು ಸರ್ಕಾರದ ಗಮನಕ್ಕೂ ಬಂದಿದೆ. ಒಮ್ಮೆ ಡಿವಿಜನಲ್ ಕಮೀಷನರ ಆಫೀಸನ್ನು ತೆಗೆದುಹಾಕುತ್ತಾರೆ ಎನ್ನುವ ವದಂತಿಯನ್ನು ನಾವು ಕೇಳಿದ್ದೇವೆ. ಈಗ ಆ ಆಫೀಸುಗಳಲ್ಲಿರತಕ್ಕ ಕೆಲವು ಅಧಿಕಾರಿಗಳನ್ನು ರೆವಿನ್ಯೂ ಬೋರ್ಡಿಗೆ ಕೊಟ್ಟು ಅವರನ್ನು ಕಂಟಿನ್ಯೂ ಮಾಡಿದಂತೆ ಕಾಣು ತ್ತದೆ. ನಿಜವಾಗಿಯೂ ಇಷ್ಟೊತ್ತು ಸರ್ಕಾರದವರು ಉಳಿತಾಯ ಮಾಡಬೇಕೆಂದು ಪ್ರಯತ್ನ ಮಾಡು ತ್ತಿದ್ದಾರೆ. ಈ ಎರಡು ಆಫೀಸುಗಳನ್ನು ರದ್ದು ಮಾಡುವುದರಿಂದ ಎಷ್ಟೋ ಹಣ ಉಳಿತಾಯವಾಗು ತ್ತದೆ. ರೈತರ ಅರ್ಜಿಗಳು, ರೆಕಾರ್ಡುಗಳು ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ ಹೋಗಿ ಅಲ್ಲಿ ಸುತ್ತಿಕೊಂಡು ಬರಬೇಕಾದರೆ ಬಹಳ ನಿಧಾನವಾಗುತ್ತದೆ. ಅದೂ ಅಲ್ಲದೆ ಜನಗಳು ಎರಡು ಮೂರು ಆಫೀಸುಗಳಿಗೆ ಓಡಾಡಿ ಹೆಚ್ಚಿನ ಖರ್ಚು ವೆಚ್ಚಗಳನ್ನು ಮಾಡಬೇಕಾಗುತ್ತದೆ ಮತ್ತು ಇದರಿಂದ ಆಗಬೇಕಾದ ಕೆಲಸಗಳು ನಿಧಾನವಾಗಿ ರೈತರಿಗೂ ಮತ್ತು ದೇಶಕ್ಕೂ ಬರತಕ್ಕ ಉತ್ಪತ್ತಿ ಕಡಿಮೆಯಾಗುತ್ತದೆ. ನಮ್ಮ ಮಾನ್ಯ ಸ್ನೇಹಿತರು ಈಗಾಗಲೇ ಈ ಬಗ್ಗೆ ಹೇಳಿದ್ದಾರೆ. ಆದಷ್ಟು ಜಾಗ್ರತೆ ಉಳಿತಾಯವನ್ನು ಮಾಡಬೇಕೆಂಬ ದೃಷ್ಟಿಯಿಂದಲೂ ಮತ್ತು ರೈತರ ವ್ಯವಹಾರವು ಸುಸೂತ್ರ ವಾಗಿ ಬೇಗ ಆಗಬೇಕೆಂಬ ದೃಷ್ಟಿಯಿಂದಲೂ ಡಿವಿಜಿನಲ್ ಕಮೀಷನರ ಆಫೀಸು ಮತ್ತು ಸಬ್ ಡಿವಿಜನ್ ಆಫೀಸು ಈ ಎರಡು ಆಫೀಸುಗಳನ್ನು ತೆಗೆದುಹಾಕುವುದು ಬಹಳ ಒಳ್ಳೆಯದು. ಈಗ ತಾಲ್ಲೂಕ್ ಬೋರ್ಡು ಬಂದಿರುವುದರಿಂದ ಆಫೀಸುಗಳಲ್ಲಿ ಸಾಕಷ್ಟು ಕೆಲಸ ಕಡಿಮೆಯಾಗಿದೆ. ಆದ್ದ ರಿಂದ ಈ ಆಫೀಸುಗಳನ್ನು ದಯವಿಟ್ಟು ತೆಗೆದುಹಾಕಿ ಸರ್ಕಾರಕ್ಕೆ ಸಾಕಷ್ಟು ಉಳಿತಾಯ ಮಾಡಿ ದೇಶದ ಅಭಿವೃದ್ಧಿಗಾಗಿ ಆ ಹಣವನ್ನು ಉಪಯೋಗಿಸತಕ್ಕದ್ದು ಸೂಕ್ತ ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೆಲವು ಇಲಾಖೆಗಳ ವಿಷಯದಲ್ಲಿ ಹೇಳುವುದಾದರೆ ಈಗ ವಿಪರೀತವಾಗಿ ಇಲಾಖೆಗಳು ಹೆಚ್ಚಾಗುತ್ತಿವೆ. ಅವು ಹೇಗೆ ಆಗುತ್ತಿವೆ ಎಂಬುದು ಗೊತ್ತಾಗುವುದಿಲ್ಲ. ನಾನು ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟಾಗಿ ಓಡಾಡುವುದರಲ್ಲಿ ನೋಡುವಾಗ ಈಗ ಎಲ್ಲಾದರೂ ಎಸ್.ಡಿ.ಓ.ಗಳು ಹೋದಾಗ ಅವರ ಜೊತೆಯಲ್ಲಿ ಜಾಸ್ತಿ ಜನ ಅಧಿಕಾರಿಗಳು ಇದ್ದರೆ ಅದರಿಂದ ಅವರಿಗೆ ಹೆಚ್ಚು ಗೌರವ ಬರಬಹುದೆಂತಲೂ, ಅವರ ಜೊತೆಯಲ್ಲಿ ಒಬ್ಬಿಬ್ಬರು ಅಧಿಕಾರಿಗಳು ಎಂದರೆ ಕಡಿಮೆ ಜನ ಅಧಿಕಾರಿ ಗಳು ಇದ್ದರೆ ಅದರಿಂದ ಅವರಿಗೆ ಅಗೌರವವೆಂದು ಹೇಳತಕ್ಕಂಥ ಮನೋಭಾವ ಕಳೆದು ಆಫೀಸುಗಳು ಮತ್ತು ಅಧಿಕಾರಿಗಳು ಜಾಸ್ತಿಯಾಗುತ್ತಿದ್ದಾರೋ ಏನೋ ಎಂದು ನನಗೆ ಅನಿಸುತ್ತದೆ. ಅನೇಕ ಇಲಾಖೆಗಳು ಜಾಸ್ತಿಯಾಗುವ ಸಂದರ್ಭದಲ್ಲಿ ಸರ್ಕಾರದವರು ಅದನ್ನು ಕೂಲಂಕಷವಾಗಿ ವಿಮರ್ಶೆ ಮಾಡತಕ್ಕ ಅವಕಾಶ ಸಿಕ್ಕದೆ ಇದ್ದು ಅದು ಜಾಸ್ತಿಯಾಗುತ್ತಾ ಇದ್ದರೂ ಇರಬಹುದು. ಹಾರ್ಟಿಕಲ್ ಚರಲ್ ಮತ್ತು ಅಗ್ರಿಕಲ್‌ಚರಲ್ ಇಲಾಖೆಗಳಲ್ಲಿ ನಡೆಯತಕ್ಕ ಕೆಲಸಗಳನ್ನು ನೋಡಿದರೆ ಆಶ್ಚರ್ಯಕರ ವಾಗಿದೆ. ವ್ಯವಸಾಯ ಇಲಾಖೆಯ ಒಬ್ಬ ಮನುಷ್ಯ ಒಂದು ಹಳ್ಳಿಗೆ ಹೋಗಿ ತರೀ ಜಮೀನಿನಲ್ಲಿ ಹಾಗೆ ಬೆಳೆಯಬೇಕು, ಹೀಗೆ ಬೆಳೆಯಬೇಕು ಎಂದು ಹೇಳುತ್ತಾನೆ. ಹಾರ್ಟಿಕಲ್‌ಚರಲ್ ಇಲಾಖೆಯ ಮತ್ತೊಬ್ಬ ಮನುಷ್ಯ ಅದೇ ಹಳ್ಳಿಗೆ ಹೋಗಿ ಅಡಿಕೆ ತೋಟದಲ್ಲಿ ಹಾಗೆ ಬೆಳೆಯಬೇಕು, ಹೀಗೆ ಬೆಳೆಯಬೇಕು, ಹಣ್ಣು ತರಕಾರಿಗಳನ್ನು ಹೀಗೆ ಬೆಳೆಯಬೇಕು ಎಂದು ಹೇಳುತ್ತಾನೆ. ಇವರು ಏತಕ್ಕೆ ಹೀಗೆ ಮಾಡು ತ್ತಾರೆಯೋ ನನಗೆ ಅರ್ಥವಾಗುವುದಿಲ್ಲ. ಹಾರ್ಟಿಕಲ್‌ಚರಲ್ ಇಲಾಖೆಯವರು ಮತ್ತು ಅಗ್ರಿಕಲ್ ಚರಲ್ ಇಲಾಖೆಯವರು ಒಂದೇ ತರಹ ವಿದ್ಯಾಭ್ಯಾಸವನ್ನು ಪಡೆದಿರುವವರಾಗಿದ್ದಾರೆ. ಎರಡನ್ನೂ ಒಬ್ಬರೇ ಹೇಳತಕ್ಕಂಥ ಶಕ್ತಿ ಅವಕಾಶ ಇರುವಾಗ ಅಂಥಾ ಕೆಲಸಕ್ಕೆ ಇಬ್ಬರನ್ನು ಹಾಕುವುದು ಸರಿಯಲ್ಲ. ಅದರಿಂದ ವಿಪರೀತ ಖರ್ಚು ಬರುತ್ತದೆ ಒಬ್ಬನು ಮಾಡುವ ಕೆಲಸಕ್ಕೆ ಇನ್ನೊಬ್ಬ ಬಂದರೆ ಅವನಿಗೆ ಕೆಲಸ ಕಡಿಮೆಯಾಗಿ ಸೋಮಾರಿತನ ಬರುತ್ತದೆ. ಇದರಿಂದ ಹೆಚ್ಚು ಖರ್ಚಿಗೆ ಮಾರ್ಗವಾಗಿ

ಅನುಕೂಲಗಳು ಸಾಕಷ್ಟು ಕಡಿಮೆಯಾಗುತ್ತವೆ. ಇದನ್ನೆಲ್ಲಾ ಪುನರ್‌ವಿಮರ್ಶೆ ಮಾಡಬೇಕು. ಆಡಳಿತವನ್ನು ಸುಧಾರಣೆ ಮಾಡಬೇಕು. ಅಧಿಕಾರವರ್ಗದವರನ್ನು ಹೆಚ್ಚು ನೇಮಕ ಮಾಡುವುದನ್ನು ಕಡಿಮೆಮಾಡಿ, ಈಗ ಇರತಕ್ಕಂಥವರಿಗೆ ಸಂಬಳವನ್ನು ಜಾಸ್ತಿ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಈಗ ಇರತಕ್ಕ ಅಧಿಕಾರ ವರ್ಗದವರಿಗೆ ಸಂಬಳ ಜಾಸ್ತಿ ಕೊಟ್ಟು ಅವರಿಂದ ಜಾಸ್ತಿ ಕೆಲಸ ವನ್ನ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಸಾಧ್ಯವಾದಮಟ್ಟಿಗೆ ಇಲಾಖೆಗಳನ್ನ ಕಡಿಮೆ ಮಾಡತಕ್ಕದ್ದು ಒಳ್ಳೆಯ ಮಾರ್ಗ ಎಂದು ನಾನು ತಿಳಿದಿದ್ದೇನೆ. ಇದರಲ್ಲಿ ಈಗಾಗಲೇ ಅನೇಕ ವಿಷಯಗಳನ್ನು ನಮ್ಮ ಸ್ನೇಹಿತರು ಹೇಳಿದ್ದಾರೆ.

ಇನ್ನೊಂದು ವಿಷಯ. ಈಗ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಲ್ಲಿ ಲ್ಯಾಂಡ್ ವ್ಯಾಲ್ಯುಯೇಷನ್ ಆಫೀಸರುಗಳೆಂದು ನೇಮಕ ಮಾಡಿಕೊಂಡಿದ್ದಾರೆ. ಇಬ್ಬರು ಲೋಕಲ್ ಡೈರೆಕ್ಟರನ್ನು ಆ ಕೆಲಸಕ್ಕೆ ಸೊಸೈಟಿಯವರು ಹಾಕಿ ಅವರು ವ್ಯಾಲ್ಯುಯೇಷನ್ ಮಾಡಿಕೊಂಡು ಬರತಕ್ಕ ಪದ್ಧತಿ ಇತ್ತು. ಅವರಿಗೆ ಅದಕ್ಕಾಗಿ ಸ್ವಲ್ಪ ಹೆಚ್ಚು ಕಡಿಮೆ 5 ರೂಪಾಯಿಗಳನ್ನು ಕೊಡತಕ್ಕ ಒಂದು ಪದ್ಧತಿ ಇತ್ತು.

Sri S. SIVAPPA.—Sir, I rise to a point of order. ಸಭಾಪತಿಯವರೇ, ನಾವು ಈಗ ತಾನೆ ತಮಗೆ ಒಂದು ಪತ್ರವನ್ನು ಬರೆದು ಕಳುಹಿಸಿದ್ದೇವೆ. ಈ ಶಾಸನ ಸಭಾಭವನದ ಸುತ್ತಮುತ್ತಲೂ ಮತ್ತು ನಮ್ಮ ವಸತಿ ಗೃಹಗಳ ಸುತ್ತಮುತ್ತಲೂ ಇರುವ ಪ್ರದೇಶವನ್ನು ಪೋಲೀಸಿನವರು ಆಕ್ರಮಣ ಮಾಡಿದ್ದಾರೆ. ಈಗ ನಾವು ಒಂದು ಭಯಗ್ರಸ್ತವಾದ ವಾತಾವರಣ ದಲ್ಲಿರುವುದರಿಂದ ನಾವು ಪ್ರಶಾಂತ ವಾತಾವರಣದಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಿಲ್ಲ, ಪೋಲೀಸರ ಕಾವಲನ್ನು ತೆಗೆದು ನಮಗೆ ಓಡಾಡಲೂ, ಮಾತನಾಡಲೂ ಸರಿಯಾದ ವಾತಾವರಣ ನಿರ್ಮಾಣ ವಾಗುವವರೆಗೆ ನಾವು ಈ ಸಭೆಯ ಕಾರ್ಯಕಲಾಪದಲ್ಲಿ ಭಾಗವಹಿಸುವುದಿಲ್ಲ. ನಾವು ಸಭಾತ್ಯಾಗ ಮಾಡುತ್ತೇವೆ.

(Sri S. Sivappa and the members of the oppo ition left the House)

ಶ್ರೀ ಕೆ. ಎನ್. ವೀರಪ್ಪಗೌಡ.—ಸ್ವಾಮಿ, ನಾನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ವಿಷಯದಲ್ಲಿ ಹೇಳುತ್ತಿದ್ದೆ. ಲ್ಯಾಂಡ್ ವ್ಯಾಲ್ಯುಯೇಷನ್ ಕಟ್ಟತಕ್ಕಂಥ ವಿಷಯದಲ್ಲಿ ಲೋಕಲ್ ಡೈರೆಕ್ಟರುಗಳಿಗೆ ಅವಕಾಶವನ್ನು ಕೊಟ್ಟಿದ್ದಾರೆ, ಈ ವಿಷಯದಲ್ಲಿ ಡೈರೆಕ್ಟರುಗಳು ಕೇವಲ 5 ರೂಪಾಯಿಗಳನ್ನು ತೆಗೆದುಕೊಂಡು ಅಥವಾ ಇಲ್ಲದೆ ಅವರ ಒಂದು ವ್ಯಾಲ್ಯುಯೇಷನ್ ಕೊಡ ಬಹುದು. ಆದರೆ ಅನೇಕ ಡೈರೆಕ್ಟರುಗಳು ಈ 5 ರೂಪಾಯಿಗಳನ್ನು ತೆಗೆದುಕೊಳ್ಳುತ್ತಾ ಬಂದಿಲ್ಲ. ಸಾಮಾನ್ಯವಾಗಿ ಡೈರೆಕ್ಟರುಗಳು ಅದೇ ಊರಿನಲ್ಲಿ ಇರುವುದರಿಂದ ನಾಳೆ ರೈತರಿಗೆ ಸಾಲವನ್ನು ಮಂಜೂರು ಮಾಡಿದಾಗ ಫಲವತ್ತಾಗಿಲ್ಲದ ಕಡಮೆ ಜಮೀನಿಗೆ 10 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇನ್ನೊಬ್ಬನಿಗೆ ಹೆಚ್ಚು ಜಮೀನು ಇರತಕ್ಕವನಿಗೆ 5 ಸಾವಿರ ರೂಪಾಯಿಗಳನ್ನು ಕೊಟ್ಟಿ ದ್ದಾರೆ, ಹಾಗೆ ಮಾಡಿದ್ದಾರೆ, ಹೀಗೆ ಮಾಡಿದ್ದಾರೆ ಎಂದು ಹೇಳುವ ಒಂದು ಪರಿಸ್ಥಿತಿ ಇತ್ತು. ಈಗ ಏನಾಗಿದೆ ಎಂದರೆ, ಡೈರೆಕ್ಟರುಗಳು ವ್ಯಾಲ್ಯುಯೇಷನ್ ಕೊಡಬೇಕಾಗಿಲ್ಲ. ಆಫೀಸರುಗಳು ತಮಗೆ ಇಷ್ಟ ಬಂದ ರೀತಿಯಲ್ಲಿ ವ್ಯಾಲ್ಯುಯೇಶನ್ ಮಾಡುವುದಕ್ಕೆ ಹೋಗಿ ಅದರಿಂದ ಹೆಚ್ಚು ಖರ್ಚು ವೆಚ್ಚಗಳು ಬರುತ್ತದೆ. ಹೀಗಾಗಿ ಏನೇನೋ ಅನಾನುಕೂಲಗಳು ಆಗುತ್ತಿವೆ. ನಾನು ಲ್ಯಾಂಡ್ ಡೆವಲಪ್‌ಮೆಂಟ್ ಡೈರೆಕ್ಟರಾಗಿಯೂ ಕೆಲಸ ಮಾಡಿದ್ದೇನೆ. ಈಗ ಮಾಡಿರತಕ್ಕ ಒಂದು ಪದ್ಧತಿ ಯಿಂದ ನನಗೆ ಯಾವ ಬದಲಾವಣೆಯೂ ಕಂಡು ಬರಲಿಲ್ಲ. ಇದರಿಂದ ಅಧಿಕಾರಿಗಳ ಟಿ.ಎ., ಡಿ.ಎ. ಇತ್ಯಾದಿಗಳಿಗೆ ಅನಾವಶ್ಯಕವಾಗಿ ಹಣ ಖರ್ಚಾಗುತ್ತದೆ.

ಇನ್ನೊಂದು ವಿಷಯ. ಇವೊತ್ತು ಸೆಂಟ್ರಲ್ ಕೋ-ಆಪರೇಟೀವ್ ಬ್ಯಾಂಕ್ ಮತ್ತು ಡಿಸ್ಟ್ರಿಕ್ಟ್ ರೂರಲ್ ಇಂಡಸ್ಟ್ರಿಯಲ್ ಬ್ಯಾಂಕ್ ಎಂದು ಎರಡು ಬ್ಯಾಂಕುಗಳನ್ನು ಮಾಡಿದ್ದಾರೆ. ಈ ಎರಡು ಬ್ಯಾಂಕುಗಳಲ್ಲಿಯೂ ಇಂಡಸ್ಟ್ರಿಯಲ್ ಪರ್ಪಸ್‌ಗೋಸ್ಕರ ಹಣವನ್ನು ಕೊಡುತ್ತಾರೆ. ಆದ್ದರಿಂದ ಈ ಕೆಲಸಕ್ಕಾಗಿ ಎರಡು ಬ್ಯಾಂಕುಗಳು ಇರುವುದರಿಂದ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತವೆ. ನಾನು ಡಿಸ್ಟ್ರಿಕ್ಟ್ ಕೋ-ಆಪರೇಟೀವ್ ಬ್ಯಾಂಕಿನ ಡೈರೆಕ್ಟರಾಗಿಯೂ ಕೆಲಸ ಮಾಡಿ ದ್ದೇನೆ, ಸೆಂಟ್ರಲ್ ಬ್ಯಾಂಕುಗಳ ಡೈರೆಕ್ಟರಾಗಿಯೂ ಕೆಲಸ ಮಾಡಿದ್ದೇನೆ. ಇವೊತ್ತು ಚಿಕ್ಕಮಗ ಳೂರಿನಲ್ಲಿ ರೂರಲ್ ಇಂಡಸ್ಟ್ರಿಯಲ್ ಬ್ಯಾಂಕಿನಿಂದ ಬತ್ತದಮೇಲೆ ಬಹಳ ಹಣವನ್ನು ಕೊಟ್ಟಿದ್ದಾರೆ. ಅದನ್ನು ಯಾವ ರೀತಿಯಲ್ಲಿ ಕೊಟ್ಟಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ನಾನು ಡೈರೆಕ್ಟರನಾಗಿ ಅದನ್ನು ಕೇಳುವುದಕ್ಕೆ ಹೋದರೆ ಅಲ್ಲಿ ಅವರು ಮಾಡತಕ್ಕ ವಾದ, ಅವರು ಹೇಳತಕ್ಕ ನೀತಿ ಎಲ್ಲಾ ತುಂಬಾ ಆಶ್ಚರ್ಯವಾಗುತ್ತದೆ. ಆರು ತಿಂಗಳಾದರೂ, ಒಂದು ವರ್ಷವಾದರೂ ಹಣ ಪಡೆಯುವುದಿಲ್ಲ.

(ಶ್ರೀ ಕೆ. ಎನ್. ವೀರಪ್ಪಗೌಡ)

10-20 ಸಾವಿರ ಓವರ್‌ಡ್ರಾಫ್ಟ್ ಆಗಿ ಹಣವನ್ನು ಕೊಡುತ್ತಿದ್ದಾರೆ, ಹೀಗೆ ಅನೇಕ ರೀತಿಯಲ್ಲಿ ಸರ್ಕಾರದವರು ಏನು ಒಂದು ಒಳ್ಳೆಯ ಉದ್ದೇಶ ಇಟ್ಟು ರೈತರಿಗೆ ಎಷ್ಟು ಮಟ್ಟಿಗೆ ಅನುಕೂಲ ಮಾಡಬೇಕೆಂದಿದ್ದಾರೋ, ಅದಕ್ಕೆ ಪ್ರತಿಯಾಗಿ ನಡೆದು ಎಲ್ಲಾ ತೊಂದರೆಯಾಗುತ್ತಿದೆ. ಇದನ್ನೆಲ್ಲ ವಿಮರ್ಶೆ ಮಾಡಿ, ಏನೊಂದು ಕೋ-ಆಪರೇಟೀವ್ ಸೆಂಟ್ರಲ್ ಬ್ಯಾಂಕ್ ಇದೆ, ಅದರ ಮೂಲಕ ಪ್ರತಿಯೊಂದೂ ಕೊಡುವುದಕ್ಕೆ ಪ್ರಯತ್ನ ಮಾಡಿದರೆ, ಅದರಿಂದ ತೆಗೆದುಕೊಂಡು ಹೋಗತಕ್ಕಂಥವನಿಗೆ, ವಸೂಲು ಮಾಡತಕ್ಕಂಥವನಿಗೆ, ಎಲ್ಲರಿಗೂ ಅನುಕೂಲವಾಗುತ್ತದೆ. ಕೆಲವು ಜನರು ಅಲ್ಲಿಯೂ ತೆಗೆದುಕೊಂಡಿರುತ್ತಾರೆ ಮತ್ತು ಇಲ್ಲಿಯೂ ತೆಗೆದುಕೊಂಡು ಬರುತ್ತಿದ್ದಾರೆ. ಇನ್ನು ಕೆಲವರು ಇಲ್ಲಿ ತೆಗೆದುಕೊಂಡು ಅಲ್ಲಿ ತೀರಿಸುವದು, ಅಲ್ಲಿ ತೆಗೆದುಕೊಂಡು ಇಲ್ಲಿ ತೀರಿಸುವದು, ಏನೆಂಬುದನ್ನು ಕಂಡುಹಿಡಿಯುವುದಕ್ಕಾಗುವುದಿಲ್ಲ. ಒಂದೇ ಬ್ಯಾಂಕ್ ಆದರೆ ನಿಜವಾಗಿಯೂ ಅದರಿಂದ ಕಸಬುಮಾಡಿ ಉತ್ಪತ್ತಿ ಮಾಡಬೇಕೆಂಬ ಮನೋಭಾವನೆ ಬರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಒಂದು ಕಡೆ ಇರುವುದರಿಂದ, ಇನ್ನೊಂದು ಕಡೆ, ಡಿಸ್ಟ್ರಿಕ್ಟ್ ಕೊ-ಆಪರೇಟಿವ್ ಬ್ಯಾಂಕ್ ಇದ್ದರೆ ಸಾಕು. ಅವರಲ್ಲೇ ಈ ವಿಭಾಗವನ್ನು ಪ್ರಾರಂಭಿಸಿದರೆ, ರೂರಲ್ ಇಂಡಸ್ಟ್ರಿಯಲ್ ಬ್ಯಾಂಕ್ ಆಗತ್ಯವಿಲ್ಲವೆಂದು ಹೇಳುತ್ತೇನೆ. ಇದು ನಾನು ನನ್ನ ಅನುಭವದಿಂದ ಮಾತನಾಡುತ್ತಿದ್ದೇನೆ. ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಯೋಗ್ಯ ಕ್ರಮತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಬಾವಿ ವಿಚಾರದಲ್ಲಿ ನನ್ನ ಸ್ನೇಹಿತರನೇಕರು ಮಾತನಾಡುತ್ತಾ, ತಾಲ್ಲೂಕ್ ಬೋರ್ಡ್ ಡೆವಲಪ್‌ಮೆಂಟ್ ಮುಖಾಂತರ ಕೊಡತಕ್ಕದ್ದು ಸೂಕ್ತವೆಂದರು. ಈಗಿನ ಕ್ರಮದ ಪ್ರಕಾರ, ರೈತನು ಕಾಯತಕ್ಕದ್ದು, ಆದಕ್ಕೋಸ್ಕರ ಅಲ್ಲಿ ಇಲ್ಲಿ ಓಡಾಡಿ, ಬೆಂಗಳೂರಿಗೂ ಬರಬೇಕಾದದ್ದು ಎಲ್ಲಾ ಇರುವುದರಿಂದ ಅವನು ಬಹಳ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಇದನ್ನೆಲ್ಲ ತಾವು ವಿಮರ್ಶೆ ಮಾಡಿದರೆ ಮಾತ್ರ ಗೊತ್ತಾಗುತ್ತದೆ. ತಾಲ್ಲೋಕು ಬೋರ್ಡ್‌ಗಳಿಗೆ ಕೊಡುವದು ಸೂಕ್ತ.

ಇನ್ನು ನೀರಾವರಿ ವಿಚಾರದಲ್ಲಿ ತಾವು ಅನೇಕ ಕಾರ್ಯಕ್ರಮಗಳನ್ನು ಕೈಕೊಂಡಿದ್ದೀರಿ. ಆದರೆ ಸಣ್ಣ ನೀರಾವರಿಗಾಗಿ ಸರಿಯಾದ ಆದ್ಯತೆಯನ್ನು ಕೊಡದೆ, ದೇಶದಲ್ಲಿ ಸಾಕಷ್ಟು ತೊಂದರೆಯಾಗಿದೆ. ಆದರೆ ಈಚೆಗೆ ಸಣ್ಣ ನೀರಾವರಿಗಳಿಗೆ ಹೆಚ್ಚಿನ ಅವಕಾಶ ನೀಡಿದ್ದಾರೆ. ಅಣೆಕಟ್ಟುಗಳನ್ನು ಕಟ್ಟುವುದರಿಂದ ಮಲೆನಾಡಿನಲ್ಲಿ ಏನು ಪರಿಸ್ಥಿತಿ ಒದಗುತ್ತದೆಂಬುದನ್ನು ಮನಗಾಣಬೇಕು. ಭದ್ರಾ ಪ್ರಾಜೆಕ್ಟನ್ನು ಕಟ್ಟಿದ ಕಾಲದಲ್ಲಿ ಎಷ್ಟು ಮಟ್ಟಿಗೆ ನೀರು ಬಂದು ಅಲ್ಲಿನ ಪ್ರದೇಶ ಮುಳುಗಡೆಯಾಗುವುದಕ್ಕೆ ಅವಕಾಶವಾಯಿತು. ಇದಕ್ಕೆ ಕಾರಣವಾದರೂ ಏನೆಂಬುದನ್ನು ಯೋಚನೆ ಮಾಡಬೇಕು. ಅನುಭವಿಗಳು ಕಾಡು ಮುಳುಗಿಹೋಗಿದ್ದ ಕಾರಣ ಮಳೆ ಇಲ್ಲವೆನ್ನುತ್ತಾರೆ. ಅವರ ವಾದಕ್ಕೆ ಸರಿಯಾಗಿ ಇದು ಅನುಕೂಲವಾಗಿರುತ್ತದೆ. ಭದ್ರಾ ಅಣೆಕಟ್ಟು ಕಟ್ಟಿದ ಮಾರನೆಯ ವರ್ಷದಿಂದ ಲೆಕ್ಕ ತೆಗೆದುಕೊಂಡರೆ ನಂತರ ಒಂದು ವರ್ಷವೂ ಅದು ಭರ್ತಿಯಾಗಿಲ್ಲ. 1957 ರಿಂದ 1967 ಕ್ಕೆ ಸಾಧಾರಣ ಒಂದು ನೂರು ಇಂಚು ಮಳೆ ಕಡಿಮೆಯಾಗಿದೆ. ಮೊನ್ನೆ ಕೂಡ ಇದನ್ನು ಚರ್ಚಿಸಿದೆವು. ಇದಕ್ಕೆ ಕಾರಣವೇನು ಎಂಬುದನ್ನು ತಾಂತ್ರಿಕವಾಗಿ ಪರಿಶೀಲಿಸಬೇಕು. ಒಂದು ಕಡೆ ಫಾರೆಸ್ಟು ಇಲಾಖೆಯವರು ದೊಡ್ಡ ದೊಡ್ಡ ಕಾಡುಗಳನ್ನು ಕಡಿದು ಹಾಕಿ, ಅಲ್ಲಿ ನೀಲಗಿರಿ ಹಾಗೂ ಇನ್ನಿತರ ಗಿಡಗಳನ್ನು ಬೆಳೆಸುತ್ತಿದ್ದಾರೆ. ಇವರಿಗೆ ಏನಾದರೂ ಈ ರೀತಿ ಬೆಳೆಸಬೇಕಾಗಿದ್ದರೆ, ಅಲ್ಲಿ ಬೇಕಾದಷ್ಟು ಬಯಲು ಪ್ರದೇಶಗಳಿವೆ. ಬೇಕಾದರೆ ಅದನ್ನು ಪ್ರಯತ್ನ ಮಾಡಲಿ. ನೂರಾರು ವರ್ಷಗಳಿಂದ ತಾನಾಗಿ ಬೆಳೆದಂತಹ ಕಾಡುಗಳನ್ನು ಕಡಿದು, ಅಲ್ಲಿ ಬೆಳೆಯಲು 10-12 ವರ್ಷ ಬೇಕಾಗಿರುವ ನೀಲಗಿರಿ ಗಿಡಗಳನ್ನು ಬೆಳೆಸಿದರೆ ಮಳೆ ಬರುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಫಾರೆಸ್ಟುಗಳನ್ನು ಕಡಿಯುತ್ತಾ ಹೋದರೆ ಮಲೆನಾಡಿನಲ್ಲಿ ಎಷ್ಟುಮಟ್ಟಿಗೆ ಮಳೆಯಾಗುತ್ತದೆಂಬುದನ್ನು ಸಂಪೂರ್ಣವಾಗಿ ವಿಮರ್ಶಿಸಬೇಕು. ಇದೇ ರೀತಿ ಒಂದು ಅಣೆಕಟ್ಟು ಪೂರ್ತಿಯಾಗಿ ನೀರು ತುಂಬದೆ ಇರುವಾಗ ಇನ್ನೊಂದು ಕಡೆ ಅಣೆಕಟ್ಟು ಕಟ್ಟುವುದಕ್ಕೆ ಸರ್ವೆ ಮಾಡುತ್ತಿದ್ದಾರೆ. ತುಂಗಾ 18 ಅಡಿ ಏರಿಸುವುದು ಮಾಲತಿ ನದಿಗೆ ತೀರ್ಥಹಳ್ಳಿ ಹತ್ತಿರ ಕಟ್ಟುವುದು ಇದರಿಂದ ಮಳೆಯೇ ಇಲ್ಲದೆ ನೀರಿಲ್ಲದ ಅಣೆಕಟ್ಟುಗಳಾಗಬಹುದು ಇದನ್ನೆಲ್ಲಾ ನೋಡಿದರೆ ಜನರಿಗೆ ಆಶ್ಚರ್ಯವಾಗುತ್ತದೆ. ಆದ್ದರಿಂದ ಫಾರೆಸ್ಟು ಇಲಾಖೆಯವರು, ಎಲ್ಲಿ ಮೈದಾನ ಪ್ರದೇಶವಿದೆಯೋ ಅಲ್ಲಿ ಕಾಡು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕಲ್ಲದೆ, ಈಗ ಇದ್ದಂತಹ ಕಾಡುಗಳನ್ನು ಕಡಿದು ಹಾಕುವುದು ಬಹಳ ಅನ್ಯಾಯವೆಂದು ಹೇಳುತ್ತೇನೆ. ಆದ್ದರಿಂದ ತಾವು ಈ ವಿಷಯವನ್ನು ವಿಮರ್ಶೆ ಮಾಡಬೇಕೆಂದು ತಮ್ಮ ಗಮನಕ್ಕೆ ಇದನ್ನು ತರಬಯಸುತ್ತೇನೆ.

ಇನ್ನು ಪೋಲೀಸು ಇಲಾಖೆಯ ವಿಷಯ. ಈ ವಿಚಾರದಲ್ಲಿ ಏನೂ ಮಾತನಾಡುವುದಕ್ಕೆ ಇಷ್ಟ ಪಡುವುದಿಲ್ಲ. ಇಲ್ಲಿ ಹೇಳುತ್ತಿದ್ದಾರೆ, ಪೋಲೀಸಿನವರು ವಿಪರೀತವಾಗಿ ಎಲ್ಲಾ ಕಡೆಯೂ ಕಾಯ್ದು ಕೊಂಡಿದ್ದಾರೆಂದು. ಆದ್ದರಿಂದ, ಅವರು ಜನರಿಗೂ ಯಾರಿಗೂ ಏನೂ ತೊಂದರೆಯಾಗಲಿಲ್ಲ. ಅವರು ಜನರಿಗೆ ನೆಮ್ಮದಿಯನ್ನು ಉಂಟುಮಾಡತಕ್ಕ ರೀತಿಯಲ್ಲಿ ಇದ್ದಾರೆಯೇ ವಿನಾ ತೊಂದರೆ ಮಾಡುವುದು ಕಾಣುವುದಿಲ್ಲ. ಆದರೆ ನಮ್ಮ ಕಡೆ, ಅವರ ತೊಂದರೆ ನಮ್ಮ ಕಣ್ಣಿಗೆ ಮಾತ್ರ ಕಾಣುವುದಿಲ್ಲ, ಆದರೆ ತೊಂದರೆ ಮಾತ್ರ ತಪ್ಪುವುದಿಲ್ಲ. ಅಲ್ಲಿ ಯಾರಾದರೂ ಒಬ್ಬರನ್ನು ಕೇಳಿದರೆ, ''ಏನಪ್ಪಾ ಸೇಂದಿ ಅಂಗಡಿ ನಡೆಸುತ್ತಿದ್ದೀಯಾ ಎಂದು ಕೇಳಿದರೆ, '' ಇಲ್ಲ ಸ್ವಾಮಿ, ಲೈಸೆನ್ಸ್ ಪಡಕೊಂಡು ನಡೆಸುತ್ತಿದ್ದೇನೆ'' ಎಂದು ಹೇಳುವಂತಾಗಿದೆ ಪಾಪ ಅವನಿಗೆ ಏನು ಗೊತ್ತು, ಅವನು ಎಲ್ಲಾ ಪೋಲೀಸಿನವರ ಕೈಯಲ್ಲಿದೆ ಎಂದು ತಿಳಿದುಕೊಂಡಿರಬೇಕು. ಇದೇ ರೀತಿ ಅನೇಕ ಕಡೆಗಳಲ್ಲಿ ಪೋಲೀಸಿನವರ ಸಹಕಾರದಿಂದಲೇ ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿದ್ದಾರೆ. ಆ ವಿಷಯದಲ್ಲಿ ಯಾರಾದರೂ ಕೈಹಾಕುವುದಕ್ಕೆ ಹೋದರೆ, ರಸ್ತೆಯಲ್ಲಿ ಎಲ್ಲಿಯಾದರೂ ಅಡ್ಡ ನಿಂತು ಬಿಟ್ಟರೆ ಏನು ಮಾಡುವುದು ? ಎಂಬ ಗಾಬರಿ ನಮ್ಮಂತವರಿಗೆ. ಈ ವಿಷಯದ ಬಗ್ಗೆ ಮಾನ್ಯ ಗೃಹ ಮಂತ್ರಿಯವರಿಗೆ ಅನೇಕ ಸಾರಿ ಹೇಳಿದ್ದೆ. ನೀವು ಪ್ರವಾಸ ಮಾಡಿ ಅನಿರೀಕ್ಷಿತವಾಗಿ ಭೇಟಿ ಕೊಡಬೇಕೆಂದು. ಅದರಿಂದ ಅವರು ಅನೇಕ ಅರ್ಜಿಗಳನ್ನು ಎಷ್ಟು ದಿವಸ ಇಟ್ಟುಕೊಂಡಿದ್ದಾರೆಂಬುದನ್ನೂ ನೋಡಿದ ಹಾಗಾಗುತ್ತದೆ ಮತ್ತು ಅದರಿಂದ ಆಡಳಿತ ಉತ್ತಮವಾಗುತ್ತದೆಂದು ಹೇಳಿದೆ. ಅವರು ತಮಾಷೆಯಾಗಿ ಹೇಳಿದರು, ಇಲ್ಲಿಯ ಕೆಲಸ ಯಾರು ಮಾಡುವವರು ? ಎಂದು. ಆದ್ದರಿಂದ ಈ ಒಂದು ಪಾನನಿರೋಧ ವಿಧಿಯೇ ಇದನ್ನು ಹಂತ ಹಂತವಾಗಿ ತೆಗೆಯದೆ, ಸಂಪೂರ್ಣವಾಗಿ ತೆಗೆದುಹಾಕುವುದು ಒಳ್ಳೆಯದು ಎಂದು ಹೇಳುತ್ತೇನೆ. ನಮಗೆ ಬರತಕ್ಕ ಸಂಪಾದನೆಯಿಂದ ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಮಾಡೋಣ. ಈಗ ಮನೆ ಮನೆಗಳಲ್ಲಿ ಮಾಡಿಕೊಂಡು ಮನೆಯ ಮಕ್ಕಳೆಲ್ಲಾ ಕುಡಿಯುವುದಕ್ಕೆ ಪ್ರಾರಂಭವಾಗಿದೆ. ಆದ್ದರಿಂದ ಯೋಚನೆ ಮಾಡದೆ ತೆಗೆದು ಹಾಕಿಬಿಟ್ಟರೆ ಒಳ್ಳೆಯದು ಎಂದು ನನಗನ್ನಿಸುತ್ತದೆ.

ಇನ್ನು ಮಲೆನಾಡಿನಲ್ಲಿ ರಸ್ತೆಗಳನ್ನು ಮಾಡುವುದಕ್ಕಾಗಲೀ, ಸೇತುವೆಗಳನ್ನು ಕಟ್ಟುವುದಕ್ಕಾಗಲಿ, ನಮ್ಮ ಹತ್ತಿರ ಖರ್ಚು ಮಾಡುವುದಕ್ಕೆ ದುಡ್ಡು ಇಲ್ಲವೆಂದು ಹೇಳುತ್ತಿದ್ದಾರೆ. ನಾನಾದರೂ ಹೇಳುತ್ತೇನೆ—ಈ ಮಲೆನಾಡಿನಲ್ಲಿ ರಸ್ತೆಗಳನ್ನು ಸೇತುವೆಗಳನ್ನು ನಿರ್ಮಾಣ ಮಾಡಿದರೆ, ಅಲ್ಲಿ ಜನರಿಗೆ ಸೌಕರ್ಯಗಳು ಜಾಸ್ತಿಯಾಗುತ್ತದೆ ಮತ್ತು ಅಲ್ಲಿ ರೈತರು ಹೋಗಿ ನೆಲಸಲು, ಓಡಾಡಲು ಅನುಕೂಲವಾಗುತ್ತದೆ. ಇದರಿಂದ ಹೆಚ್ಚಿನ ಉತ್ಪತ್ತಿಗೂ ಅವಕಾಶ ಮಾಡಿದಂತಾಗುತ್ತದೆ. ಅದೇ ರೀತಿ ಫಾರೆಸ್ಟು ಉತ್ಪತ್ತಿಯನ್ನು ಉಪಯೋಗಿಸಿಕೊಳ್ಳುವ ಅವಕಾಶವಿದೆ. ಈ ದೃಷ್ಟಿಯಲ್ಲಿ ತಾವು ಏನಾದರೂ ಒಂದು ಹೊಸ ನೀತಿಯನ್ನು, ಅಭಿವೃದ್ಧಿ ಮಾಡತಕ್ಕ ರೀತಿಯಲ್ಲಿ ಮಲೆನಾಡು ಅಭಿವೃದ್ಧಿಯ ಕಮಿಟಿ ರಿಪೋರ್ಟನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದು ಅತಿ ಮುಖ್ಯವಾಗಿದೆ ಎಂದು ಹೇಳಲು ಅಪೇಕ್ಷೆಪಡುತ್ತೇನೆ.

ತಮಗೆ ಮಲೆನಾಡಿನ ಅನುಭವ ಚೆನ್ನಾಗಿ ಇದೆ. ನಮ್ಮ ನಾಯಕರಾದ ಶ್ರೀ ನಿಜಲಿಂಗಪ್ಪನವರು ಮಲೆನಾಡಿನ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿದ್ದರು. ಶಿವಮೊಗ್ಗಾದಲ್ಲಿ ಶ್ರೀ ಬದರಿ ನಾರಾಯಣ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದರು. ಅವರಿಂದ ಕೆಲವು ಸಲಹೆಗಳನ್ನು ಪಡೆದಿದ್ದಾರೆ. ಆದರೆ ಆ ಸಲಹೆಗಳು ಇನ್ನೂ ಹೊರಕ್ಕೆ ಬಂದಿಲ್ಲ. ಮಲೆನಾಡಿಗೆ ಹೆಚ್ಚಿನ ಅನುಕೂಲಗಳನ್ನು ಮಾಡಿಕೊಡಬೇಕು. ತಾಲ್ಲೂಕು ಬೋರ್ಡಿನವರು ರಸ್ತೆಗಳನ್ನು ಮಾಡಿಸುವುದಕ್ಕಾಗುವುದಿಲ್ಲ. ಏಕೆಂದರೆ, ಅವರಿಗೆ ಆರ್ಥಿಕ ಅನುಕೂಲವಿರುವುದಿಲ್ಲ. ಅವರಿಗೆ ಸರಿಯಾಗಿ ಆರ್ಥಿಕ ಅನುಕೂಲ ಮಾಡಿಕೊಡಬೇಕು. ಮೋರಿ ಕಟ್ಟಿಸುವುದಕ್ಕೆ ಅವರಿಗೆ ಹಣ ಸಹಾಯ ಮಾಡಬೇಕು. ತಮಗೆ ತಿಳಿದಂತೆ ಮಿರ್ಜಾ ಘಾಟ್‌ನಲ್ಲಿ ರಸ್ತೆ ಮಾಡಿಸಿದರೆ ಅಲ್ಲಿ ಒಂದು ಸಾವಿರ ಜನಸಂಖ್ಯೆ 30 ಮೈಲಿ ಪ್ರದೇಶದಲ್ಲಿ ಇದೆ. ಅಲ್ಲಿ ರಸ್ತೆಗಳನ್ನು ಸರಿಯಾಗಿ ಮಾಡಿಸಿದರೆ ಹೆಚ್ಚು ಹೆಚ್ಚು ಜನರು ವಾಸ ಮಾಡುತ್ತಾರೆ. ಅಲ್ಲಿಯ ಜನರು ಹೆಚ್ಚು ಆಹಾರ ಬೆಳೆಯುವುದಕ್ಕೆ ತಕ್ಕ ಅನುಕೂಲವನ್ನು ಮಾಡಿಕೊಡಬೇಕು. ಎಮರ್‌ಜೆನ್ಸಿ ಬಂತು ಎಂದು ಹೇಳಿ ಎಲ್ಲಾ ಕೆಲಸಗಳನ್ನೂ ನಿಲ್ಲಿಸಬಾರದು. ಯಾವ ಭಾಗದಲ್ಲಿ ಅನುಕೂಲ ಮಾಡಿಕೊಟ್ಟರೆ ಅದಕ್ಕೆ ತಕ್ಕ ಉತ್ಪತ್ತಿ ಬರುತ್ತದೋ, ಅಲ್ಲಿ ಹೆಚ್ಚು ಗಮನ ಕೊಟ್ಟು ಅನುಕೂಲ ಮಾಡಿಕೊಡಬೇಕು. ಈ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಮಲೆನಾಡಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ಜನಸಂಖ್ಯೆಯ ಆಧಾರದ ಮೇಲೆ 6 ಪರ್‌ಸೆಂಟ್ ಗ್ರಾಂಟ್ ಕೊಡುತ್ತಿದ್ದೀರಿ. ಅದು ಸರಿಯಲ್ಲ. ಜನಸಂಖ್ಯೆ ಕಡಿಮೆಯಿರುವ ಭಾಗಗಳಿಗೆ ಹೆಚ್ಚಿನ ಗ್ರಾಂಟ್ ಕೊಡಬೇಕು. ಅಲ್ಲಿ ಹೆಚ್ಚಿನ ರಸ್ತೆಗಳಾಗಬೇಕು, ಭಾವಿಗಳಾಗಬೇಕು. ಆಗುವ ಕೆಲಸಗಳು ನಿಲ್ಲು

(ಶ್ರೀ ಕೆ. ಎನ್' ವೀರಪ್ಪಗೌಡ)

ವಂತಿಲ್ಲ. ಆ ಭಾಗದಿಂದ ಸರ್ಕಾರಕ್ಕೆ ಕಡಿಮೆ ವರಮಾನ ಬರುತ್ತದೆಂದು ಕಡಿಮೆ ಕೆಲಸ ಮಾಡಿಸ ಬಾರದು. ಇದನ್ನು ತಪ್ಪಿಸಿ, ಮಲೆನಾಡಿಗೆ ಹೆಚ್ಚಿನ ಗ್ರಾಂಟ್ ಕೊಡಬೇಕು ಎಂದು ಹೇಳುತ್ತೇನೆ.

ಇದನ್ನು ಖಾದಿ ಬೋರ್ಡ್ ವಿಚಾರದಲ್ಲಿ ನನ್ನ ಸ್ನೇಹಿತರು ಬಹಳಮಟ್ಟಿಗೆ ಮಾತನಾಡಿದ್ದಾರೆ. ಖಾದಿ ಬೋರ್ಡ್ ಬಗ್ಗೆ ಮಾತನಾಡುತಿರುವ ಸದಸ್ಯರು ಇಲ್ಲಿ ಈಗ ಇದ್ದರೆ ಚೆನ್ನಾಗಿತ್ತು. ಆ ಸದಸ್ಯರು ಅಲ್ಲಿ ಅಧಿಕಾರದಲ್ಲಿ ಇದ್ದಾಗ 130 ಜನ ಅಧಿಕಾರಿಗಳನ್ನು ನೇಮಕ ಮಾಡಿಕೊಂಡರು. ಅಲ್ಲಿಗೆ ಕೇವಲ 30 ಜನ ಅಧಿಕಾರಿಗಳು ಸಾಕಾಗಿತ್ತು. ಈ ರೀತಿ ಅನೇಕ ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದರಿಂದ ಬೋರ್ಡಿಗೆ ಎಷ್ಟು ಲುಕ್ಸಾನು ಆಯಿತು ಎಂದು ಇಲ್ಲಿ ಉತ್ತರ ಹೇಳಿದ್ದರೆ ಚೆನ್ನಾಗಿತ್ತು. ನಾನು ಸಹ ಆ ಬೋರ್ಡಿನಲ್ಲಿ ಮೂರು ವರ್ಷ ಇದ್ದು ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿದ್ದರು. ನಾನು ಅಲ್ಲಿ ಕೆಲಸ ಮಾಡಿದ್ದರಿಂದ ನನಗೆ ಅಲ್ಲಿಯ ಅನೇಕ ವಿಚಾರಗಳು ತಿಳಿದಿವೆ, ಆ ಸದಸ್ಯರು ಅಧಿಕಾರದಿಂದ ಹೋಗುವಾಗ ಅನಾವಶ್ಯಕವಾಗಿ ಓವರ್‌ಏಜಿನ ಕೆಲವು ಜನರನ್ನು ಕೆಲಸಕ್ಕೆ ಸೇರಿಸಿದರು. ಅವರನ್ನು ವಾಪಸ್ ಮನೆಗೆ ಕಳಿಸಬೇಕಾದರೆ ಬಹಳ ಕಷ್ಟವಾಯಿತು. ಒಂದೆರಡು ವರ್ಷಗಳವರೆಗೆ ಅನಾವಶ್ಯಕವಾಗಿ ಅವರಿಗೆ ಸಂಬಳ ಕೊಡಬೇಕಾಯಿತು. ಕೆಲವು ಇನ್ಸ್‌ಟಿಟ್ಯೂಷನ್‌ಗಳು ಚೆನ್ನಾಗಿ ನಡೆಯುತ್ತಿದ್ದರೆ, ಅವು ಚೆನ್ನಾಗಿ ನಡೆಯದಂತೆ ವಿರೋಧಪಕ್ಷದವರು ಏನಾದರೂ ಗಲಾಟೆ ಮಾಡಿ ಕೆಡಿಸುತ್ತಾರೆ. ಕಾಂಗ್ರೆಸ್ ಸರ್ಕಾರವನ್ನು ಬರೀ ಬಾಯಲ್ಲಿ ಬೈಯುವುದಕ್ಕೆ ಬದಲು ತಾವೇ ಕೈಯಲ್ಲಿ ಮಾಡಿ ತೋರಿಸುವುದು ಒಳ್ಳೆಯದು. ಮಾನ್ಯ ಶಿವಪ್ಪನವರು ಕೆಲವು ತಿಂಗಳ ಹಿಂದೆ ಪತ್ರಿಕೆಗಳಿಗೆ ಒಂದು ಹೇಳಿಕೆ ಕೊಟ್ಟಿದ್ದರು, ಏನೆಂದರೆ, ನಮ್ಮ ಉದ್ದೇಶ ಈ ಕಾಂಗ್ರೆಸ್ ಸರ್ಕಾರವನ್ನು ಉರುಳಿಸುವುದು, ಇದೇ ನಮ್ಮ ಗುರಿ ಎಂದು. ಅವರು ಈ ರೀತಿಯ ಹೇಳಿಕೆ ಕೊಡುವ ಬದಲು, ಒಳ್ಳೆಯ ಮಾರ್ಗದಲ್ಲಿ ಸರ್ಕಾರ ಹೋಗುವುದಕ್ಕೆ ಕ್ರಮ ಕೈಕೊಳ್ಳುತ್ತೇವೆಂದು ಹೇಳಿದ್ದರೆ ನನಗೆ ತುಂಬಾ ಸಂತೋಷವಾಗುತ್ತಿತ್ತು. ಖಾದಿ ಬೋರ್ಡಿನ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗಿನ ಸಂದರ್ಭದಲ್ಲಿ ಆ ಬೋರ್ಡ್ ಇರಬೇಕೇ, ಬೇಡವೇ ಎಂಬುದನ್ನು ಸರ್ಕಾರ ವಿಮರ್ಶೆ ಮಾಡಬೇಕು. ಕೆಲವು ಕಡೆ ಹೊಸದಾಗಿ ಸೊಸೈಟಿಗಳು ಸ್ಥಾಪನೆಯಾಗುತ್ತವೆ. ಒಂದು ವರ್ಷದೊಳಗೆ ಅವು ಇಲ್ಲವಾಗಿರುತ್ತವೆ. ಅನೇಕ ಕಡೆ ಈ ರೀತಿ ನಡೆದಿದೆ. ಈ ನಷ್ಟಕ್ಕೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ. ಈ ಖಾದಿ ಬೋರ್ಡಿನಿಂದ ಆಗತಕ್ಕಂಥ ಪ್ರಯೋಜನವಾದರೂ ಏನು ? ಈ ಬೋರ್ಡಿನ ಬದಲಾಗಿ ರೂರಲ್ ಇಂಡಸ್ಟ್ರಿಯಲ್ ಕೋ-ಅಪರೇಟಿವ್ ಬ್ಯಾಂಕ್‌ಗಳ ಮೂಲಕ ಮತ್ತು ತಾಲ್ಲೂಕು ಬೋರ್ಡ್‌ಗಳ ಮೂಲಕ ಹಣ ಒದಗಿಸಬೇಕು. ಈ ರೀತಿ ಹಣ ಒದಗಿಸಿದರೆ ಅವುಗಳು ನಷ್ಟಕ್ಕೆ ಒಳಗಾಗುವುದಿಲ್ಲ.

ಇನ್ನು ಎನ್. ಇ. ಎಸ್. ಇಲಾಖೆಯ ಸಿಬ್ಬಂದಿಯ ವಿಷಯವಾಗಿ ಹೇಳಬೇಕಾದರೆ, ಅಲ್ಲಿಯ ಅಧಿಕಾರಿಗಳಿಗೆ ಕೆಲಸವೇ ಇಲ್ಲ. ಯಾವ ಅಭಿವೃದ್ಧಿ ಗ್ರಾಂಟುಗಳೂ ಇಲ್ಲ, ಈ ವಿಚಾರ ಸರ್ಕಾರದ ಗಮನಕ್ಕೂ ಬಂದಿರಬಹುದು. ಅವರಿಗೆ ಪ್ರತಿ ತಿಂಗಳು ಸಂಬಳ ಕೊಡುವುದು ಸರ್ಕಾರದ ಕೆಲಸವಾಗಿದೆ. ಅವರು ಓಡಾಡಲು ಜೀಪ್‌ಗಳನ್ನು ಕೊಟ್ಟಿದ್ದೀರಿ. ಆ ಜೀಪ್‌ಗಳನ್ನು ಓಡಿಸುವುದಕ್ಕೆ ಪೆಟ್ರೋಲ್ ಬೇರೆ ದಂಡ. ಇದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ತಾಲ್ಲೂಕ್ ಬೋರ್ಡಿನಲ್ಲಿರುವ ಅಧಿಕಾರಿಗಳೇ ಇವರ ಕೆಲಸಗಳನ್ನು ನೋಡಿಕೊಳ್ಳಬಹುದು. B.D.O. ನಾಲ್ಕು ಜನ ಅಧಿಕಾರಿಗಳ ಅಗತ್ಯವಿಲ್ಲವೆಂದು ರಿಪೋರ್ಟ್ ಮಾಡಿದರೂ ಮೇಲಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಆರು ತಿಂಗಳಾಯಿತು. ಎಷ್ಟು ಸಂಬಳ ಲುಕ್ಸಾನು ಆಯಿತು. ಈ ಲುಕ್ಸಾನನ್ನು ಸಂಬಂಧಪಟ್ಟ ಅಧಿಕಾರಿಯಿಂದ ವಸೂಲಿ ಮಾಡಿದರೆ ಆಗ ಕೆಲಸ ಜಾಗ್ರತೆ ಆಗುತ್ತದೆ. ಈ ವಿಚಾರವನ್ನು ಸರ್ಕಾರಕ್ಕೆ ತಿಳಿಸುತ್ತಿದ್ದರೂ ಸಹ ಈ ಎನ್.ಇ.ಎಸ್. ಇಲಾಖೆಯನ್ನು ರದ್ದು ಮಾಡಿಲ್ಲ. ಒಬ್ಬರು ಸಬ್ ಇಂಜನೀಯರ್ 1,800 ರೂಪಾಯಿ ಲಂಚ ತೆಗೆದುಕೊಂಡ ಈ ವಿಷಯವನ್ನು ಬೋರ್ಡ್ ಮೀಟಿಂಗಿನ ಮುಂದೆ ಹೇಳಿಕೆ ಕೊಟ್ಟಿದ್ದರೂ ಬಿ.ಡಿ.ಒ. ಗೆ ತಿಳಿಸಿದಾಗ ಅವರು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಅಧಿಕಾರಿಗಳು ಕೆಲವು ಆರ್ಡರ್‌ಗಳನ್ನು ತಮಗೆ ಇಷ್ಟ ಬಂದ ರೀತಿ ಮಾಡಿ ರೈತರಿಗೆ ತೊಂದರೆಕೊಡುತ್ತಿದ್ದಾರೆ. ಈ ಅಧಿಕಾರಿಗಳ ವಿರುದ್ಧ ಅಪೀಲ್ ಹೋದಾಗ ಈ ಅಧಿಕಾರಿಗಳು ಮಾಡಿರುವುದು ತಪ್ಪು ಎಂದು ಮೇಲಿನ ಅಧಿಕಾರಿಗಳಿಂದ ರುಜುವಾತಾದಾಗ, ರೈತರಿಗೆ ಆಗಿರುವ ಖರ್ಚು ವೆಚ್ಚಗಳನ್ನು ವಸೂಲ್ ಮಾಡುವಂತೆ ಈ ವಿಚಾರದಲ್ಲಿ ಸರ್ಕಾರದವರು ಸರಿಯಾಗಿ ಪರಿಶೀಲನೆ ಕಾನೂನು ಮಾಡಬೇಕಾದ್ದು ಅಗತ್ಯವಿದೆ.

ಇನ್ನು ಕೊನೆಯದಾಗಿ ಹೇಳುವುದಾದರೆ, ಆಡಳಿತ ಸುಧಾರಣೆಯಾಗಬೇಕಾಗಿದೆ. ಇದಕ್ಕೆ ಎಲ್ಲರೂ ಮನಸ್ಸು ಕೊಟ್ಟಿದ್ದಾರೆ. ನಾವು ಹೊಸದಾಗಿ ಬಂದಿದ್ದೇವೆ. ಅನೇಕ ವಿಚಾರಗಳನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. ನಮ್ಮ ನಾಯಕರು ಸಹ ಹೊಸ ರಕ್ತದವರು ಬರಬೇಕೆಂದು ಹೇಳಿದ್ದಾರೆ. ಅದರಂತೆ ಹೊಸ ರಕ್ತದವರು ಹೇಳಿರುವ ಸಲಹೆಗಳಿಗೆ ಗಮನ ಕೊಡಬೇಕು. ಈ ರೀತಿ ಮಾಡಿದರೆ ಹೊಸಬರಿಗೆ ಉಪಕಾರ ಮಾಡಿದಂತೆ ಆಗುತ್ತದೆಂದು ನಮ್ಮ ನಾಯಕರಲ್ಲಿ ಪ್ರಾರ್ಥನೆ ಮಾಡಿಕೊಂಡು, ನನ್ನ ಭಾಷಣ ಮುಗಿಸುತ್ತೇನೆ.

MR. DEPUTY SPEAKER.—The House will now rise to meet at 1 P.M. tomorrow.

The House adjourned at Six of the Clock to meet again at One of the Clock on Tuesday, the 27th June 1967.

WD 8629—GPB—500—11-7-67